ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 286ರ ಅನುಸಾರ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಕಲ್ಯಾಣ ಸಮಿತಿಗೆ 13 ಜನ ಸದಸ್ಯರನ್ನು ಚುನಾಯಿಸುವುದು.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 370(2)ರ ಅನುಸಾರ ವಸತಿ ಸೌಕರ್ಯಗಳ ಸಮಿತಿಗೆ 15 ಜನ ಸದಸ್ಯರನ್ನು ಚುನಾಯಿಸುವುದು.

1976ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ 21(1) (14)ನೇಕಲಂ ಮೇರೆಗೆ ಅವಶ್ಯಪಡಿಸರುವಂತೆ ಏಕ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದನುಸಾರ ಬೆಂಗಳೂರು ಸೆನೆಟ್‌ಗೆ 5 ಜನ ಸದಸ್ಯರನ್ನು ಚುನಾಯಿಸುವುದು.

1976ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವ ವಿದ್ಯಾನಿಲಯದ 21(1)(14)ನೇ ಕಲಂನ ಮೇರೆಗೆ ಅವಶ್ಯಪಡಿಸಿರುವಂತೆ ಮತದ ಮೂಲಕ ಅನುಪಾತದನುಸಾರವಾಗಿ ಕರ್ನಾಟಕ ವಿಶ್ಯವಿದ್ಯಾನಿಲಯದ ಸೆನೆಟ್‌ಗೆ 5 ಜನ ಸದಸ್ಯರನ್ನು ಚುನಾಯಿಸುವುದು.

ಕುವೆಂಪು ವಿಶ್ವವಿದ್ಯಾನಿಲಯಕ್ಕೆ 5 ಜನ ಸದಸ್ಯರನ್ನು ಚುನಾಯಿಸುವುದು.

ಮೈಸೂರು ವಿಶ್ವವಿದ್ಯಾನಿಲದ ಸೆನೆಟ್‌ಗೆ 5 ಜನ ಸದಸ್ಯರನ್ನು ಚುನಾಯಿಸುವುದು. ಕನ್ನಡ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಒಬ್ಬ ಸದಸ್ಯರನ್ನು ಚುನಾಯಿಸಬೇಕೆಂದು ಸಭೆಯು ಸೂಚಿಸುವುದು.

ಅಧ್ಯಕ್ಷರು:- ಪ್ರಸ್ತಾವವನ್ನು ಮಂಡಿಸಲಾಗಿದೆ. ಬೇರೆ ದಿನಾಂಕ ಯಾವುದೆಂಬುದರ ಬಗ್ಗೆ ನಂತರ ಮಾನ್ಯ ಸದಸ್ಯರಿಗೆ ಕಳುಹಿಸಿ ಕೊಡುತ್ತೇನೆ. ಈಗಾಗಲೇ ಹೇಳಿರುವ ಪ್ರಕಾರ, ನಾಳೆ ಉಪಸಭಾಧ್ಯಕ್ಷರ ಚುನಾವಣೆ ನಂತರ, ಮಾತನಾಡುವವರಾದ ಮೇಲೆ ಪುನ: ನವೆಂಬರ್ 11 ಮತ್ತು 12ನೇ ತಾರೀಖು ಸಭೆ ಸೇರುತ್ತದೆ. ಅಂದು ಮಾತನಾಡುವವರಾದ ನಂತರ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವದ ಮೇಲಿನ ಚರ್ಚೆ (ಮುಂದು)

ಶ್ರೀ ವಿಜಯಕುಮಾರ್ ಶೆಟ್ಟಿ (ಸೂರತ್ಕಾಲ್):- ಮಾನ್ಯ ಅಧ್ಯಕ್ಷರೇ ಮಾನ್ಯ ರಾಜ್ಯಪಾಲರು, 21ನೇ ಶತಮಾನಕ್ಕೆ ತೆರಳುತ್ತಿರುವ ಈ ಐತಿಹಾಸಿಕ ಸಂದರ್ಭದಲ್ಲಿ ರಾಜ್ಯ ಸರ್ಕಾರಕ್ಕಿರುವ ದೂರದೃಷ್ಟಿ, ಮುನ್ನೋಟಗಳನ್ನು ಕುರಿತು ವಿವರವಾಗಿ ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಈ ವಂದಾನಾ ನಿರ್ಣಯಕ್ಕೆ ನಾನು ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಒಂದೆಡೆ ಸ್ಪಷ್ಟ ಬಹುಮತ ನೀಡಿರುವ ನೀಡಿರುವ ರಾಜ್ಯದ ಮತದಾದರರು ಮಾನ್ಯ ಎಸ್.ಎಂ.ಕೃಷ್ಣರವರ ನೇತೃತ್ವದಲ್ಲಿ ನವ ಕರ್ನಾಟಕ ನಿರ್ಮಾಣಕ್ಕೆ ಆದೇಶ ನೀಡಿದ್ದಾರೆ. ಆದರೆ, ಮತ್ತೊಂದೆಡೆ 24 ಪಕ್ಷಗಳ ರಾಷ್ಟ್ರೀಯ ಪ್ರಜಾಸತ್ತಾತ್ಮಕ ರಂಗ ಅಲ್ಲಿ ಸ್ಥಿರ ಸರ್ಕಾರ ನೀಡಬಲ್ಲದೇ ಎಂಬ ಗೊಂದಲ ಕೂಡ ರಾಜ್ಯ ಜನ್ನತೆಯ ಮನಸ್ಸಿನಲ್ಲಿ ಆತಂಕ ಉಂಟು ಮಾಡಿದೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ, ಕೇಂದ್ರಸರ್ಕಾರ ತನ್ನ ಪ್ರಮುಖ ವಿಚಾರಣಾ ಸಂಸ್ಥೆಯಾದ ಸಿ.ಬಿ.ಐ.ಅನ್ನು ರಾಜಕೀಯವಾಗಿ ದುರುಪಯೋಗಪಡಿಸಿಕೊಳ್ಳುವುದರ ಕುರಿತು ವ್ಯಾಖ್ಯಾನ ಮಾಡಬೇಕಾಗಿತ್ತು, ಎಂಬುದು ನನ್ನ ಅನಿಸಿಕೆ, ಕೇವಲ ರಾಜಕೀಯ ಕಾರಣಗಳಿಗಾಗಿ ಸ್ವಾರ್ಥಕ್ಕಾಗಿ, ರಾಷ್ಟ್ರನಾಯಕ ††††† ಕುರಿತು ಸಲ್ಲಿಸಿರುವ ಚಾರ್ಜ್‌ಷೀಟಿನಲ್ಲಿ ಸೇರಿಸಿ, ಕೀಳು ರಾಜಕೀಯ ಮಾಡಿರುವುದನ್ನು

ಮಾನ್ಯ ರಾಜೀವ್‌ಗಾಂಧಿಯವರ ವಿಚಾರಧಾರೆಗಳಿಗೆ ಬದ್ಧರಾಗಿರುವ.....

(ಗೊಂದಲ)

ಶ್ರೀ ವಿಜಯಕುಮಾರ್ ಶೆಟ್ಟಿ:- ನಮ್ಮ ನಾಯಕರಾದ XXXಅನೇಕ ಕಾರ್ಯಕ್ರಮಗಳನ್ನು ಕೊಟ್ಟಿರುವುದರಿಂದ ಅವರ ಹೆಸರು ಅರ್ಧ ಚಂದ್ರಾಕಾರವಾಗಿ ಉಳಿದಿರುರುದು....

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು):- ಮಾನ್ಯ XXX ಹೆಸರನ್ನು ಅವರು ಹೇಳುತ್ತಿದ್ದಾರೆ.. (ಗೊಂದಲ) ಇದು ಕಡತಕ್ಕೆ ಹೋಗಬಾರದು..ಅದನ್ನು ತೆಗೆಸಿ ಹಾಕಬೇಕು..

(ಗೊಂದಲ)

ಶ್ರೀ ವಿಜಯಕುಮಾರ್ ಶೆಟ್ಟಿ: ಪ್ರಚಲಿತ ವಿಷಯಗಳನ್ನು ನಾವು ಹೇಳುತ್ತಿದ್ದೇವೆ, ಇದನ್ನು ವಿರೋಧ ಪಕ್ಷದವರು ಹೇಳುತ್ತಿದ್ದಾರೆ..

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ಮಾನ್ಯ ಗೌರವಾನ್ವಿತ ಸದಸ್ಯರು ಏನು ಮಾತನಾಡಿದರು ಎಂಬುದು ನಮಗೆ ಗೊತ್ತಾಗಲಿಲ್ಲ. ಸ್ಪಷ್ಟವಾಗಿ ಅವರು ಮತ್ತೊಮ್ಮೆ ಹೇಳಿದರೆ ನಾವು ಅದರಲ್ಲಿ ಏನಾದರೂ ತಕರಾರು ಇದ್ದರೆ ನಾವು ಅದರ ಬಗ್ಗೆ ಕ್ರಿಯಾಲೋಪ ಎತ್ತಿ ಮಾತನಾಡುತ್ತೇವೆ. ಆದ್ದರಿಂದ, ದಯಮಾಡಿ ಅವರು ಮತ್ತೊಮ್ಮೆ ಮಾತನಾಡಬೇಕು ಎಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವಿಜಯಕುಮಾರ್ ಶೆಟ್ಟಿ: ರಾಜ್ಯಪಾಲರ ಭಾಷಣದಲ್ಲಿ, ಕೇಂದ್ರಸರ್ಕಾರ ತನ್ನ ಪ್ರಮುಖ ವಿಚಾರಣಾ ಸಂಸ್ಥೆಯಾದ ಸಿ.ಬಿ.ಐ.ಅನ್ನು ರಾಜಕೀಯುವಾಗಿ ದುರುಪಯೋಗಪಡಿಕೊಳ್ಳುವುದರ ಕುರಿತು ವ್ಯಾಖ್ಯಾನ ಮಾಡಬೇಕಾಗಿತ್ತು ಎಂಬುದು ನನ್ನ ಅನಿಸಿಕೆ. ಕೇವಲ ರಾಜಕೀಯ ಕಾರಣಗಳಿಗಾಗಿ, ಸ್ವಾರ್ಥಕ್ಕಾಗಿ, ರಾಷ್ಟ್ರನಾಯಕ XXX ಮಾನ್ಯ ಹೆಸರನ್ನು ಬೋಫೋರ್ಸ್ ಕುರಿತು ಸಲ್ಲಿಸಿರುವ ಚಾರ್ಜ್‌ಷೀಟ್‌ನಲ್ಲಿ ಸೇರಿಸಿ, ಕೀಳು ರಾಜಕೀಯ ಮಾಡಿರುವುದನ್ನು, XXX ವಿಚಾರಧಾರೆಗಳಿಗೆ ಬದ್ಧರಾಗಿರುವ...

(ಗೊಂದಲ)

ಶ್ರೀ ವಿಜಯಕುಮಾರ್ ಶೆಟ್ಟಿ: ನಾವು ವಿರೋಧಪಕ್ಷದ ಮುಖಂಡರು ಮಾತನಾಡುವಾಗ ಅವರಿಗೆ ಸಂಪೂರ್ಣವಾದ ಸಹಕಾರವನ್ನು ನಾವು ಕೊಟ್ಟಿದ್ದೇವೆ. ನಾವು ಮಾತನಾಡುವಾಗ ಅವರು ಸಹ ನಮಗೆ ಸಹಕಾರ ಕೊಡಬೇಕು..

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧಪಕ್ಷದ ನಾಯಕರು):- ಇವತ್ತು ಅವರ ಉದ್ದೇಶ ಏನು ಎಂಬುದು ಗೊತ್ತಾಯಿತು. ಇವತ್ತು XXX ಹೆಸರನ್ನು ಚಾರ್ಜ್‌ಷೀಟ್‌ನಲ್ಲಿ ಸೇರಿಸಿದ್ದನ್ನು ಅದನ್ನು ಖಂಡನೆ ಮಾಡುವ ರೀತಿಯಲ್ಲಿ ಅವರು ತಮ್ಮ ಭಾವನೆಯನ್ನು ವ್ಯಕ್ತ

X ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿರುತ್ತದೆ.

ಪಡಿಸುತ್ತಿದ್ದಾರೆ. ಸಿ.ಬಿ.ಐ.ನವರು ಚಾರ್ಜ್‌ಷೀಟ್ಸ್ ಹಾಕಿದ್ದನ್ನು ಲೋಕಸಭೆಯಲ್ಲಿ ಇದರ ಬಗ್ಗೆ ಚರ್ಚೆಯಾಗಿದೆ. ರಾಜ್ಯದ ಪರಿಸ್ಥಿತಿ ಬಗ್ಗೆ ಮಾತನಾಡಲಿ.

ಅಧ್ಯಕ್ಷರು: ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ, ನಾನು ಅವರಿಗೆ ಈ ರೀತಿ ಮಾತನಾಡಿ ಎಂದು ಹೇಳುತ್ತೇನೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ: ಈ ರಾಜ್ಯದಿಂದ ಎಂ.ಪಿ.ಗಳು ಲೋಕಸಭೆಗೆ ಆರಿಸಿ ಹೋಗಿದ್ದಾರೆ, ಅವರು ಇದರ ಬಗ್ಗೆ ಅಲ್ಲಿ ಚರ್ಚೆ ಮಾಡುತ್ತಾರೆ. ಇವರು ಏಕೆ ಈ ವಿಷಯವನ್ನು ಇಲ್ಲಿ. ಮಾತನಾಡಬೇಕು?. ಅವರು ಈ ಸದನವನ್ನು ಏಕೆ ದುರುಪಯೋಗಪಡಿಸಕೊಳ್ಳಬೇಕು?..

(ಗೊಂದಲ)

ಅಧ್ಯಕ್ಷರು: ನಿನ್ನೆ ದಿವಸ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ ಮಾನ್ಯ ರಾಜ್ಯಪಾಲರ ಭಾಷಣದ ಪ್ರಸ್ತಾವದ ಮೇಲೆ ಮಾತ್ರ ಮಾತನಾಡಿ ಎಂದು ಸೂಚಿಸಿದ್ದೇನೆ. ತಮಗೂ ಕೂಡ ಈ ಸಂದರ್ಭದಲ್ಲಿ ಅದೇ ಮಾತನ್ನು ಹೇಳಬಯಸುತ್ತೇನೆ.

ಶ್ರೀ ಪಿ.ಜೀ.ಆರ್.ಸಿಂಧ್ಯಾ: ಮೊನ್ನೆ ನಾವು ಮಾತನಾಡುವಾಗ ಈ ಸದನದ ವೇಳೆಯಲ್ಲಿ ಒಂದು ರಚನಾತ್ಮಕವಾದ ಚರ್ಚೆಯನ್ನು ಮಾಡುತ್ತೇವೆಂದು ಹೇಳಿದ್ದೇವೆ. ಇಂಥ ಸಂದರ್ಭದಲ್ಲಿ ಮಾನ್ಯ ಸಭಾನಾಯಕರು ತಮಗೆ ಮಾರ್ಗದರ್ಶನ ಕೊಡಬೇಕು. ಈ ಸಭೆಯ ನಡವಳಿಕೆ ನಡೆಸತಕ್ಕಂಥ ಸಂದರ್ಭದಲ್ಲೂ ಕೂಡ ಅವರು ಮಾರ್ಗದರ್ಶನ ಕೊಡಬೇಕಾಗುತ್ತದೆ. XXX ಬಗ್ಗೆ ಅವರಾಗಲಿ ಅಥವಾ ಮತ್ತೊಬ್ಬರಾಗಲಿ ಮಾತನಾಡುವುದನ್ನು ಯಾರು ತಪ್ಪಿಸುವುದಕ್ಕೆ ಆಗುವುದಿಲ್ಲ.

ಇದು ತಪ್ಪು ಎಂದು ಕೂಡ ನಾನು ಹೇಳುವುದಿಲ್ಲ. ಅದೇ ರೀತಿಯಲ್ಲಿ ನಾವು ಕೂಡ ನೀವು ಮಾನ್ಯ ರಾಮಕೃಷ್ಣ ಹೆಗಡೆಯವರ ಬಗ್ಗೆ ಮಾತನಾಡಬಾರದು ಎಂದು ಹೇಳತಕ್ಕಂಥಾದ್ದು ತಪ್ಪು. ಮಾನ್ಯ ಎಲ್ಲಾ ಸದಸ್ಯರು, ಸದನದ ನಿಯಮಾವಳಿಗಳ ಪ್ರಕಾರ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ವಂದಾನಾ ನಿರ್ಣಯವನ್ನು ಕಳುಹಿಸತಕ್ಕಂಥ ವಿಚಾರದಲ್ಲಿ ತಿದ್ದುಪಡಿಯನ್ನು ಕಳುಹಿಸತಕ್ಕಂಥ ಹಕ್ಕು ಕೂಡ ಅವರಿಗೆ ಇದೆ. ಈಗಾಗಲೇ ಆ ಹಕ್ಕನ್ನು ಉಪಯೋಗಿಸಿಕೊಂಡು ನಾನು ಮತ್ತು ಮಾನ್ಯ ಸೋಮಶೇಖರ್‌ರವರು ಮತ್ತು ಮಾನ್ಯ ಬೈರೇಗೌಡರವರು ತಿದ್ದುಪಡಿಗಳನ್ನು ಮಾನ್ಯ ಕಾರ್ಯದರ್ಶಿಯವರ ಮುಖೇನ ತಮ್ಮ ಗಮನಕ್ಕೆ ತಂದಿರತಕ್ಕಂಥ ವಿಚಾರ ಕೂಡ ತಮಗೆ ಗೊತ್ತಿದೆ. ಆದರೆ ಅವರು ಯಾವ ಒಂದು ಉದ್ದೇಶವನ್ನು ಇಟ್ಟುಕೊಂಡು ಸಿ.ಬಿ.ಐ.ಅನ್ನು ಟೀಕೆ ಮಾಡುವುದರ ಜೊತೆಗೆ, ಅಥವ ನಮ್ಮ ದೇಶದ ಕ್ರಿಮಿನಲ್ ಪ್ರೊಸೀಜರ್ ಕೋಡ್ ಆಫ್ ಏನ್‌ಕ್ವಯರಿ ಏನಿದೆ ಇದರ ಬಗ್ಗೆ ಅವರು ಮಾತನಾಡತಕ್ಕಂಥದ್ದು ಸೂಕ್ತಾವಾದುದು ಅಲ್ಲ ಎಂದು ನಮ್ಮ ಅಭಿಪ್ರಾಯ. ಮಾನ್ಯ ಕೃಷ್ಣಾರವರು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಈ ಸಭೆಯ ನಾಯಕರು ಆಗಿದ್ದಾರೆ. ಇದರ ಜೊತೆಗೆ ಅವರು ಕಾಂಗ್ರೆಸ್ ಪಕ್ಷದ ನಾಯಕರು ಸಹ ಆಗಿದ್ದಾರೆ. ಆದ್ದರಿಂದ ಅವರು ಈ ಸದನದ ಹೊರಗೆ ಹೇಳಿಕೆ ಮಾಡಿರತಕ್ಕಂಥದ್ದು ಸರಿಯಲ್ಲವೆಂದು ಅವರು ಮೊನ್ನೆಯೇ ಹೇಳಿದ್ದಾರೆ. ಇದರ ಬಗ್ಗೆ ನಾವು ತಕರಾರು ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಈ ಸಂದರ್ಭದಲ್ಲಿ ಈ ಸದನದಲ್ಲಿ ಕೇಂದ್ರದಲ್ಲಿ ಮತ್ತೊಂದು ಸರ್ಕಾರ

Xಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿರುತ್ತದೆ.

ಮಾಡಿರತಕ್ಕಂಥ ಕ್ರಮ ದುರುದ್ದೇಶದಿಂದ ಕೂಡಿದೆ ಎಂದು ಹೇಳತಕ್ಕಂಥ ಒಂದು ನಿರ್ಣಯವನ್ನು ತೆಗೆದು ಕೊಳ್ಳಬೇಕೆಂದು ಹೇಳತಕ್ಕಂಥದ್ದು ಸೂಕ್ತವಾದುದಲ್ಲ, ಸಾಧುವಾದುರಲ್ಲಿ. ಅದನ್ನು ದಯಮಾಡಿ ಈ ಕಡತಕ್ಕೆ ಹೋಗದೇ ಇರುವಂತೆ ಮಾಡಬೇಕು ಎಂದು ತಮ್ಮಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧಪಕ್ಷದ ನಾಯಕರು):- XXXಬಗ್ಗೆ ಸಿ.ಬಿ.ಐ. ಸ್ವತಂತ್ರವಾಗಿ ತನಿಖೆ ನಡೆಸತಕ್ಕಂಥ ಒಂದು ಸ್ವತಂತ್ರವಾದ ಸಂಸ್ಥೆ. ಇವತ್ತು ಅವರು ಯಾರ ಮೇಲೆ ಚಾರ್ಜ್‌ಷೀಟ್ ಹಾಕಬೇಕು, ಯಾರ ಮೇಲೆ ಹಾಕಬಾರದು ಎಂಬುದು ಅವರಿಗೆ ಬಿಟ್ಟಂತಹ ಡಿಸ್ಕ್ರಿಶನ್‌ರಿ ಪವರ್. ಇವತ್ತು ಅದಕ್ಕೆ ಕೇಂದ್ರ ಸರ್ಕಾರ ಇನ್‌ವೆಸ್ಟಿಗೇಷನ್ ಮಾಡುತ್ತಿದೆ, ಅವರು ಅವರ ಹೆಸರು ಪ್ರಸ್ತಾಪವಾಗುವ ರೀತಿಯಲ್ಲಿ ಮಾಡುತ್ತಿದೆ ಎನ್ನುವಂತಹ ಏನೊಂದು ದುರುದ್ದೇಶ ಇಟ್ಟುಕೊಂಡು ಇವರು ಹೇಳಿಕೆ ಕೊಡುತ್ತಿದ್ದಾರೆ, ಇದು ಈ ಸದನದಲ್ಲಿ ಚರ್ಚೆಗೆ ಗ್ರಾಸ್‌ವಾಗುವ ವಸ್ತುವಲ್ಲ. ಆದ್ದರಿಂದ ಮಾನ್ಯ ಸದಸ್ಯರು ಏನು ಆ ವಿಷಯ ಪ್ರಸ್ತಾಪಿಸಿದ್ದಾರೆ ಅದನ್ನು ಕಡತದಿಂದ ತೆಗೆದು ಹಾಕಬೇಕೆಂದು ಕೋರುತ್ತೇನೆ. ಏಕೆಂದರೆ, ಆ ವಿಷಯ ಇಲ್ಲಿ ಚರ್ಚಿಯಗತಕ್ಕಂಥದ್ದು ಇಲ್ಲ.

ಅಧ್ಯಕ್ಷರು: ನಾನು ಅದನ್ನು ನೋಡಿ ಪರಿಶೀಲಿಸುತ್ತೇನೆ.

(ಗೊಂದಲ)

ಶ್ರೀ ವಿಜಯಕುಮಾರ್ ಶೆಟ್ಟಿ: ನಾನು ಯಾವತೂ ಕೂಡ ಸಿ.ಬಿ.ಐ.ಅದನ್ನು ದೂರುವುದಿಲ್ಲ. ನಾನು ಏನು ಹೇಳುತ್ತೇನೆಂದರೆ, ಕೇಂದ್ರಸರ್ಕಾರದವರು ಒತ್ತಡ ತಂದು, ಶಿಫಾರಸ್ಸು ತಂದು, ಇವರ ಹೆಸರನ್ನು ಹಾಕಿದ್ದಾರೆಂದು ಮಾತ್ರ ನಾನು ಹೇಳಬಯಸಿದ್ದು...

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಈ ಸದನದ ಸಭಾನಾಯಕರು ಆಗಿರುವ ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ವಿಶ್ಲೇಷಣೆ ನೀಡಬೇಕು.

ಅಧ್ಯಕ್ಷರು: ಇಲ್ಲ ಈಗ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ : ತಮ್ಮ ಪ್ರಕಾರ ನಾಳೆಯಿಂದ ಚಾರ್ಜ್‌ಷೀಟ್ ಹಾಕಿರುವವರನ್ನು ಕೈಬಿಡುವುದಕ್ಕೆ ಹೇಳೋಣವೆ? ಏಕೆ ಅವರು ಈ ರೀತಿ ಮಾತನಾಡುತ್ತಾರೆ? ಮಾನ್ಯ ರಾಜ್ಯಪಾಲರ ಭಾಷಣ ಅಂದರೆ ಅದು ಸರ್ಕಾರದ ನೀತಿ. (ಗೊಂದಲ) ಮಾನ್ಯ ಸಭಾ ನಾಯಕರೇ, ನೀವು ಇದನ್ನು ಒಪ್ಪುತ್ತೀರಾ?

ಶ್ರೀ ಎಸ್.ಓ. ಮುದ್ದೇಹನುಮೇಗೌಡ ಹದಿನೈದು ವರ್ಷ ಇನ್‌ವೆಸ್ಟಿಗೇಷನ್ ಮಾಡಿ ಚಾರ್ಜ್ ಷೀಟ್ ಹಾಕುವಂತಹ ಕೇಸ್ ಇದಾಗಿತ್ತೆ?

ಅಧ್ಯಕ್ಷರು: ನೋಡಿ ವಿಜಯಕುಮಾರ್ ಶೆಟ್ಟಿಯವರೇ, ನಾನು ಈಗಾಗಲೇ ಹೇಳಿದಂತೆ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಏನು ಮಾತನಾಡಬೇಕು ಅದನ್ನು ಮಾತ್ರ ಮಾತನಾಡಿ.

ಶ್ರೀ ಯು.ಆರ್.ಸಭಾಪತಿ: ಅನೇಕರು ಅವರಿಗೆ ಬೇಕಾದ ಎಲ್ಲಾ ವಿಷಯ ಮಾತನಾಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ದಯಮಾಡಿ ಆ ವಿಷಯ ಕಡತದಿಂದ ತೆಗೆದು ಹಾಕಿಸಿ.

Xಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಅಧ್ಯಕ್ಷರು: ನಾನು ನೋಡುತ್ತೇನೆ. ನೋಡಿ ತೆಗೆಸಿ ಹಾಕೋಣ.

(ಗೊಂದಲ)

ಶ್ರೀ ಹೆಚ್.ಎಸ್. ಶಂಕರ್ ಲಿಂಗೇಗೌಡ:- ದಯಮಾಡಿ ಮಾನ್ಯ ಸಭಾ ನಾಯಕರು ಆ ಮಾನ್ಯ ಸದಸ್ಯರಿಗೆ ತರಬೇತಿ ಕೊಡಲಿ. ಅವರಿಗೆ ಇಲ್ಲಿ ಹೇಗೆ ಮಾತನಾಡಬೇಕು ಎಂಬುದನ್ನು ತಿಳಿಸಿ ಕೊಡಲಿ.

ಅಧ್ಯಕ್ಷರು: ಕೊಡಿಸೋಣ, ಎಲ್ಲಾ ಸದಸ್ಯರಿಗೂ ತರಬೇತಿ ಕೊಡಿಸೋಣ.

ಶ್ರೀ ವಿಶ್ವೇಶ್ವರ ಹೆಗಡೆ: ಆಡಳಿತದ ಪಕ್ಷದವರು ಈ ರೀತಿ ಅನಗತ್ಯ ವಿಷಯದ ಬಗ್ಗೆ ಮಾತನಾಡುವುದೆ? ಕರ್ನಾಟಕದಿಂದ ಎಂ.ಪಿ.ಗಳು ಲೋಕಸಭೆಗೆ, ಆಯ್ಕೆಯಾಗಿ ಹೋಗಿದ್ದಾರೆ, ಅಲ್ಲಿ ಈ ಬಗ್ಗೆ ಅವರು ಚರ್ಚಿಸುತ್ತಾರೆ. ಆದ್ದರಿಂದ ಮಾನ್ಯ ಸದಸ್ಯರು ಪ್ರಸ್ತಾಪಿಸಿರುವುದನ್ನು ಕಡತದಿಂದ ತೆಗೆದುಹಾಕಿಸಬೇಕು.

ಅಧ್ಯಕ್ಷರು: ಆಯಿತು ಅದನ್ನು ನೋಡಿ ತೆಗೆಸೋಣ.

ಶ್ರೀ ಕರಿಯಣ್ಣ : ನಮ್ಮ ವಿರೋಧಪಕ್ಷದ ನಾಯಕರು ಈ ಸಭೆಯಲ್ಲಿ ಪಥಮವಾಗಿ ಮಾತನಾಡುತ್ತಾ ಕೇಂದ್ರ ಸರ್ಕಾರದಲ್ಲಿ ಆಡಳಿತ ನಡೆಸತಕ್ಕಂಥ ಅವರ ನಾಯಕರುಗಳನ್ನು ಹೊಗಳಿ ಅದನ್ನು ಸಹ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಬೇಕಾಗಿತ್ತು. ಕಾಶ್ಮೀರದಲ್ಲಿ ಒಂದು ಉತ್ತಮವಾದ ಚುನಾವಣೆ ಮಾಡಿದ್ದಾರೆ, ಇದನ್ನು ಹೊಗಳಬೇಕಾಗಿತ್ತು, ಎಂದು ಅನೇಕ ವಿಷಯಗಳನ್ನು ಅವರು ಹೇಳಿದ್ದಾರೆ. ಆದರೆ ಮಾನ್ಯ ರಾಜೀವ್‌ಗಾಂಧಿಯವರು ಏನು ಮಾಡಿದರು, ಏನು ಆಯಿತು, ಇದನ್ನು ಮಾಡಬಾರದಾಗಿತ್ತು ಎನ್ನತಕ್ಕಂಥದ್ದರ ಬಗ್ಗೆ ಪ್ರಸ್ತಾಪ ಮಾಡುವುದರಲ್ಲಿ ಏನು ತಪ್ಪು ಇದೆ ಸ್ವಾಮಿ? ಮಾನ್ಯ ಹಿರಿಯ ನಾಯಕರಾದ ಸಿಂಧ್ಯಾರವರು, ಮಾನ್ಯ ರಾಜೀವ್‌ಗಾಂಧಿಯವರು ಅನೇಕ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆಂದು ಹೇಳಿದರು, ಹೀಗಿದ್ದರೂ ಅವರ ಹೆಸರನ್ನು ಕಡತದಿಂದ ತೆಗೆದು ಹಾಕಬೇಕು ಎಂದರೆ ಏನರ್ಥ? ಅವರು ಮಾತನಾಡುವಂಥ ಸಂದರ್ಭದಲ್ಲಿ ನಾವು ಬಾಯಿ ಮುಚ್ಚಿಕೊಂಡು ಚಕಾರವೆತ್ತದ ಹಾಗೆ ಕುಳಿತಿದ್ದೇವೆ. ಆದ್ದರಿಂದ ಯಾವುದೇ ಕಾರಣಕ್ಕಾಗಿ ಇದನ್ನು ಕಡತದಿಂದ ತೆಗೆಯಬಾರದು ಎಂದು ನಾನು ವಿನಂತಿಸಿಕೊಳ್ಳುತ್ತೇನೆ. ಮಾನ್ಯ ವಿಜಯಕುಮಾರ್ ಶೆಟ್ಟಿಯವರಿಗೆ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ವಿಜಯಕುಮಾರ್ ಶೆಟ್ಟಿಯವರೆ ತಾವು ತಮ್ಮ ಭಾಷಣವನ್ನು ಮುಂದುವರೆಸಿ.

ಶ್ರೀ ವಿಜಯಕುಮಾರ್ ಶೆಟ್ಟಿ: ನಿನ್ನೆ ತಾನೇ ಮಾನ್ಯ ಪಿ.ಜಿ.ಆರ್.ಸಿಂಧ್ಯಾರವರು ನಮ್ಮ ಸಿ.ಡಬ್ಲ್ಯೂ.ಸಿ.ಯಲ್ಲಿ ಏನು ಚರ್ಚೆಯಾಗುತ್ತಿದೆ ಎಂಬುದರ ಬಗ್ಗೆ ಅವರು ಮಾತನಾಡಿದರು. ನಾನು ನಮ್ಮ ರಾಷ್ಟ್ರದ ನಾಯಕರ ಬಗ್ಗೆ ಮಾತನಾಡುವುದಕ್ಕೆ ಹೋದರೆ ಇವರು ಇಷ್ಟೊಂದು ಗಲಾಟೆ ಮಾಡಿದರೆ ಹೇಗೆ? ಅವರು ಮಾನ್ಯ ವಾಜಪೇಯಿ, ಮಾನ್ಯ ಅಡ್ವಾನಿ, ಮತ್ತೊಬ್ಬರನ್ನು ಕುರಿತು ಈ ಸದನದಲ್ಲಿ ಮಾತನಾಡಿದರು. ನಾವು ರಾಷ್ಟ್ರದ ನಾಯಕರನ್ನು, ಪ್ರಪಂಚದ ನಾಯಕರಾದ

ಮಾನ್ಯ ರಾಜೀವ್‌ಗಾಂಧಿಯವರನ್ನು ಕುರಿತು ಇಲ್ಲಿ, ಏಕೆ ಮಾತನಾಡಬಾರದು? ಇವತ್ತು ನಾವು ಕಂಪ್ಯೂಟರ್‌ನಲ್ಲಿ ವಿಜಯ ಸಾಧಿಸರಾಬೇಕಾದರೆ ಅದಕ್ಕೆ ಮೂಲ ಕಾರಣ ಮಾನ್ಯ ರಾಜೀವ್ ಗಾಂಧಿಯವರು. ಇದನ್ನು ತಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಕಳೆದ ನಾಲ್ಕು ದಿವಸಗಳಿಂದ ನಾವೇನು ಕಂಪ್ಯೂಟರ್ ಎಂದು ಕೂಗಾಡುತ್ತಿದ್ದೇವೆ ಇದಕ್ಕೆ ಮುಖ್ಯ ಕಾರಣ ಮಾನ್ಯ ರಾಜೀವ್ ಗಾಂಧಿ ಎನ್ನುವುದನ್ನು ಮರೆಯಬಾರದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳಿಗೆ ಸಮಾನವಾದ ಜವಾಬ್ದಾರಿ ಖಂಡಿತವಾಗಲೂ ಇದೆ. ಈ ಹಿಂದೆ ಉತ್ತರ ಪ್ರದೇಶ, ಬಿಹಾರ ಶಾಸನ ಸಭೆಗಳಲ್ಲಿ ಗಲಾಟೆಯಾಗಿರುವ ವಿಚಾರ ಇಂದು ನೆನಪಿಗೆ ಬರುತ್ತಿದೆ, ಇದು ಸರಿಯಲ್ಲ ಎಂಬುದು ನನ್ನ ಅಭಿಪ್ರಾಯ. ಅದೇ ರೀತಿಯಲ್ಲಿ ಮಾನ್ಯ ವಿರೋಧಪಕ್ಷದ ನಾಯಕರ ಆಯ್ಕೆ ಪ್ರಸಂಗದಲ್ಲಿ, ಬಹಳ ಶಿಸ್ತಿನ ಪಕ್ಷ ಎಂದು ಬಿ.ಜೆ.ಪಿ. ಯವರು ಹೇಳಿಕೊಂಡು ಬರುತ್ತಿದ್ದಾರೆ. ಅದರ ಕಾರ್ಯಾಲಯದಲ್ಲಿ ಮೊನ್ನೆ ನಡೆದಿರತಕ್ಕಂಥ ಘಟನೆಗಳನ್ನು ಪುನಃ ವಿಧಾನಸಭೆಯಲ್ಲಿ ತರಬೇಡಿ ಎಂದು ತಮ್ಮ ಮೂಲಕ ಅವರಿಗೆ ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ.

4.20 ಪಿ.ಎಂ

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ:- ಮಾನ್ಯ ಸಭಾನಾಯಕರು ಇದನ್ನು ಗಮನಿಸಿ, ಮಾನ್ಯ ಸದಸ್ಯರಿಗೆ ತಾವೇ ಮಾರ್ಗದರ್ಶನ ಕೊಡಬೇಕು. ಇದು ಚುನಾವಣೆ ಸಭೆಯಲ್ಲ. ಇದು ಕರ್ನಾಟಕ ವಿಧಾನಸಭೆ. ರಾಷ್ಟ್ರದ ಆಗುಹೋಗುಗಳಿಗೆ ಗೌರವಯುತವಾಗಿ, ಜವಾಬ್ದಾರಿಯುತವಾಗಿ ಸ್ಪಂದಿಸಬೇಕಾದಂಥ ಜವಾಬ್ದಾರಿ ಈ ಸದನದ ಸದಸ್ಯರಿಗೆ ಇದೆ. ಮಾನ್ಯ ಸದಸ್ಯರು ಮಾತನಾಡುತ್ತಿರುವುದನ್ನು ನೋಡಿದರೆ...

(ಗೊಂದಲ)

ಶ್ರೀ ಯು.ಆರ್.ಸಭಾಪತಿ:- ಪೊಲೀಸರ ತಲೆ ಒಡೆದು ಹೋಗಿರುವ ಪ್ರಕರಣಗಳನ್ನು ನಾವೆಲ್ಲಾ ನೋಡಿದ್ದೇವೆ. ಇದು ಪತ್ರಿಕೆಯಲ್ಲಿಯೂ ಸಹ ಬಂದಿದೆ. ಇಂಥ ಒಂದು ಗಲಾಟೆಯನ್ನು ನಾವು ಎಂದೂ ಸಹ ನೋಡಿರಲಿಲ್ಲ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ:- 1990ನೇ ಇಸವಿಯಲ್ಲಿ ನೀವು ಸಹ ಹೊಡೆದಾಡಿರುವುದನ್ನು ನಾವು ನೋಡಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ:- ನೀವು ಸದನದಲ್ಲಿ ಒಬ್ಬೊರಿಗೊಬ್ಬರು ಹೊಡೆದಾಡಿರುವುದನ್ನು ಇಲ್ಲಿ ಪ್ರಸ್ತಾಪ ಮಾಡಲೆ? ನೀವು ಹೇಗೆ ಹೊಡೆದಾಡಿದ್ದೀರಿ ಎಂಬುದು ನಮಗೂ ಗೊತ್ತಿದೆ.

ಶ್ರೀ ಅರಗ ಜ್ಞಾನೇಂದ್ರ:- ಈ ರೀತಿಯ ಗಲಾಟೆ ಹಿಂದೆ ನಡೆದಿದೆ. ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗ ಮಾನ್ಯ ಮುಖ್ಯಮಂತ್ರಿಗಳು ಓಡಿ ಬಂದು ನನಗೆ ರಕ್ಷಣೆ ಇಲ್ಲವೆಂದು ಹೇಳುತ್ತಿದ್ದರು. ಆದ್ದರಿಂದ ಈ ರೀತಿ ಮಾಡಬಾರದೆಂದು ತಾವು ಅವರಿಗೆ ಹೇಳಬೇಕು.

ಶ್ರೀ ಎಂ.ಮಹದೇವ್:- ಮಾನ್ಯ ಅಧ್ಯಕ್ಷರೆ, ಬಿ.ಜೆ.ಪಿ. ಯಲ್ಲಿ ಆದಂಥ ಗಲಾಟೆಯಿಂದ

ಇಡೀ ಸದನದ ಸದಸ್ಯರಿಗೆಲ್ಲಾ ಅವಮಾನ ಮಾಡಿದಂತೆ ಆಗಿದೆ. ಆದ್ದರಿಂದ ಅದರ ಬಗ್ಗೆ ತನಿಖೆ ಆಗಲೇ ಬೇಕಾಗಿದೆ. ಏಕೆಂದರೆ ಈ ಸಮಸ್ಯೆಯನ್ನು ಅವರೇ ಪ್ರಾರಂಭ ಮಾಡಿರುವುದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ...

ಅಧ್ಯಕ್ಷರು:- ಮಾನ್ಯ ವಿಜಯಕುಮಾರ್ ಶೆಟ್ಟಿಯವರೆ, ತಮ್ಮ ಭಾಷಣವನ್ನು ಪ್ರಾರಂಭ ಮಾಡಿ.

ಶ್ರೀ ವಿಜಯಕುಮಾರ್ ಶೆಟ್ಟಿ:- ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ದಯವಿಟ್ಟು ತನಿಖೆ ಮಾಡಿಸಬೇಕು. ಏಕೆಂದರೆ, ನಾವು ನಾಲ್ಕು ದಿವಸಗಳಷ್ಟು ತಡವಾಗಿ ಮಂತ್ರಿ ಮಂಡಲವನ್ನು ರಚನೆ ಮಾಡಿದ್ದಕ್ಕೆ ಅವರು ಆಕಾಶವನ್ನೆ ಭೂಮಿಗೆ ಇಳಿಸಿದ್ದಾರೆ. ಇದ ಅತ್ಯಂತ ಗಮಹನವಾದಂಥ ವಿಷಯ. ಬಹುಶ: ಸ್ವಾತಂತ್ರ್ಯ ಸಿಕ್ಕಿದ ನಂತರ ಯಾವ ಪಕ್ಷದಲ್ಲಿಯೂ ಇಂಥ ಒಂದು ಘಟನೆ ನಡೆದಿಲ್ಲ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಬಿಜೆಪಿ ಬಹಳ ಶಿಸ್ತಿನ ಪಕ್ಷ ಎಂದು ಹೇಳುತ್ತಾರೆ, ಇದೇನಾ ಇವರು ಮಾಡುತ್ತಿರುವುದು?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ:- ಹಿಂದೆ ನಿಮ್ಮ ಕಾಂಗ್ರೆಸ್ ಸರ್ಕಾರದಲ್ಲಿ ಮುಖ್ಯ ಮಂತ್ರಿಗಳು ಆಗಬೇಕಾದಾಗ ನಿಮ್ಮ ಕಡೆಯವರು ಸದನದಲ್ಲಿ ಏನೇನು ಮಾಡಿದರು ಎಂಬುದು ರಾಜ್ಯದ ಜನತೆಗೆ ಗೊತ್ತಿದೆ ಮತ್ತು ಅದು ಸರ್ಕಾರಿ ದಾಖಲೆಯಲ್ಲಿದೆ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ:- ಇವರೆಲ್ಲಾ ನಮಗೆ ಬುದ್ಧಿ ಹೇಳುವುದಕ್ಕೆ ಬರುತ್ತಾರೆ;

ಅಧ್ಯಕ್ಷರು:- ನೆನ್ನೆ ಮತ್ತು ಮೊನ್ನೆ ನಿಮ್ಮ ಸದಸ್ಯರು ಮಾತನಾಡಿದಂಥ ಸಂದರ್ಭದಲ್ಲಿ ಮಂತ್ರಿಮಂಡಲ ರಚನೆಯ ಬಗ್ಗೆ ಏನೇನು ಕಾಮೆಂಟ್ಸ್ ಮಾಡಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ, ಅವರು ಮಾತನಾಡುವುದರಲ್ಲಿ ತಪ್ಪೇನು ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ:- ನೀವೇ ಈ ರೀತಿ ಹೇಳಿದರೆ ನಮಗೆ ಬಹಳ ಕಷ್ಟವಾಗುತ್ತದೆ. ತಾವು ಬಹಳ ಜವಾಬ್ಧಾರಿಯುತ ಸ್ಥಾನದಲ್ಲಿ ಕುಳಿತುಕೊಂಡು ಈ ರೀತಿ ಹೇಳಬಾರದು.

ಶ್ರೀ ಎಚ್.ಎಸ್.ಶಂಕರಲಿಂಗೇಗೌಡ:- ಮಾನ್ಯ ಸಭಾಧ್ಯಕ್ಷರೆ, ನೀವು ಆ ಸ್ಥಾನದಲ್ಲಿ ಕುಳಿತುಕೊಂಡಿರುವುದಿಂದ ತಾವು ಯಾರ ಪಕ್ಷಕ್ಕೂ ಸೇರಿದವರಲ್ಲ. ನಿಷ್ಪಕ್ಷಪಾತ ವಾದಂಥ ತೀರ್ಮಾನವನ್ನು ತಾವು ತೆಗೆದುಕೊಳ್ಳಬೇಕು...

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೆ, ತಾವು ಕೊಟ್ಟಿರತಕ್ಕಂಥ ರೂಲಿಂಗ್‌ನ್ನು ಪುನರ್ ಪರಿಶೀಲನೆ ಮಾಡಬೇಕು.

ಶ್ರೀ ಯು.ಆರ್.ಸಭಾಪತಿ:- ಸ್ವಲ್ಪವಾದರೂ ನಿಮಗೆ ಆತ್ಮಗೌರವ ಇದ್ದರೆ ಮೊನ್ನೆ ನಡೆದ

ಘಟನೆಗೆ ವಿಷಾದ ಸೂಚಿಸಿಕೊಂಡು ನಮ್ಮ ಜೊತೆ ಸಹಕರಿಸಿ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಚಿಂತನೆ ಏನೆಂದರೆ, ಇವತ್ತು ಬಹಳ ಸಕ್ರೀಯವಾಗಿ, ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬೇಕಾದ ವಿರೋಧಪಕ್ಷದವರು ಜನತಂತ್ರ ವ್ಯವಸ್ಥೆಯಲ್ಲಿ ನಾಯಕನನ್ನು ಆಯ್ಕೆ ಮಾಡತಕ್ಕಂಥ ಸಂದರ್ಭದಲ್ಲಿ ಉಂಟಾದ ಗಲಭೆಯ ಹಿನ್ನಲೆಯಲ್ಲಿ ಅವರು ವಿರೋಧ ಪಕ್ಷದಲ್ಲಿದ್ದುಕೊಂಡು ನಮ್ಮ ಸರ್ಕಾರಕ್ಕೆ ಪರಿಣಾಮಕಾರಿಯಾದ ಕೆಲವು ಸಲಹೆ ಸೂಚನೆಗಳನ್ನು ಕೊಡತಕ್ಕಂಥ ಮತ್ತು ನಾವು ಎಲ್ಲಿ ತಪ್ಪು ಮಾಡುತ್ತೇವೆ ಅಂಥ ಕಡೆ ಅವರು ಸರಿ ಮಾಡತಕ್ಕಂಥ ಒಂದು ಶಕ್ತಿ ಅವರಿಗೆ ಇದೆಯೇ ಎನ್ನುವ ಒಂದು ಸಮಸ್ಯೆಯ ಹಿನ್ನಲೆಯಲ್ಲಿ ಇವತ್ತು ಸದಸ್ಯರು ಮಾತನಾಡುತ್ತಿದ್ದಾರೆಯೇ ಹೊರತು ಬೇರೇನೂ ಇಲ್ಲ.

ಶ್ರೀ ವಿಜಯಕುಮಾರ್ ಶೆಟ್ಟಿ:- ಅವರ ಪಕ್ಷದಲ್ಲಿರುವ ಒಬ್ಬ ಹಿರಿಯ ಸದಸ್ಯರನ್ನು ಇವತ್ತು ಸಸ್ಪೆಂಡ್ ಮಾಡುವುದಕ್ಕೆ ಹೊರಟ್ಟಿದ್ದಾರೆ, ಇದು ಬಹಳ ಬೇಸರವಾದಂಥ ವಿಷಯ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ತಾವು ನೀಡಿರತಕ್ಕಂಥ ರೂಲಿಂಗ್‌ನ್ನು ಪುನರ್ ಪರಶೀಲನೆ ಮಾಡಬೇಕೆದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ, ಮಂತ್ರಿಮಂಡಲದ ಸದಸ್ಯರ ಬಗ್ಗೆ ನಾವ್ಯಾರು ಟೀಕೆ ಮಾಡಿಲ್ಲ. ಮಂತ್ರಿ ಮಂಡಲದ ಗ್ರಾಮದ ಬಗ್ಗೆ ನಾವು ಏಕೆ ಯೋಜನೆ ಮಾಡಿದ್ದೇವೆಂದರೆ, ಹಿಂದೆ ದೊಡ್ಡ ಮಂತ್ರಿಮಂಡಲವನ್ನು ನಾವು ಸಹ ಮಾಡಿದ್ದೇವು, ಈಗ ಅವರು ಸಹ ಮಾಡಿದ್ದಾರೆ; ಈ ಮಂತ್ರಿಮಂಡಲ ಗಾತ್ರದಿಂದ ನೇರವಾಗಿ ಜನರ ಹಣ ಖರ್ಚಾಗುತ್ತದೆ ಎನ್ನತಕ್ಕಂಥ ದೃಷ್ಟಿಯಿಂದ ಹೇಳುತ್ತಿದ್ದೇವೆಯೇ ಹೊರತು ಬಾಕಿ ಬೇರೆ ದೃಷ್ಟಿಯಿಂದಲ್ಲ. ತಾವು ಆ ಸ್ಥಾನದಲ್ಲಿ ಕುಳಿತುಕೊಂಡು ಏನು ಹೇಳಿತುದರೂ,That becomes final and that becomes percedent for so many Houses in the Country. ಆದ್ದರಿಂದ, ತಾವು ದಯವಿಟ್ಟು ಅದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ. ಇಲ್ಲದೇ ಹೋದರೆ ನೀವು ನಿಷ್ಪಕ್ಷಪಾತವಾಗಿ, ನ್ಯಾಯಾಧೀಶರಂತೆ ನಡೆದುಕೊಳ್ಳತಕ್ಕಂಥವರು, ನಮ್ಮನ್ನೆಲ್ಲಾ ಕರೆದು ಗೌರವದಿಂದ ವಿಶ್ವಾಸದಿಂದ ನೋಡುತ್ತಿದ್ದೀರಿ. ದಯವಿಟ್ಟು ತಾವು ಕೊಟ್ಟಿರತಕ್ಕಂಥ ರೂಲಿಂಗ್‌ನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಕಾಂಗ್ರೆಸಿನ ಕೆಲವು ಸದಸ್ಯರು ಏನು ಹೇಳುತ್ತಿದ್ದಾರೆಂದರೆ, ಅವರ ಪಕ್ಷದ ಸಂಸ್ಕೃತಿಯೇ ದಿನ ಜಗಳವಾಡುವುದು, ಬಿಜೆಪಿಯವರು ಅಪರೂಪಕ್ಕೆ ಒಂದು ಸಲ ಜಗಳ ಮಾಡಿದ್ದಾರೆ, ಅದು ಸರಿಯಲ್ಲವೆಂದು ಆಡಳಿತ ಪಕ್ಷದವರು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎಂ.ಮಹದೇವ್:- ಮಾನ್ಯ ಸಿಂಧ್ಯರವರ ಸರ್ಕಾರ ಮೂರು ವರ್ಷದಿಂದ ಬರೀ ಜಗಳವಾಡುವುದನ್ನು ಬಿಟ್ಟರೆ ಬೇರೆನನ್ನೂ ಮಾಡಿಲ್ಲ. ಮಾನ್ಯ ಸಿಂಧ್ಯರವರ ಜಗಳ ಪ್ರಿಂಟ್ ಆಗಿದೆ, ಬೇಕಾದರೆ ದಾಖಲೆ ತೆಗೆಸಿ ನೋಡಬಹುದು.

(ಗೊಂದಲ)

ಶ್ರೀ ಯು.ಆರ್.ಸಭಾಪತಿ:- ಮೊನ್ನೆ ಬಿಜೆಪಿಯವರೆಲ್ಲರೂ ತಮ್ಮ ಮಾನವನ್ನು ಹರಾಜು ಹಾಕಿಕೊಂಡಿರುವುದು ಚರಿತ್ರೆಯಲ್ಲಿ ಬಂದಿದೆ.

ಶ್ರೀ ಬಿ.ರಮಾನಾಥ ರೈ:- ಮಾನ್ಯ ವಿರೋಧಪಕ್ಷದವರಿಗೆ ಟ್ರೈನಿಂಗ್ ಕೊಡಬೇಕು. ಪ್ರಮಾಣ ವಚನ ಮಾಡುವಂಥ ಸಂದರ್ಭದಲ್ಲಿ ಯಾರ ಹೆಸರನ್ನು ಉಪಯೋಗಿಸಿದ್ದಾರೆಂದು ತಮಗೆ ಗೊತ್ತಿದೆ.

ಶ್ರೀ ಎಚ್. ಎಸ್.ಶಂಕರಲಿಂಗೇಗೌಡ:- ಅದು ನನ್ನ ಹಕ್ಕು, It is my privilege. No question. No question ಈ ಜನ ಒಬ್ಬ ಸಿನಿಮಾ ನಟಿಯನ್ನು ಮತ್ತು ಮಂತ್ರ ಹೇಳುವವನನ್ನು ಪೂಜಿಸಿ ಕಾಲಿಗೆ ಬೀಳುವಂತಹ ಸಂಸ್ಕೃತಿಯನ್ನು ಇಟ್ಟು ಕೊಂಡಿರತಕ್ಕಂಥವರು. ನನ್ನ ದೇಶದ ಉತ್ತಮ ಪ್ರಧಾನ ಮಂತ್ರಿಯ ಹೆಸರನ್ನು ಹೇಳುವುದಕ್ಕೆ ನನಗೆ ಹಕ್ಕಿದೆ. It is my privilege. Don't talk like that.

ಶ್ರೀ ಜಗದೀಶ್ ಶೆಟ್ಟರೆ (ಮಾನ್ಯ ವಿರೋಧಪಕ್ಷದ ನಾಯಕರು):- ಸನ್ಮಾನ್ಯ ಅಧ್ಯಕ್ಷರೆ, ತಾವು ಯಾವುದೇ ಒಂದು ವಿಷಯದ ಬಗ್ಗೆ ಏನಾದರೊಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ ಅದು ರೂಲಿಂಗ್ ಆಗುತ್ತದೆ ಮತ್ತು ಅದೇ ಫೈನಲ್ ಆಗುತ್ತದೆ. ಅವರು ಯಾವ ರೀತಿ ಮಂತ್ರಿಮಂಡಲವನ್ನು ರಚನೆ ಮಾಡಿದರು, ಇದಕ್ಕಾಗಿ ಎಷ್ಟು ದಿವಸ ಲೇಟ್ ಮಾಡಿದರು, ಇದನ್ನು ನಾವು ಪ್ರಸಾತಪ ಮಾಡಿರತಕ್ಕಂಥ ಸ್ವರೂಪ, ಅದರ ಹಿನ್ನಲೆ ಏನು ಇತ್ತು ಮತ್ತು ಅದರ ಹಿಂದೆ ಕಳಕಳಿ ಏನಿತ್ತು ಅದನ್ನು ಅರ್ಥ ಮಾಡಿಕೊಳ್ಳಬಹುದು. ಆದರೆ ಅವರು ಹೇಳುವಂತಹ ಹಿನ್ನಲೆ ಅದು ಯಾವ ವಿಷಯಕ್ಕೆ ಸಂಬಂಧಪಟ್ಟಿದೆಯೋ ಗೊತ್ತಿಲ್ಲ. ಈ ರೀತಿ ಇದ್ದಂಥ ಸಂದರ್ಭದಲ್ಲಿ ಇವತ್ತು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ತಾವೇ ಅಭಿಪ್ರಾಯವನ್ನು ವ್ಯಕ್ತಪಡಿಸಿ ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟಂತೆ ಅದರ ಹಿನ್ನಲೆಯಲ್ಲಿ ತಮ್ಮ ವಿಚಾರಗಳನ್ನು ಮಂಡನೆ ಮಾಡಬೇಕೆಂದು ತಾವು ವ್ಯಕ್ತಪಡಿಸಿದ್ದೀರಿ. ಅದಕ್ಕಾಗಿ ತಾವೇನು ಈ ರೀತಿ ಒಂದು ರೂಲಿಂಗ್ ಕೊಟ್ಟಿದ್ದೀರಿ ಅದನ್ನು ಪುನರ್ ಪರಿಶೀಲನೆ ಮಾಡಿ ಅದಕ್ಕೆ ಬೇರೆ ರೀತಿಯ ರೂಪವನ್ನು ಕೊಡಬೇಕೆಂದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಿಜಯಕುಮಾರ್ ಶೆಟ್ಟಿ:- ಮಾನ್ಯ ಸದಸ್ಯರು ಮೊನ್ನೆ ಯಾವ ವಿಷಯದ ಮೇಲೆ ಮಾತನಾಡಿದ್ದಾರೆ ಎಂಬುದು ದಾಖಲೆಯಲ್ಲಿದೆ.

SRI B.N. BACHEGOWDE: I raise a point of order against it. ನಿಯಮಾವಳಿ 327 ಪ್ರಕಾರ ಸದಸ್ಯರು ಮಾತನಾಡುವಾಗ ಯಾವರೀತಿ ಪಾಲಿಸಬೇಕೆಂಬುದು ಈ ರೀತಿ ಇದೆ. ಸಂಸತ್ ಅಥವಾ ಯಾವುದೇ ರಾಜ್ಯ ವಿಧಾನಮಂಡಲದ ವ್ಯವಹಾರಣೆಗಳನ್ನು ಮತ್ತು ನಡವಳಿಕೆಗಳನ್ನು ಕುರಿತು ಹೀನಾಯವಾಗಿ ಮಾತನಾಡತಕ್ಕಂಥಾದ್ದಲ್ಲ ಎಂದು ಮತ್ತು ಅದೇ ರೀತಿ ಸದಸ್ಯರುಗಳ ಮೇಲೆ ವೈಯಕ್ತಿಕವಾಗಿ ದೋಷಾರೋಪಣೆ ಮಾಡತಕ್ಕದಲ್ಲ. ಇದಕ್ಕೆಲ್ಲಾ ಕೆಲವು ನಿಯಮಗಳಿವೆ.

ಶ್ರೀ ಯು.ಆರ್.ಸಭಾಪತಿ:- ಇಲ್ಲಿ ಯಾರೂ ಸಹ ಹೀನಾಯವಾಗಿ ಮಾತನಾಡಿಲ್ಲ; ದ್ವೇಷದಿಂದಲೂ ಸಹ ಮಾತನಾಡಿಲ್ಲ.

ಶ್ರೀ ಬಿ.ಎಸ್.ಬಚ್ಚೇಗೌಡ:- ವಿನಾಕಾರಣ ಚರ್ಚೆಯನ್ನು ಗೊಂದಲಕ್ಕೆ ಎಳೆಯುವುದು ಬೇಡ. ಇಲ್ಲಿ ಮಾನ್ಯ ಹೊಸ ಸದಸ್ಯರಿದ್ದಾರೆ, ಅವರು ಇದನ್ನು ಎಲ್ಲೆಲ್ಲಿಗೋ ಕೊಂಡೊಯ್ಯುವಂತಹ

ಕೆಲಸವನ್ನು ಮಾಡಬಾರದು.

ಅಧ್ಯಕ್ಷರು:- ಇಲ್ಲಿ ಗೊಂದಲದ ಪ್ರಮೇಯವೇ ಇಲ್ಲ. ನಿಮ್ಮ ಪಕ್ಷದ ಮಾನ್ಯ ಸಿಂಧ್ಯರವರು ಮತ್ತು ನಿಮ್ಮ ಪಕ್ಷದ ಅನೇಕ ಸದಸ್ಯರು ಮಾತನಾಡುವಾಗ ಆಡಳಿತ ಪಕ್ಷದ ಕಡೆಯವರು ಸುಮ್ಮನೆ ಇದ್ದರು. ಆದ್ದರಿಂದ ಅವರು ಹೇಳುವುದನ್ನು ಮೊದಲು ಕೇಳಿ.

ಶ್ರೀ ಬಿ.ಎಸ್.ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೆ, ಆ ಇಷ್ಯೂಸ್, ಬಗ್ಗೆ ಮಾತನಾಡಿದ್ದೇವೆ ವಿನಹ ವಿನಾಕಾರಣ ಯಾವುದನ್ನು ನಾವಿಲ್ಲಿ ಮಾತನಾಡಿಲ್ಲ. ಮಾನ್ಯ ರಾಜೀವ್ ಗಾಂಧಿ ಪ್ರಕರಣ ಈಗಾಗಲೇ ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ ಚರ್ಚೆ ಆಗಿದೆ. ಅವರೇನು ಹೌಸ್‌ನಲ್ಲಿ ಅಟ್ರಿಬ್ಯೂಟ್ ಮಾಡುತ್ತಿದ್ದಾರೆ ಅದು ಸಿ.ಬಿ.ಐ. ಮೇಲೆ ಪರಿಣಾಮ ಬೀರುತ್ತದೆ. ಇದರ ಜೊತೆಗೆ ಅಲ್ಲಿ ತೀರ್ಮಾನ ತೆಗೆದುಕೊಂಡಿರತಕ್ಕಂಥ ವಿಷಯಗಳ ಮೇಲೆ ಮತ್ತೆ ಇಲ್ಲಿ ಪ್ರಶ್ನೆ ಮಾಡುವಂಥದ್ದು ಮತ್ತು ಚಾರ್ಜ್‌ಷೀಟ್ ಹಂತದಲ್ಲಿರತಕ್ಕಂಥ ವಿಷಯಗಳನ್ನೆಲ್ಲಾ ಈ ಸದನದಲ್ಲಿ ಪ್ರಸ್ತಾಪ ಮಾಡತಕ್ಕಂಥದ್ದು ಸರಿಯಲ್ಲ...

ಶ್ರೀ ಕರಿಯಣ್ಣ:- ಮಾನ್ಯ ಅಧ್ಯಕ್ಷರೆ, ನಮ್ಮ ಪಕ್ಷದ ಪ್ರಣಾಳಿಕೆಯನ್ನು ಹಿಡಿದು ಕೊಂಡು ಇಲ್ಲಿ ವಾದವನ್ನು ಮಾಡಿದ್ದಾರೆ. ಆದರೆ ಹಿಂದೆ ಮಂತ್ರಿಗಳಾಗಿದ್ದವರು ಬೇರೆಯದನ್ನು ನಾವು ಇಲ್ಲಿ ಕೇಳಬಾರದೆಂದು ಹೇಳಿದರೆ ನಾವು ಏನು ಹೇಳಬೇಕು? ನಾವು ಯಾವುದೇ ರೀತಿಯಲ್ಲಿ, ವೈಯಕ್ತಿಕವಾಗಿ ಟೀಕೆ ಮಾಡಿಲ್ಲ. ನಾವು ಸಹಿತ ಇಲ್ಲಿ ಆಗಿರತ್ತಕಂಥದ್ದು ಸರಿಯಲ್ಲವೆಂದು ಹೇಳಿದ್ದೇವೆ.

ಶ್ರೀ ವಿಜಯಕುಮಾರ್ ಶೆಟ್ಟಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಬಚ್ಚೇಗೌಡರು ಕೃಪಾಪೋಷಿತ ನಾಟಕ ಕಂಪನಿವೆಂದು ಹೇಳಿದ್ದಾರೆ, ಪಾಪ ಅವರಿಗೆ ಮರೆತು ಹೋಗಿದೆ ಎಂದು ಕಾಣುತ್ತದೆ; ಮಾನ್ಯ ಬಚ್ಚೀಗೌಡರೇ, ನೀವೇ ಕೃಪಾಪೋಷಿತ ನಾಟಕ ಕಂಪನಿ ವೆಂದು ಮೊನ್ನೆ ಹೇಳಿದ್ದೀರಿ. ನೀವು ನಮ್ಮ ರಾಷ್ಟ್ರದ ನಾಯಕರನ್ನು ತರಹ ಹೇಳಿದರೆ ನಾವು ಅದನ್ನು ಹೇಗೆ ತಿಳಿದುಕೊಳ್ಳಬೇಕು? ಈಗ ಇದು ಯಾವ ನಾಟಕ ಕಂಪನಿ?

(ಗೊಂದಲ)

ಅಧ್ಯಕ್ಷರು: ಮಾನ್ಯ ರಾಜ್ಯಪಾಲರ ಭಾಷಣ ಮೇಲೆ ಮಾತ್ರ ಮಾತನಾಡಿ.

ಶ್ರೀ ಕೆ.ಹೆಚ್.ರಂಗನಾಥ್(ಮಾನ್ಯ ಅರಣ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದಂಥ ಬಚ್ಚೀಗೌಡರು ಹೇಳುತ್ತಿದ್ದರು ಲೋಕಸಭೆಯಲ್ಲಿ ಇದರ ಬಗ್ಗೆ ಪ್ರಸ್ತಾಪವಾಗಿದೆ, ಇಲ್ಲಿ ಅದನ್ನು ಪ್ರಸ್ತಾಪ ಮಾಡಬಾರದೆಂದು ಹೇಳಿದರು; ಆದರೆ ಇಲ್ಲಿ ಪ್ರಸ್ತಾಪ ಮಾಡಬಾರದೆಂದು ಪ್ರಶ್ನೆ ಇಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ ಏನಾದರೂ ಸಮಸ್ಯೆ ಇದ್ದರೆ, ಆ ರೂಪದಲ್ಲಿ ಅಲ್ಲ ಇವತ್ತು ರಾಜೀವ್ ಗಾಂಧಿಯವರ ವಿಚಾರ ಎಫ್ಐ ಆರ್ ನಲ್ಲಿ ಬಂದಿರುವಂಥದ್ದು, ಇದು ಈ ಸಭೆಗೆ ಸಂಬಂಧಪಟ್ಟಂತೆ ಇಲ್ಲ. ಇದು ಇಡೀ ರಾಷ್ಟ್ರದಲ್ಲಿ ವಿಚಾರ ಮಾಡತಕ್ಕಂಥ ವಸ್ತುವಾಗಿದೆ. ಒಬ್ಬ ಸತ್ತ ವ್ಯಕ್ತಿಯ ಹೆಸರು ಎಫ್ಐಆರ್ ನಲ್ಲಿ ಸೇರಿಸತಕ್ಕಂಥದ್ದು ಸರಿಯೇ, ತಪ್ಪು ಎನ್ನುವಂಥ ವಿಚಾರ ಏನಿದೆ ಇದು ಇಡೀ ರಾಷ್ಟ್ರವ್ಯಾಪಿಯಾಗಿದೆ. Legal luminaries ಬಗ್ಗೆ ವಿಚಾರ

ಮಾಡತಕ್ಕಂಥ ವಿಚಾರ ಇರುವಾಗ, ಈ ಸದನದ ಸದಸ್ಯರಾದ ನಾವು ಪ್ರಸ್ತಾಪ ಮಾಡುವುದಕ್ಕೆ ನಮಗೆ ಎಲ್ಲ ಹಕ್ಕು ಇದೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಸಚಿವರು ಮಾತನಾಡುತ್ತಿದ್ದಾರೆ. ನೀವು ಮಧ್ಯದಲ್ಲಿ ಎಕೆ ಅಡಚಣೆ ಮಾಡುತ್ತಿದ್ದೀರಿ?

ಶ್ರೀ ಕೆ.ಹೆಚ್.ರಂಗನಾಥ:- ಅದು ಇದೆಯೋ ಇಲ್ಲವೋ ಎನ್ನುವುದನ್ನು May's ಪಾರ್ಲಿಮೆನಂಟ್ ಪ್ರೊಸೀಜರ್ ತೆಗೆದುಕೊಂಡು ನೋಡಬಹುದು. ನನಗೆ ಇದೆ ಎಂದು ಅನಿಸುತ್ತದೆ. ಸಮರ್ಥನೆ ಮಾಡುವುದಕ್ಕೆ ಸಾಧ್ಯತೆ ಇದೆ. ಆದ್ದರಿಂದ ಒಂದುವೇಳೆ ಅದು ಸರಿಯಲ್ಲವೆಂದು ಎನಿಸಿದಾಗ, ಅದನ್ನು ಪ್ರಸ್ತಾಪ ಮಾಡಿದಾಗ, ಯಾವುದೋ ದೃಷ್ಟಿಕೋನದಿಂದ ಅದು ಇಲ್ಲ, ಹಾಗೆ ಹೀಗೆ ಎಂದು ಗೊಂದಲ ಮಾಡತಕ್ಕಂಥದ್ದು ಸರಿಯಲ್ಲ. ಮಾನ್ಯ ಬಚ್ಚೇಗೌಡರು ಒಂದು ರೂಲ್ಸ್‌ನ್ನು ಪ್ರಸ್ತಾಪ ಮಾಡಿದಾಗ ಇನ್ನೊಬ್ಬ ಸದಸ್ಯರ ಮೇಲೆ ಆಪಾದನೆ ಮಾಡತಕ್ಕಂಥದ್ದು ಸರಿಯಲ್ಲ ಎನ್ನುವಂಥದ್ದನ್ನು ಈ ಸದನದ ಈ ಸದನದ ಎಲ್ಲ ಸದಸ್ಯರು ಒಪ್ಪಬೇಕಾದದ್ದು ಇದೆ. ಹಾಗೆ ಅಂದತಕ್ಷಣ ಇಬ್ಬರು ಮೂರು ಜನ ಸದಸ್ಯರು ಕುಳಿತು ಕೊಂಡು ಮಾತನಾಡುವ ಅಧಿಕಾರ ಎಲ್ಲಿ ಇದೆ? ಮಾನ್ಯ ಮೈಸೂರಿನ ಸದಸ್ಯರಾದ ಶಂಕರಲಿಂಗೇಗೌಡರು- ಇಂಗ್ಲೀಷ್ ಯೆನ್ನೋ ಅಥವಾ ಕನ್ನಡ ಹೌದೊ?e ಅವರು ತಮ್ಮ ಎಲ್ಲ ಹಾವಭಾವದಿಂದ ಮಾತನಾಡಿದರು ಆಗ ಅವರು ತಮ್ಮ ಅಪ್ಪಣೆಯನ್ನು ತೆಗೆದು ಕೊಂಡಿದ್ದರೆ? ಇದು ವಿಚಾರ ಮಾಡತಕ್ಕಂಥದ್ದು. ಇವತ್ತು ಚಾರ್ಜಶೀಟ್‌ನಲ್ಲಿ... ನಾನು ಇನ್ನೂ ಕುಳಿತುಕೊಂಡಿರುವುದಿಲ್ಲ.

(ಗೊಂದಲ)

ಸ್ವಾಮಿ, ಕೇಂದ್ರಸರ್ಕಾರ ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿ ಇದನ್ನು ಬಳಸಿದೆ. ತನ್ನ ಶಕ್ತಿ ಏನಿದೆ, ಪೊಲೀಸ್, ಸಿಬಿಐ-ಯನ್ನು ದುರುಪಯೋಗ ಮಾಡಿ ಕೊಂಡಿದೆ. ಅದರ ವಿಚಾರವಾಗಿ ಎಲ್ಲವನ್ನು ಚರ್ಚೆ ಮಾಡುವ ಅಧಿಕಾರ ನಮಗೆ ಇದೆ. ನಾನು ಪ್ರಸ್ತಾಪಮಾಡತಕ್ಕಂಥಾದ್ದು ಈ ಸದನದ...

(ಗೊಂದಲ)

(ಈ ಹಂತದಲ್ಲಿ ಮಾನ್ಯ ಬಿಜೆಪಿಯ ಶಾಸಕರುಗಳಾದ ಶಂಕರಲಿಂಗೇಗೌಡ ಬಾವಿಗೆ ಬಂದರು)

(ಗೊಂದಲ)

ಅಧ್ಯಕ್ಷರು:: ಗೊಂದಲ ಮಾಡಬೇಡಿ, ನಾನು ನಿಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿರುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ರಂಗನಾಥ್‌ರವರು ಹಿರಿಯ ಸಂಸದೀಯ ಪಟುಗಳು, ಇವತ್ತು ಕೇಂದ್ರ ಸರ್ಕಾರ ತನ್ನ ಅಧಿಕಾರ ದುರುಪಯೋಗ ಮಾಡಿಕೊಂಡಿದೆ, ಸಿಬಿಐ ಮುಖಾಂತರ charge sheet ಹಾಕಿಸಿದೆ, ಈ ರೀತಿಯಾಗಿ ಇಲ್ಲಿ ಹೇಳುವಂಥಾದ್ದು ಸರಿಯಾದುದಲ್ಲ.

ಅವರು ಒಬ್ಬ ಹಿರಿಯ ಸಚಿವರು ಹಾಗೂ ಹಿರಿಯ ಸಂಸದೀಯ ಪಟುಗಳು.

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ, ಅವರು ಪೂರ್ಣವಾಗಿ ಮುಗಿಸಲಿ.

SRI K.H.RANGANATH:- I have yielded. The leader of the oppisition should have the courtesy of hearing me. ನಾನು ಕಾನೂನು ಪ್ರಕಾರವಾಗಿ ಮಾತನಾಡುತ್ತಿದ್ದೇನೆ. ಈ ವಿಚಾರದಲ್ಲಿ ಅದು ಸರಿಯಲ್ಲವೆಂದು ತಾವು ಹೇಳಿದರೆ ನಾನು ತಮ್ಮ ರೂಲಿಂಗಿಗೆ ತಲೆಬಾಗುತ್ತೇನೆ. ನನಗೆ ತಿಳಿದಂತೆ ನಾನು ಅದನ್ನು ಪ್ರಸ್ತಾಪ ಮಾಡುವಾಗ ತಪ್ಪು ಮಾಡಿರುವುದಿಲ್ಲ. ಕೇಂದ್ರ ಸರ್ಕಾರ ಅಧಿಕಾರ ದುರುಪಯೋಗ ಮಾಡಿಕೊಂಡರೆ, ಒಬ್ಬ ಸತ್ತ ವ್ಯಕ್ತಿ ಇಲ್ಲದೇ ಇರುವಾಗ ಅವರ ಬಗ್ಗೆ ತೇಜೋವಧೆ ಮಾಡುವುದಕ್ಕೆ ಪ್ರಯತ್ನ ಪಟ್ಟರೆ ಈ ರಾಜ್ಯದ ಎಲ್ಲ ಪ್ರಜೆಗಳ ಬಗ್ಗೆ ಈ ವೇದಿಕೆಯ ಮೂಲಕ ಪ್ರಸ್ತಾಪ ಮಾಡುವುದಕ್ಕೆ ಎಲ್ಲ ಹಕ್ಕು ಕೂಡ ನಮಗೆ ಇದೆ. ಆ ದೃಷ್ಟಿಯಿಂದ ಅದನ್ನು ಸಮರ್ಥನೆ ಮಾಡುವುದು ಅಥವಾ ವಿರೋಧ ಮಾಡತಕ್ಕಂಥದ್ದು ಕಾನೂನು ಪ್ರಕಾರ ಮಾಡಿ ಆದರೆ ತಮ್ಮ ವಿವೇಚನೆ ಬಿಟ್ಟಿದ್ದು.

ಶ್ರೀ ಬಿ.ಸೋಮಶೇಖರ್:- ಮಾನ್ಯ ಅಧ್ಯಕ್ಷರೆ, ಮಾನ್ಯ ರಂಗನಾಥ್‌ರವರು ಅಧ್ಯಕ್ಷ ಸ್ಥಾನದಲ್ಲಿ ಕೆಲಸವನ್ನು ಮಾಡಿರುತ್ತಾರೆ. ಇವತ್ತು ನಮ್ಮ ಸದನದಲ್ಲಿ ಒಬ್ಬ ಹಿರಿಯ ಸದಸ್ಯರು ಹಾಗೂ ಮಂತ್ರಗಳಾಗಿ ಅನುಭವ ಪಡೆದಿದ್ದಾರೆ. ಈ ಒಂದು ವಿಚಾರವನ್ನು ಸಮರ್ಥನೆ ಮಾಡಿಕೊಳ್ಳುವ ರೀತಿಯನ್ನು ನೋಡಿದರೆ ನನಗಂತು ನೋವು ಆಗುತ್ತದೆ. ಕಾರಣವೇ ನೆಂದರೆ)...

(ಗೊಂದಲ)

ಶ್ರೀ ಬಿ.ಸೋಮಶೇಖರ್: ನಾನು ಯಾವಾಗಲಾದರೊಮ್ಮೆ ಅಪರೂಪಕ್ಕೆ ಹೇಳುತ್ತಿರುತ್ತೇನೆ. ನಾನು ಮಾತನಾಡುವಾಗ ಒಂದು ಸೌಜನ್ಯತೆ ಇರಬೇಕು. ತಾವು ಸದಸ್ಯರಾಗಿ ಬಂದಿರುತ್ತೀರಿ. ತಾವು ಹಿರಿಯ ಸದಸ್ಯರು ತಮಗೆ ಕೇಳುವ ಸೌಜನ್ಯ ಇಲ್ಲವೆಂದರೆ ನಾನು ಕುಳಿತುಕೊಂಡು ಬಿಡುತ್ತೇನೆ. ನಾವು ಸ್ವಲ್ಪ ಗಂಭೀರತೆಯನ್ನು ಕಾಪಾಡಿಕೊಂಡು ಹೋಗಬೇಕು.

ಶ್ರೀ ವಿಜಯಕುಮಾರ ಶೆಟ್ಟಿ:- ನೀವು ಮಾತನಾಡುವಾಗ ಮಾನ್ಯ ಸಭಾಧ್ಯಕ್ಷರು ಹೇಳಿದಂತೆ ನಾವು ಯಾವಾಗಲೂ ಕೂಡ ಗಲಾಟೆಯನ್ನು ಮಾಡಲಿಲ್ಲ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ:- ಮಾನ್ಯ ಹಿರಿಯ ಸದಸ್ಯರು ಗಂಭೀರತೆಯ ವಿಷಯದ ಬಗ್ಗೆ ಆ ಕಡೆಗೆ ಹೇಳಬೇಕು. The way the BJP members are behaving, that shows how they are responsible.. ಗಂಭೀರತೆ ಬಗ್ಗೆ ಈ ಕಡೆಗೆ ಹೇಳುವುದು ಬೇಡ. Are we not responsible members here?

ಶ್ರೀ ಬಿ.ಸೋಮಶೇಖರ (ಮಳವಳ್ಳಿ):- ಈ ಸದನದಲ್ಲಿ ಸಾರ್ವಜನಿಕವಾಗಿ ಆದಂಥ ಎಲ್ಲರ ಬಗ್ಗೆ ಮಾತನಾಡತಕ್ಕಂಥ ಅಧಿಕಾರ ಇದೆ, ಇಲ್ಲವೆಂದು ನಾವು ಹೇಳುವುದಿಲ್ಲ. ಈ ವಿಚಾರವನ್ನು ಹೋಲಿಕೆ ಮಾಡುವುದಾದರೆ ಮಾನ್ಯ ರಾಜೀವ ಗಾಂಧಿಯವರ ಚಾರ್ಜಾಶೀಟ್ ಬಗ್ಗೆ ಹೇಳುವುದಾದರೆ ಅವರು ಒಬ್ಬ ಸಾಮಾನ್ಯ ಸದಸ್ಯರು ಈ ಹೌಸ್‌ನ ವಿಚಾರ ಬಂದಾಗ.

ಮೊನ್ನೆ ಉಪನಾಯಕರು ಮಾತನಾಡುವಾಗ ಈ ಸದನದ ಸದಸ್ಯರಾಗಿತಕ್ಕಂಥ ಡಾ: ಚಿತ್ತರಂಜನ್‌ರವರ ಕೊಲೆಯಾಗಿದೆ. ಅದರ ಬಗ್ಗೆ ಒಂದು ತನಿಖಾ ಆಯೋಗವನ್ನು ಮಾಡಿ ಅವರು ಒಂದು ವರದಿ ಕೊಟ್ಟಿದ್ದಾರೆ. ಈ ಸದನದ ಒಬ್ಬ ಸದಸ್ಯರ ಕೊಲೆಯಾಗಿದೆ ಅದರ ವರದಿಯನ್ನು ಒಪ್ಪಿಕೊಂಡು ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಚಾರ್ಜ್‌ಶೀಟ್ ಹಾಕಬೇಕು ಎನ್ನುವುದನ್ನು ಅವರು ತಮ್ಮ ಮಾತಿನಲ್ಲಿ ಹೇಳಿದರು. ಅದು ಪ್ರಸ್ತುತವಾಗಿದೆ. ಈ ಸದನದ ಒಬ್ಬ ಸದಸ್ಯರ ಕೊಲೆಯಾದಾಗ ಅದರ ವಿಚಾರಣೆಯಾಗಿ ಆಯೋಗ ರಚನೆಮಾಡಿ ಮಾಡತಕ್ಕಂಥದ್ದು ಇದೆ. ಮಾನ್ಯ ರಾಜೀವ ಗಾಂಧಿಯವರು ಈ ಸದನದ ಸದಸ್ಯರಾಗಿರಲಿಲ್ಲ. ಅವರು ಪಾರ್ಲಿಮೆಂಟಿನ ಸದಸ್ಯರಾಗಿ ಪ್ರಧಾನ ಮಂತ್ರಿಗಳಾಗಿದ್ದರು. ಅದನ್ನು ಅವರ ಬಗ್ಗೆ ಸಿಬಿಐ ನಡೆಸಿರತಕ್ಕಂಥ ವಿಚಾರಣೆಯ ವಿಧಾನದ ಬಗ್ಗೆ ಆಗಲಿ, ಅದನ್ನು ಡ್ರಾಪ್ ಮಾಡತಕ್ಕಂಥಾದ್ದು ಆಗಲಿ, ಸಿಬಿಐ ಬಗ್ಗೆ ಟೀಕೆ ಮಾಡತಕ್ಕಂಥ ವಿಚಾರವಾಗಲಿ ಆ ಸಂಸತ್ತಿಗೆ ಸೇರತಕ್ಕಂಥ ವಿಚಾರವೇ ಹೊರತು ತಮ್ಮ ಸದನಕ್ಕೆ ಇಲ್ಲ. ಒಂದು ವೇಳೆ ಎಲ್ಲರ ಬಗ್ಗೆ ಮಾತನಾಡಲು ಸದನಕ್ಕೆ ಅಧಿಕಾರ ಇದೆ ಎನ್ನುವುದಾದರೆ, ಇವತ್ತು ಉತ್ತರ ಪ್ರದೇಶದಲ್ಲಿ ಒಬ್ಬ ಸಾಮಾನ್ಯ ಮನುಷ್ಯ ಅಥವಾ ಒಬ್ಬ ಅಧಿಕಾರಿ ಕೊಲೆ ಆದಾಗ, ಸಿಬಿಐ ವಿಚಾರಣೆಯನ್ನು ನಡೆಸಿದಾಗ ಆ ಒಂದು ಟೀಕೆ ಮಾಡತಕ್ಕಂಥ ಅಧಿಕಾರವನ್ನು ಇಲ್ಲಿ ತಂದುಕೊಳ್ಳಬೇಕಾಗುತ್ತದೆ. ಕರ್ನಾಟಕ ವಿಧಾನಸಭೆಯಲ್ಲಿ ತೆಗೆದುಕೊಳ್ಳುವುದಕ್ಕೆ ಆ ಒಂದು ಅಧಿಕಾರ ಇದೆಯೇ ಎನ್ನುವುದನ್ನು ತಾವು ಮೊದಲು ವಿಚಾರವನ್ನು ಮಾಡಬೇಕು. ಅದನ್ನು ಇಲ್ಲಿ ಚರ್ಚೆ ಮಾಡುವುದಾದರೆ, ರಾಜೀವ ಗಾಂಧಿಯವರು ಒಬ್ಬರು ಸಾಮಾನ್ಯ ಮನುಷ್ಯರು, ಎಂದು ನಾವು ಚರ್ಚೆಗೆ ತೆಗೆದುಕೊಳ್ಳಬೇಕು. ಆ ರೀತಿಯಾಗಿ ತೆಗೆದುಕೊಳ್ಳಬೇಕಾದರೆ, ಇಡೀ ದೇಶದಲ್ಲಿ ಯಾವುದೇ ಒಬ್ಬ ಮನುಷ್ಯನ ಕೊಲೆಯಾದರು, ಅದರ ಬಗ್ಗೆ, ಸಿಬಿಐ ಬಗ್ಗೆ ಚರ್ಚೆ ನಡೆಯುವುದರೂ, ನಾವು ಚರ್ಚೆಯನ್ನು ಮಾಡೋಣ. ತಾವು ಹಿರಿಯ ರಾಜಕಾರಣಿಗಳು ಇದ್ದೀರಿ.

(ಬಿಜೆಪಿಯ ಸದಸ್ಯರು ಧರಣಿಯಿಂದ ವಾಪಸ್ಸು ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಂಡರು)

ಇದು ತಮಗೆ ಅರ್ಥವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ತಾವು ಇದಕ್ಕೆ ರೂಲಿಂಗ್‌ನ್ನು ಕೊಡಿ.

(ಗೊಂದಲ)

ಅಧ್ಯಕ್ಷರು: ಆಯಿತು ಕೊಡುತ್ತೇನೆ.

(ಗೊಂದಲ)

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ರಂಗನಾಥ್‌ರವರು, What he is defending, If a wrong case, because at the stage of chargesheet whether his is a deceased person or not, there is a no bar to chargesheet him. ಆಮೇಲೆ ನ್ಯಾಯಾಲಯದಲ್ಲಿ ಸತ್ತ ವ್ಯಕ್ತಿಯ ಹೆಸರನ್ನು ಬಿಡುವುದು ಅವರ ವ್ಯಾಪ್ತಿಗೆ ಬರುವಂಥಾದ್ದು. ಚಾರ್ಜ್‌ಶೀಟ್ ಸ್ಟೇಜಿನಲ್ಲಿ ಅವನು ಅಪರಾಧಿ ಆಗಲೇ ಬೇಡ ಎನ್ನುವುದು ಸರಿಯಲ್ಲ. What

he is defending, it is a wrong case. It is not correct. ಅವರು ಅದರ ಬಗ್ಗೆ ಮಾರ್ಗದರ್ಶನ ಕೊಡಲಿ. ನಮ್ಮ ಹಿರಿಯ ಸದಸ್ಯರು ಚಾರ್ಜ್‌ಶೀಟ್ ಹಾಕುವುದಕ್ಕೆ ಬರುವುದಿಲ್ಲವೆಂದು ಅವರು ವಾದವನ್ನು ಮಾಡುತ್ತಿದ್ದಾರೆ, ಅದು ಸರಿಯಲ್ಲ ಅದಕ್ಕೆ ನಾನು ವಿರುದ್ಧವಾಗಿದ್ದೇನೆ. ಇದು ಸಂಸತ್ತಿನಲ್ಲಿ ಚರ್ಚೆಯಾಗಬೇಕು. ಇಲ್ಲಿ ಅಲ್ಲ. It is not a subject of this House.

ಶ್ರೀ ಕೆ.ಹೆಚ್.ರಂಗನಾಥ್: ನಾನು ರಾಜೀವ ಗಾಂಧಿಯವರು ಎನ್ನುವ ದೃಷ್ಟಿಯಿಂದ ಹೇಳಲಿಲ್ಲ. ನಾನು ಸಾಮಾನ್ಯ, ಹಾಗೂ ನೀವು ಸಾಮಾನ್ಯ ವ್ಯಕ್ತಿಗಳೇ.

ಶ್ರೀ ಬಿ.ಸೋಮಶೇಖರ: ಸಾಮಾನ್ಯ ವ್ಯಕ್ತಿಗಳ ಬಗ್ಗೆ ಚರ್ಚೆ ಮಾಡುವುದಾದರೆ ಮಾಡಬಹುದು; ಪ್ರಿಸಿಡೆಂಟ್ ಮಾಡುವುದಾದರೆ ಮಾಡಿ.

ಶ್ರೀ ಬಿ ರಮಾನಾಥ ರೈ: ರಾಜೀವ ಗಾಂಧಿ ಸಾಮಾನ್ಯ ವ್ಯಕ್ತಿ ಎಂದು ಹೇಳುವುದಕ್ಕೆ ನನ್ನ ವಿರೋಧ ಇದೆ. ಅವರು ಪ್ರಧಾನ ಮಂತ್ರಿಗಳಾಗಿದ್ದರು.

SRI B.SOMASHEKAR: In the eye of law everybody is equal.

ಅಧ್ಯಕ್ಷರು: ಈ ವಿಷಯದ ಬಗ್ಗೆ ಎರಡು ಕಡೆ ಸದಸ್ಯರ ಒಂದು ವಿವಾದವನ್ನು ಕೇಳಿದ್ದೇನೆ. ಅದರ ಬಗ್ಗೆ ರೂಲಿಂಗ್‌ನ್ನು ನಾಳೆ ಕೊಡುತ್ತೇನೆ. ಬೇರೆ ವಿಷಯದ ಬಗ್ಗೆ ಮಾನ್ಯ ವಿಜಯಕುಮಾರ ಶೆಟ್ಟಿಯವರು ಮಾತನಾಡಬಹುದು.

ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್):- ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸಿಂಧ್ಯಾರವರು ಪ್ರಸ್ತಾಪ ಮಾಡಿರತಕ್ಕಂತಹ ವಿಷಯವಾದ ನಮ್ಮ ಪ್ರಪಂಚದ ಪ್ರಮುಖ ಸಮುದಾಯವಾದ ಕ್ರಿಶ್ಚಿಯನ್ ಜನಾಂಗದ ವಿಶ್ವಗುರುಗಳಾದ ಶ್ರೀ ಪೋಪ್ ಜಾನ್‌ಪಾಲ್ ರವರು ಭಾರತಕ್ಕೆ ಬರುವುದನ್ನು ವಿರೋದಿಸುವ ಶಕ್ತಿಗಳನ್ನು ನಾನು ಖಂಡಿಸುತ್ತೇನೆ. ಶ್ರೀ ಪೋಪ್‌ಜಾನ್‌ಪಾಲ್‌ರವರನ್ನು ಬೆಂಗಳೂರು ಅಥವಾ ಮಂಗಳೂರಿಗೆ ಕರೆತರಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಈ ಸಭೆಯ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ. ನನ್ನ ಕ್ಷೇತ್ರವಾದ ಸುರತ್ಕಲ್‌ನಲ್ಲಿ ರಾಷ್ಟ್ರ ಮಟ್ಟದ ಮತ್ತು ಅಂತರಾಷ್ಟ್ರೀಯ ಮಟ್ಟದ ಉದ್ದಿಮೆಗಳು ಬರುತ್ತಿವೆ. ಇದರಿಂದ ಅನೇಕ ಜನರು ನಿರ್ವಸಿತ ರಾಗುತ್ತಿದ್ದಾರೆ. ಈಗಾಗಲೇ ಎಂ.ಆರ್.ಪಿ.ಎಲ್.ಎಂಬ ದೊಡ್ಡ ಸಂಸ್ಥೆ ಬಂದಿದ್ದು ಇದರಿಂದ ನಿರ್ವಸಿತರಾ ಜನರಿಗೆ ಯಾವುದೇ ವ್ಯವಸ್ಥಿತವಾದ ವ್ಯವಸ್ಥೆಯನ್ನು ಸರ್ಕಾರದರವಗಲಿ ಅಥವಾ ಕಂಪನಿಯುವರಾಗಲಿ ಇದುವರೆಗೂ ಮಾಡಿಲ್ಲ. ಮಾನ್ಯ ದೇಶಪಾಂಡೆಯವರಿಗೆ ಈ ಎಲ್ಲಾ ವಿಷಯಗಳು ತಿಳಿದಿವೆ, ಅವರು ಈಗ ಸದನದಲ್ಲಿಲ್ಲ. ಆದರೂ ಮಾನ್ಯ ಸಚಿರರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಅವರ ಮೊದಲ ನಿಲುವನ್ನು ಬದಲಾಯಿಸಿದರೆ ಒಳ್ಳೆಯದಾಗುತ್ತದೆ. ಏಕೆಂದರೆ ನಮ್ಮ ರಾಷ್ಟ್ರದ ನಿರಾ ಶ್ರೀತರೆಂದರೆ ಸೈನಿಕರು ಅವರು ದೇಶಕ್ಕಾಗಿ ಹೋರಾಡಿ ನಮ್ಮ ದೇಶದ ಆರ್ಥಿಕ ಅಭಿವೃದ್ಧಿಗೋಸ್ಕರ ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿದಂತಹವರು, ಅವರಿಗೆ ನಾವು ವಿಶೇಷವಾದ ಸವಲತ್ತುಗಳನ್ನು ಖಂಡಿತವಾಗಿಯೂ ಕೊಡಬೇಕು.

ಎಂಆರ್‌ಪಿಎಲ್, ಈ ಡೆವಲಪ್‌ಮೆಂಟ್ ಸೆಸ್ ಎಂದು 14 ಕೋಟಿ ರೂಪಾಯಿಗಳು

ಹೆಚ್ಚು ಹಣ ನಮ್ಮ ಸರ್ಕಾರಕ್ಕೆ ಬರುವುದು ಬಾಕಿ ಇದೆ. ಇದಕ್ಕೆ ಬೇರೆ ಬೇರೆ ಕಾರಣಗಳನ್ನು ಹೇಳಿಕೊಂಡು ಇದನ್ನು ಕೊಡದೆ ಅವರು ಮುಂದಕ್ಕೆ ಹಾಕುತ್ತಿದ್ದಾರೆ. ಇದನ್ನು ಸರ್ಕಾರ ಆದಷ್ಟು ಬೇಗ ವಸೂಲು ಮಾಡುವಂತಹ ಕಾರ್ಯಕ್ರಮವನ್ನು ಮಾಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ವಿನಂತಿಸುತ್ತಿದ್ದೇನೆ. ಅದೇ ರೀತಿಯಲ್ಲಿ ಮಂಗಳೂರು ರಿಫೈನರಿ ಪ್ರಾಜೆಕ್ಟ್ ಏನಿದೆಯೋ ಅದಕ್ಕೆ ಮ್ಯಾನುಫ್ಯಾಕ್ಚರಿಂಗ್ ಪಾಯಿಂಟ್ ರಿಬೇಟ್ ಎನ್ನುವಂತಹ ಒಂದು ವ್ಯವಸ್ಥೆ ಇದೆ. ಅದು ಬಹುಶ: ಮದ್ರಾಸ್, ಮಹಾರಾಷ್ಟ್ರ ಮತ್ತು ಇತರ ಕಡೆಗಳಲ್ಲಿ ಇದೆ. ಒಂದು ಲೀಟರ್ ಪೆಟ್ರೋಲ್ ಮತ್ತು ಡಿಸೇಲ್‌ಗೆ 3 ರಿಂದ 4 ರೂಗಳು ಕಡಿಮೆದರ ಇದೆ. ತರಹ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯನ್ನು ರಿಫೈನರಿ ಪಾಯಿಂಟ್ ಎಂದು ಮಾಡಿದರೆ ಇದರಿಂದ ನಮ್ಮ ಜಿಲ್ಲೆಯವರಿಗೆ ಅನುಕೂಲವಾಗಬಹುದು. ಇದು 1994ರಲ್ಲಿ ರಿಫೈನರಿ ಪ್ರಾರಂಭವಾಗಿದ್ದರೂ ಸಹ ಅದನ್ನು ಇಷ್ಟರವರೆಗೂ ಅವರು ಅದನ್ನು ಮಾಡುತ್ತಿಲ್ಲ. ಈ ರಿಫೈನರಿ ರಿಬೇಟ್‌ನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಕೊಡಿಸಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

ಅದೇ ಪ್ರಕಾರ ನಮ್ಮ ಮಿತ್ರರು ಅಕ್ಟಾಯಿ ಬಗ್ಗೆ ಹೇಳಿದರು. ಇದನ್ನು ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ಶ್ರೀ ಡಿ.ದೇವರಾಜ ಅರಸುರವರ ಕಾಲದಲ್ಲಿ ಮಾಡಿದರೂ ಸಹ ಇಷ್ಟರವರೆಗೆ ಸಿಎಜಿ ಆಗಲಿ ಅಥವಾ ಯಾವುದೇ ಡಿಪಾರ್ಟ್‌ಮೆಂಟ್‌ನಲ್ಲಾಗಲೀ ಅದರ ಲೆಕ್ಕವನ್ನು ಇನ್ನು ಸಪೂರ್ಣವಾಗಿ ಮಾಡಲಿಲ್ಲ. ಅಕ್ಟಾಯ್‌ಗೆ ಬದಲಾಗಿ ಎಂಟ್ರಿಟ್ಯಾಕ್ಸ್ ಎಂದು ಇನ್ನೊಂದು ಟ್ಯಾಕ್ಸ್‌ನ್ನು ಮಾಡಿದ್ದಾರೆ. ಆದ್ದರಿಂದ ಯಾವುದೇ ಕಾರಣಕ್ಕೆ ಈ ಅಕ್ಟಾಯ್ ಟ್ಯಾಕ್ಸ್‌ನಿಂದ ಬಹಳಷ್ಟು ಭ್ರಷ್ಟಾಚಾರ ಜಾಸ್ತಿಯಾಗುತ್ತದೆ. ಆದ್ದರಿಂದ ಯಾವುದೇ ಕಾರಣಕ್ಕೆ ಅಕ್ಟಾಯ್‌ನ್ನು ಮತ್ತೆ ಇಂಟ್ರಡ್ಯೂಸ್ ಮಾಡಬಾರದು ಎಂದು ನಾನು ಮಾನ್ಯ ಸಭಾನಾಯಕರಲ್ಲಿ ವಿನಂತಿ ಮಾಡುತ್ತಿದ್ದೇನೆ.

ಮತ್ತೊಂದು ಗಹನವಾದ ವಿಚಾರವೆಂದರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಬಹುಶ: ನಮ್ಮ ರಾಜ್ಯಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿ ಅತ್ಯಂತ ಅಭಿವೃದ್ಧಿ ಹೊಂದುವಂತಹ ಜಿಲ್ಲೆಯಾಗಿದೆ. ಇಲ್ಲಿ ಕೆಎಡಿಬಿಯ ಒಂದು ಕಛೇರಿ ಇತ್ತು. ಇದನ್ನು ಹಾಹನ ಜಿಲ್ಲೆಗೆ ವರ್ಗಾಯಿಸುತ್ತಾರೆ ಎಂಬ ಸುದ್ದಿ ಬಂದಿದೆ. ದಯವಿಟ್ಟು ಈ ಕಛೇರಿಯನ್ನು ಹಾಹನ ಜಿಲ್ಲೆಗೆ ವರ್ಗಾಯಿಸಬಾರದು, ಇದನ್ನು ಮಂಗಳೂರಿನಲ್ಲಿಡಬೇಕು. ಏಕೆಂದರೆ ಮಂಗಳೂರಿನ ಜನ ಹಾಸನದವರೆಗೆ ಹೋಗುವಂತಹ ಕಷ್ಟದ ಪರಿಸ್ಥಿತಿಯನ್ನು ನಿರ್ಮಾಣ ಮಾಡಬಾರದು. ಕಳೆದ 20 ವರ್ಷಕ್ಕೆ ಮೇಲ್ಪಟ್ಟು ಈ ಕೆ.ಎ.ಡಿ.ಬಿ. ಆಫೀಸ್ ಮಂಗಳೂರಿನಲ್ಲಿತ್ತು. ಮಂಗಳೂರಿನಲ್ಲಿ ಅನೇಕ ಉದ್ದಿಮೆಗಳು ಸ್ಥಾಪನೆಯಾಗುತ್ತಿವೆ. ಇದನ್ನು ಮಂಗಳೂರಿನಲ್ಲಿಡುವ ಹಾಗೇ ತಾವು, ವ್ಯವಸ್ಥೆ ಮಾಡಬೇಕು. ಈಗಾಗಲೇ ಸರ್ಕಾರದಿಂದ ಈ ಬಗ್ಗೆ ಸುತ್ತೋಲೆ ಬಂದಿದೆ. ಇದನ್ನು ಯಾವುದೇ ಕಾರಣಕ್ಕೂ ಹಾಸನಕ್ಕೆ ಟ್ರಾನ್ಸ್‌ಫರ್ ಮಾಡಬಾರದು ಎಂದು ನಾನು ವಿನಂತಿ ಮಾಡುತ್ತಿದ್ದೇನೆ. ಈ ಬಗ್ಗೆ ಇಲ್ಲಿ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ.

ನಮ್ಮ ಸರ್ಕಾರಿ ಜಾಗಗಳಲ್ಲಿ ಅನೇಕ ಬಡವರು, ಯಾವುದೇ ಜಾತಿ, ಮತ ಬೇಧವಿಲ್ಲದೆ ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾಮುಖ್ಯವಾಗಿ ಕುಳಿತಿದ್ದಾರೆ. ಅವರಿಗೆ ನಮ್ಮ ಹಕ್ಕುಪತ್ರವನ್ನು

ಕೊಡುವ ಕಾರ್ಯಕ್ರಮವನ್ನು ಮಾಡಬೇಕೆಂದು ನಾನು ವಿನಂತಿಸುತ್ತಿದ್ದೇನೆ.

ನೀರು ಮತ್ತು ರಸ್ತೆ ರಿಪೇರಿಯ ಬಗ್ಗೆ ಅನೇಕ ನನ್ನ ಸಹ ಸದಸ್ಯರುಗಳು ಮಾತನಾಡಿದ್ದಾರೆ. ಮಲೆನಾಡು ಅಭಿವೃದ್ಧಿ ಯೋಜನೆಗಳಲ್ಲಾಗಲಿ, ಇತರೆ ಯೋಜನೆಗಳಲ್ಲಿ ಈ ರಸ್ತೆಯ ಅಭಿವೃದ್ಧಿಗೆ ವಿಶೇಷವಾದ ಪ್ರಾಮುಖ್ಯಯತೆಯನ್ನು ಕೊಡಬೇಕು. ನೀರಿನ ಬವಣೆ ಏನಿದೆ ಅದರ ಬಗ್ಗೆ ವಿರೋಧಪಕ್ಷದವರು, ಹೋದಲೆಲ್ಲಾ ಈ ದೇಶಕ್ಕೆ ಸ್ವತಂತ್ರ ಬಂದು, 50 ವರ್ಷವಾಯಿತು, ನೀರನ್ನು ಸರಿಯಾಗಿ ವಿತರಣೆಯನ್ನು ಮಾಡುತ್ತಿಲ್ಲವೆಂದು ಹೇಳುತ್ತಿದ್ದಾರೆ. ಬಹುಶ: ಸನ್ಮಾನ್ಯ ಮುಖ್ಯಮಂತ್ರಿಗಳಾದಂತ ಶ್ರೀ ಎಸ್.ಎಂ.ಕೃಷ್ಣಾರವರು ಪ್ರತಿ ಹಳ್ಳಿಯ ಮೂಲೆ ಮೂಲೆಗಳಲ್ಲೂ ಈ ನೀರಿನ ವ್ಯವಸ್ಥೆಯನ್ನು ಸರಿಯಾಗಿ ಸಿಕ್ಕುವಹಾಗೆ ಮಾಡುವಲ್ಲಿ ತಾವು ವಿಶೇಷ ಗಮನವನ್ನು ಹರಿಸಬೇಕೆಂದು ನಾನು ಮಾನ್ಯ ಸಭಾಧ್ಯಕ್ಷರ ಮುಖಾಂತರ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡುತ್ತಿದ್ದೇನೆ. ಸನ್ಮಾನ್ಯ ಶ್ರೀ ಎಸ.ಎಂ.ಕೃಷ್ಣಾರವರ ನೇತೃತ್ವದಲ್ಲಿ ಪಾಂಚಜನ್ಯದ ಕಹಳೆಯನ್ನು ಊದಿ ಶ್ರೀ ಕೃಷ್ಣಾರವರು ವಿಧಾನಸೌಧಕ್ಕೆ ಪ್ರವೇಶ ಮಾಡಿದ್ದಾರೆ. ಖಂಡಿತವಾಗಿಯೂ ಇವರ ನೇತೃತ್ವದಲ್ಲಿ ಸರ್ಕಾರ ಗೋಲ್ಡನ್ ಇರಾ ಅಫ್ ಕರ್ನಾಟಕ ಗೋಲ್ಡ್‌ನ್ ಏಜ್ ಆಫ್ ಕರ್ನಾಟಕ ಎಂಬ ಹೆಸರನ್ನು 5 ವರ್ಷದ ಕೊನೆಯಲ್ಲಿ ಖಂಡಿತ ನಾವು ಪಡೆಯುತ್ತೇವೆಂದು ಸಂಪೂರ್ಣ ವಿಶ್ವಾಸದಿಂದ ಹೇಳುತ್ತಾ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಮತ್ತೋಮ್ಮೆ ನಾನು ಸಂಪೂರ್ಣ ಬೆಂಬಲವನ್ನು ಸೂಚಿಸಿ. ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟಿದಕ್ಕೆ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಹೆಚ್.ಶಿವಶಂಕರರೆಡ್ಡಿ (ಗೌರಿಬಿದನೂರು):- ಸನ್ಮಾನ್ಯ ಸಭಾಧ್ಯಕ್ಷರೆ, ಕಳೆದ ಎರಡು ದಿವಸಗಳಿಂದ ಸರ್ಕಾರದ ರೂಪುರೇಷೆಗಳ ಬಗ್ಗೆ ಸಾಕಷ್ಟು ಚರ್ಚೆಗಳಾಗಿದೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಮುಂದಿನ ಐದು ವರ್ಷಗಳ ಅವಧಿಯಲ್ಲಿ ಒಂದು ಡೈನಾಮಿಕ್ ಮತ್ತು ವೈಬ್ರೆಟ್ ಭವಿಷ್ಯತ್ತನ್ನು ಈ ರಾಜ್ಯದ ಜನತೆಗೆ ಕೊಡುತ್ತೇವೆಂದು ಕೂಡ ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಾನು ಕೆಲವಾರು ವಿಚಾರಗಳಲ್ಲಿ ಸರ್ಕಾರವು ಇನ್ನು ಹೆಚ್ಚಿನ ನಮ್ಮ ಕಾರ್ಯಕ್ರಮಗಳ ಬಗ್ಗೆ ಬೆಳಕನ್ನು ಚೆಲ್ಲಬಹುದಿತ್ತು ಎನ್ನುವ ಭಾವನೆ ಇತ್ತು. ನಾನು ಮುಖ್ಯವಾಗಿ ಸ್ಥಳೀಯ ಸಂಸ್ಥೆಗಳ ವಿಚಾರದಲ್ಲಿ ಸ್ವಲ್ಪ ಮಾತನಾಡಬೇಕೆಂದು ಇಚ್ಛೆ ಪಡುತ್ತೀದ್ದೇನೆ. ಇದು 11ನೇಯ ವಿಧಾನಸಭೆ ರಚನೆಯಾಗಿ 50 ವರ್ಷಗಳಾದರೂ ಸಹ ಒಂದು ಸ್ಥಿರವಾದಂತಹ, ನಿರ್ದಿಷ್ಟವಾದಂತಹ ಸ್ಥಳೀಯ ಸಂಸ್ಥೆಗಳ ಒಂದು ಅಸ್ತಿತ್ವವನ್ನು ನಮ್ಮ ಸರ್ಕಾರ ಕೊಡುವುದರಲ್ಲಿ ವೈಫಲ್ಯವಾಗಿದೆ ಎಂದರೆ ಒಂದು ರೀತಿಯ ವಿಷಾದವೆಂದು ನಾನು ಭಾವಿಸುತ್ತೇನೆ. ಇದೇ ಸದನದಲ್ಲಿ ಸನ್ಮಾನ್ಯ ಗೋಪಾಲಗೌಡರು 1954ರಲ್ಲಿ ಮೈಸೂರು ವಿಲೀಜ್ ಪಂಚಾಯತ್ ಡಿಸ್ಟ್ರಿಕ್ಟ್ ಬೋರ್ಡ್ ಅಮೆಂಡ್‌ಮೆಂಟ್ ಬಿಲ್ ಎಂದು ಅದರ ಬಗ್ಗೆ ಕೂಡ ಚರ್ಚೆ ಮಾಡಿ, ಆ ಚರ್ಚೆಯಲ್ಲಿಯೂ ಕೂಡ ಕೆಲವಾರು ವಿಚಾರ ಹೇಳಿದ್ದಾರೆಂದು ಕೋಟ್ ಮಾಡಿದ್ದಾರೆ. ಈ ಸ್ಥಳೀಯ ಸಂಸ್ಥೆಗಳ ಚುನಾವಣೆ ನಿಧಾನವಾಗಿ ಒಂದಲ್ಲ ಒಂದು ಕಾರಣದಿಂದ ಮುಂದುವರಿದು ಇವುಗಳನ್ನು ಓಡೆದುಹಾಕಿ ತಾನೇತಾನಾಗಿ ಸರ್ಕಾರವನ್ನು ನಡೆಸಿಕೊಂಡು ಹೋಗಬೇಕೆಂಬ ಉದ್ದೇಶವನ್ನು ಆ ಹಿನ್ನೆಲೆಯಲ್ಲಿ ಇಟ್ಟುಕೊಂಡಿದ್ದಾರೆಯೇ ಎಂದು ಯೋಚನೆಯನ್ನು ಮಾಡಬೇಕು. ಇದ್ದಕೆ ಇಲ್ಲಿ ಅವಕಾಶವಾಗಿದೆ. ಆದ್ದರಿಂದ ಪ್ರಜಾ ಪ್ರಭುತ್ವದ ಹೆಸರಿನಲ್ಲಿ ಸ್ಥಳೀಯ ಸಂಸ್ಥೆಗಳು,

ಸ್ವರಾಜ್ಯ, ಸೆಲ್ಫ್ ಗೌರ್ನಮೆಂಟ್ ಎಂದು ನಾವು ಒಪ್ಪಿಕೊಂಡಿದ್ದೇವೋ ಆ ತಪ್ಪುಗಳು ಕಿಂಚಿತ್ತಾದರೂ ಕಾರ್‍ಯರೂಪದಲ್ಲಿ ತೋರ್ಪಡಿಸುವುದಕ್ಕೆ ನಾವು ಕಾರ್‍ಯಮಗ್ನರಾಗಬೇಕೆನ್ನುವ ಬಗ್ಗೆ ಇಲ್ಲಿ ಇದೇ ಸಮಯದಲ್ಲಿ ಹಿಂದೆ ಚರ್ಚೆ ಆಗಿದೆ. ಈ ಥ್ರೀಟೈರ್ ಸಿಸ್ಟಂ ಅಸ್ತಿತ್ವದಲ್ಲಿವೆ. ಗ್ರಾಮಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳು ಜಿಲ್ಲಾಪಂಚಾಯಿತಿಗಳು ಈಗ ಸ್ತಿತ್ವದಲ್ಲಿವೆ. ನಾನೂ ಕೂಡ ಹಿಂದೆ ಗ್ರಾಮ ಪಂಚಾಯಿತಿಯ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. 1987ರಲ್ಲಿ ಮಂಡ ಪಂಚಾಯಿತಿಯ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಹೊಸ ಕಾಯಿದೆ ಥ್ರಿ ಟೈರ್ ಸಿಸ್ಟಂ ಬಂದಮೇಲೆ ತಾಲ್ಲೂಕು ಪಂಚಾಯಿತಿಯ ಸದಸ್ಯನಾಗಿ ಈಗಲೂ ಕೂಡ ಮುಂದುವರಿದು ಕೆಲಸ ಮಾಡಿ ಕೊಂಡು ಬಂದಿದ್ದೇನೆ. ನನ್ನ ಅನುಭವ ಈ ವ್ಯವಸ್ಥೆಗಳನ್ನು ಬದಲು ಮಾಡುವುದಕ್ಕಿಂತ ಹೆಚ್ಚಾಗಿ ಅದರಲ್ಲಿ ಏನು ದೌರ್ಬಲ್ಯಗಳಿವೆ ಎನ್ನುವುದರ ಬಗ್ಗೆ ಒಂದು ಸಮಗ್ರವಾದ ಚಿಂತನೆಯಾಗ ಬೇಕೆಂದು ನನಗನಿಸುತ್ತದೆ. ಈ ಸ್ಥಳೀಯ ಸಂಸ್ಥೆಗಳೇನು ಕಾರ್ಯರೂಪದಲ್ಲಿವೆ, ಗ್ರಾಮ ಪಂಚಾಯಿತಿಗಳು ಅವುಗಳಿಗೆ ಆರ್ಥಿಕ ಸ್ಥಿರತೆಯಿಲ್ಲ. ಬರೀ ಸಮಸ್ಯೆಗಳನ್ನು ಈಗ ಏನಿದೆ ಅದನ್ನು ಹಾಗೆಯೇ ಉಳಿಸಿಕೊಂಡು ಹೋದರೆ ಎಫೆಕ್ಟೀವ್ ಆಗಿ ಕೆಲಸ ಮಾಡುವುದಲ್ಲಿ ಪುನಃ ಫೇಲಾಗುತ್ತೇವೆ ಎನ್ನುವ ಭಾವನೆ ನನಗೆ ಮೂಡುತ್ತದೆ. ಗ್ರಾಮ ಪಂಚಾಯಿತಿಗಳಿಗೆ ಏನು ಅನುದಾನ ಬರುತ್ತದೆ ಅದರಲ್ಲಿ 80ಭಾಗ ಕೇಂದ್ರ ಸರ್ಕಾರದಿಂದ ಬರುತ್ತದೆ. ಉಳಿದ 20 ಭಾಗ ಮಾತ್ರ ರಾಜ್ಯಸರ್ಕಾರದಿಂದ ಬರುತ್ತದೆ. ಅದರ ಜೊತೆಗೆ ಜೆ.ಆರ್.ವೈ ಸ್ಕೀಮ್ಸ್ ಅದು ಹಿಂದೆ ಇತ್ತು. ಪರ್ ಕ್ಯಾರಿಟಾ ಗ್ರಾಂಟ್ ಎಂದು ರಾಜ್ಯಸರ್ಕಾರದವರು ಕೊಡುತ್ತಾರೆ. ಇದು ಕೇವಲ ಅಲ್ಲಿರತಕ್ಕ ಬೀದಿ ದೀಪಗಳ ಕರೆಂಟ್ ಬಿಲ್‌ಗಾಗಲೀ ಅಲ್ಲಿರತಕ್ಕ ನೌಕರರ ಸಂಬಳಕ್ಕಾಗಲೀ ಸಾಕಾಗುವುದಿಲ್ಲ. ಇದನ್ನು ಬಲಪಡಿಸುವ ರೀತಿಯಲ್ಲಿ ಹೆಚ್ಚಿನ ಹಣಕಾಸು ಒದಗಿಸುವುದಕ್ಕೆ ಸರ್ಕಾರ ಕಾಳಜಿ ವಹಿಸಬೇಕು. ಸ್ಥಳೀಯ ಸಂಸ್ಥೆಗಳಲ್ಲಿ ರಿಸರ್ವೇಷನ್ ಪಾಲಿಸಿ ಕೂಡ ಬಹಳ ಉತ್ತಮವಾಗುತ್ತದೆ. ಆದರೆ ದುರದೃಷ್ಟವಶಾತ್ ಚುನಾಯಿತ ಪ್ರತಿನಿಧಿಗಳು ಏನಿದ್ದಾರೆ ಅವರಲ್ಲಿ

4.50 ಪಿ.ಎಂ.

ಸಾಕಷ್ಟು ಅವಿದ್ಯಾವಂತರು. ಅವರು ಅವಿದ್ಯಾಂವತರು ಆಗಿರುವುದರಿಂದ ಅವರ ಹಕ್ಕುಗಳು ಅಥವ ಅಲ್ಲೇನು ಅವರು ತೀರ್ಮಾನ ತೆಗೆದುಕೊಳ್ಳರು ವಿಚಾರದಲ್ಲಿ ಅರಿವು ಇಲ್ಲದಾಗ ಅಲ್ಲಿ ಸಂಬಂಧಪಟ್ಟ ಕಾರ್ಯದರ್ಶಿಗಳೇ ಅದನ್ನು ಚಲಾಯಿಸುತ್ತಾರೆ. ಈಗ ಅದು ಆಗಿದೆ. ಸಾಕಷ್ಟು ಗ್ರಾಮಪಂಚಾಯಿತಿಗಳಲ್ಲಿ ಅಧ್ಯಕ್ಷರಿಗಿಂತ ಹೆಚ್ಚಾಗಿ ಕಾರ್ಯದರ್ಶಿಗಳೇ ಅದನ್ನು ನಡೆಸುತ್ತಿದ್ದಾರೆ. ಆದ್ದರಿಂದ ನನ್ನ ಒಂದು ಸಲಹೆ ಏನೆಂದರೆ ಯಾರೇ ಸ್ಥಳೀಯ ಸಂಸ್ಥೆಗಳಿಗೆ

(ಮಾನ್ಯ ಅಂಜನಮೂರ್ತಿಯವರ ಅಧ್ಯಕ್ಷಪೀಠಕ್ಕೆ ಬಂದರು)

ಆಯ್ಕೆಯಾದವರು ಅವರಿಗೆ ಸ್ವಲ್ಪ ಮಿನಿಮಮ್ ಎಜುಕೇಶನ್ ಕನಿಷ್ಟ ವಿದ್ಯಾಭ್ಯಾಸವಿದ್ದು, ಕಾನೂನಿನ ಅರಿವನ್ನು ಪಡೆದುಕೊಳ್ಳುವುದಕ್ಕೆ ಅವಾಶ ಇದ್ದಾಗ ಮಾತ್ರ ಒಂದು ಒಳ್ಳೆಯ ಈ ಅಧಿಕಾರ ವಿಕೇಂದ್ರೀಕರಣದ ಸಮಸ್ಯೆಗಳನ್ನು ಹೆಚ್ಚಿನ ದಕ್ಷತೆಯಿಂದ ನಡೆಸುವುದಕ್ಕೆ ಆಗುತ್ತದೆ ಎಂದು ನನ್ನ ಅನಿಸಿಕೆ. ಈವೊಂದು ನ್ಯೂನ್ಯತೆಗಳನ್ನು ಸರಿಪಡಿಸುವುದಕ್ಕೆ ಈ ಸಿಸ್ಟಂನ್ನು ಬದಲಾಯಿಸುವ ಬದಲು ಬಹುಶಃ ನನಗನಿಸುತ್ತದೆ, ಹಿಂದೆ ನಾವು ಚರಿತ್ರೆಯಲ್ಲಿ ಓದಿದ್ದೇವೆ,

ಮಹಮದ್ ಬಿನ್ ತೊಘಲಕ್‌ರು ದೆಹಲಿಯಿಂದ ದೇವಗಿರಿಗೆ ದೇವಗಿರಿಯಿಂದ ದೆಹಲಿಗೆ ಏನು ರಾಜಧಾನಿಯನ್ನು ಬದಲಾಯಿಸಿದ ಹಾಗೆ ಹಳೆಯ ಸಿಸ್ಟಂನ್ನು ಬದಲಾಯಿಸಿ ಹೊಸ ಸಿಸ್ಟಂನ್ನು ತರುವುದು ಇದಕ್ಕಿಂತ ಹೆಚ್ಚಾಗಿ ಇರುವ ವ್ಯವಸ್ಥೆಯಲ್ಲಿ ಏನು ನ್ಯೂನ್ಯತೆಗಳಿವೆ ಎನ್ನುವ ಬಗ್ಗೆ ಒಂದು ಅಧ್ಯಯನ ಮಾಡಿ ಅದನ್ನು ಕಾರ್ಯರೂಪಕ್ಕೆ ತಂದರೆ ಒಳ್ಳೆಯದೆಂದು ನನ್ನ ಭಾವನೆ. ಈ ಸ್ಥಳೀಯ ಸಂಸ್ಥೆಗಳು ಪಶ್ಚಿಮಬಂಗಾಳದಲ್ಲಿ ಬಹಳಷ್ಟು ಸಕ್ರಿಯವಾಗಿ ಕೆಲಸ ಮಾಡುತ್ತಿವೆ. ಅದಕ್ಕೆ ನಾನಾ ಕಾರಣಗಳಿವೆ. ಅಲ್ಲಿ ಸ್ಟೆಬಿಲೈಸ್ಡ್ ಲೋಕಲ್ ಬಾಡೀಸ್ ಇವೆ. ಆವೊಂದು ಸ್ಟೆಬಿಲಿಟಿ ಇದ್ದಾಗ ಸ್ವಾಭಾವಿಕವಾಗಿ ಒಳ್ಳೆಯ ಕೆಲಸಗಳಾಗುತ್ತವೆಂದು ನನ್ನ ಭಾವನೆ. ಸ್ಥಳೀಯ ಸಂಸ್ಥೆಗಳ ಇನ್ನೊಂದು ದುರದೃಷ್ಟ ಏನೆಂದರೆ ಕೆಲವಾರು ಕೆಲಸಗಳಲ್ಲಿ ಅಧ್ಯಕ್ಷರು ಕಾರ್ಯದರ್ಶಿಗಳು ಮತ್ತು ಇಂಜಿನಿಯರ್‌ಗಳು ಮೂರು ಜನ ಒಂದು ನೆಕ್ಸಸ್ ಮಾಡಿಕೊಂಡು ಸಾಕಷ್ಟು ಗ್ರಾಮಪಂಚಾಯಿತಿಗಳಲ್ಲಿ ಹಣ ದುರ್ವ್ಯಯ ಕೂಡ ಆಗಿದೆ; ಕೆಲಸ ಆಗಿರುವುದಿಲ್ಲ ಆದರೆ ಬಿಲ್‌ಗಳು ಆಗಿರುತ್ತವೆ. ಇದರ ಮೇಲೆ ಒಂದು ಎಫೆಕ್ಟೀವ್ ಚೆಕ್-ಅದನ್ನು ಏನಾದರೂ ಈ ಲೋಕಲ್‌ಬಾಡೀಸ್‌ನಲ್ಲಿ ತರುವುದಕ್ಕೆ ಸರ್ಕಾರ ಪ್ರಯತ್ನ ಮಾಡಿದರೆ ಉತ್ತಮವೆಂದು ನನ್ನ ಭಾವನೆ. ಗ್ರಾಮೀಣ ಪ್ರದೇಶದಲ್ಲಿ ಲೋಕಲ್ ಪೀಪಲ್ ಪಾರ್ಟಿಸಿಪೇಷನ್ ಅಂದರೆ ಒಂದು ಸರ್ಕಾರದ ಪ್ರೋಗ್ರಾಮ್ಸ್‌ನಲ್ಲಿ ಸ್ಥಳೀಯ ಜನರು ಭಾಗವಹಿಸುವಂತಾಗಬೇಕು, ಉದಾಹರಣೆಗೆ ಹೇಳಬೇಕೆಂದರೆ ಆಂಧ್ರಪ್ರದೇಶದಲ್ಲಿರತಕ್ಕ ಜನ್ಮಭೂಮಿ ಪ್ರೋಗ್ರಾಮ್ ಆ ರೀತಿಯಲ್ಲಿ ಲೋಕಲ್ ಪಾರ್ಟಿಸಿಷನ್ ಅದರಲ್ಲಿ ಅವರನ್ನು ಏನಾದರೂ ಇನ್‌ವಾಲ್ವ್ ಮಾಡಿಕೊಂಡಾಗ ಮಾತ್ರ ಕಾರ್ಯಕ್ರಮಗಳು ಸ್ವಲ್ಪ ಎಫೆಕ್ಟೀವ್ ಆಗಿ ಇಂಪ್ಲಿಮೆಂಟ್ ಆಗುತ್ತದೆಂದು ನನ್ನ ಭಾವನೆ.

ಇನ್ನು ಆರೋಗ್ಯದ ಬಗ್ಗೆ ಕೂಡ ಸರ್ಕಾರ ಬಹಳಷ್ಟು ವಿಚಾರ ಮತ್ತು ನೀತಿಗಳನ್ನು ಮಾನ್ಯ ರಾಜ್ಯಪಾಲರ ಭಾಷಣದ್ಲಲಿ ಹೇಳಿದ್ದಾರೆ. ದುರಾದೃಷ್ಟವಶಾತ್ ನಮ್ಮ ತಾಲ್ಲೂಕಿನ ಬಗ್ಗೆ ಹೇಳಬೇಕೆಂದರೆ,ಅಲ್ಲಿ ಬರತಕ್ಕ ಔಷಧಿಗಳು ಕೇವಲ ಮೂರು ತಿಂಗಳಿಗೂ ಕೂಡ ಸಾಕಾಗುವುದಿಲ್ಲ. ಆರೇಳು ತಿಂಗಳು ಔಷಧಿಗಳ ಸಪ್ಲೈ ಇರುವುದಿಲ್ಲ. ಇದರ ಬಗ್ಗೆ ಸರ್ಕಾರ ಒಂದು ಹೆಚ್ಚಿನ ಗಮನಹರಿಸಬೇಕಗಿದೆ. ಜೊತೆಗೆ ಸ್ನೇಕ್‌ಬೈಟ್ ಅಥವ ನಾಯಿಕಡಿತ ಈ ವ್ಯಾಕ್ಸೀನ್ಸ್ ಬಹಳಷ್ಟು ಆಸ್ಪತ್ರೆಗಳಿಗೆ ಸಪ್ಲೈ ಇಲ್ಲ. ಇಂತಹದರ ಬಗ್ಗೆ ಸರ್ಕಾರ ಕೂಡ ಹೆಚ್ಚಿನ ಒತ್ತು ಕೊಟ್ಟು ಔಷಧಿ ಸರಬರಾಜನ್ನು ಮಾಡುವಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಹಳ್ಳಿಗಾಡಿನಲ್ಲಿರತಕ್ಕ ಆಸ್ಪತ್ರೆಗಳಿಗೆ ಡಾಕ್ಟರುಗಳು ಬರುವುದಿಲ್ಲ; ರೂರಲ್ ಸರ್ವೀಸಿಂಗ್ ಕಂಪಲ್ಸರಿ ಮಾಡಿದರೂ ಕೂಡ ಸಾಕಷ್ಟು ಆಸ್ಪತ್ರೆಗಳಿಗೆ ಡಾಕ್ಟರುಗಳು ಬರುವುದಿಲ್ಲ. ಅದು ಒಂದು ವಿಷಾದಕರ ಸಂಗತಿ. ಇದರ ಬಗ್ಗೆ ಸರ್ಕಾರ ಒಂದು ಯೋಜನೆ ಹಾಕಿಕೊಂಡು ಎಲ್ಲ ಹಳ್ಳಿಗಾಡಿನಲ್ಲಿರತಕ್ಕ ಆಸ್ಪತ್ರೆಗಳಿಗೆ ವೈದ್ಯರ ಪೋಸ್ಟಿಂಗ್ಸ್‌ನ್ನು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರದಲ್ಲಿ ವಿನಂತಿಸುತ್ತೇನೆ. ಎಎನ್‌ಎಂಗಳು ಪ್ರತಿ ಹಳ್ಳಿಗಳಲ್ಲಿರುತ್ತಾರೆ. ಸಾಕಷ್ಟು ಕಡೆ 20-25ವರ್ಷ ಒಂದೇ ಕಡೆ ಇರತಕ್ಕ ಎಎನ್‌ಎಂಗಳು ಇದ್ದಾರೆ. ಕೆಲವು ಕಡೆ ಅಲ್ಲಿಯೇ ಮದುವೆ ಮಾಡಿಕೊಂಡು ಪರ್ಮನೆಂಟಾಗಿ ಅಲ್ಲೆ ಸೆಟಲ್ ಆಗಿರತಕ್ಕ ಅನೇಕ ನಿದರ್ಶನಗಳಿವೆ. ಇಂತಹ ಒಂದು ಪದ್ಧತಿ ಕೂಡ ಚಾಲ್ತಿಯಲ್ಲಿದೆ. ಜೊತೆಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ತಜ್ಞರಸ್ಪೆಷಲಿಸ್ಟ್ ಪೋಸ್ಟ್ ಇದ್ದರೂ ಕೂಡ ಅದಕ್ಕೆ ಸಂಬಂಧವಿಲ್ಲದಿರತಕ್ಕ ಡಾಕ್ಟರುಗಳು ಇದ್ದಾರೆ. ಈ ರೀತಿ ಬಹಳಷ್ಟು ಆಸ್ಪತ್ರೆಗಳಲ್ಲಿದ್ದಾರೆ. ಡಾ: ಮಲಕರೆಡ್ಡಿಯವರು ಹಿಂದೆ ಆರೋಗ್ಯ

ಮಂತ್ರಿಗಳಾಗಿದ್ದಾಗ ಅದನ್ನು ಮಾಡಿದ್ದರು, ಯಾವ ಸ್ಪೆಷಲಿಸ್ಟ್ ಕೇಡರ್ ಇದ್ದರೆ ಆ ಕೇಡರ್‌ಗೆ ಸ್ಪೆಷಲಿಸ್ಟ್‌ರನ್ನು ಹಾಕಬೇಕೆಂದು ಅವರು ಹಿಂದೆ ಆ ರೀತಿ ಮಾಡಿದ್ದರು. ಆ ಕೆಲಸವನ್ನು ಈಗ ಅವರು ಮಾಡುತ್ತಾರೆಂದು ನಾನು ಭಾವಿಸಿಕೊಂಡಿದ್ದೇನೆ.

ಇನ್ನು ಪ್ರೈಮರಿ ಎಜುಕೇಶನ್ ಬಗ್ಗೆ ಕೂಡ ಸರ್ಕಾರ ಬಹಳ ಒತ್ತು ಕೊಟ್ಟು ಕೆಲವಾರು ರೂಪುರೇಷೆಗಳನ್ನು ಹಾಕಿದ್ದಾರೆ. ಇದರಲ್ಲಿ ವಿಶೇಷವಾಗಿ ಹೆಣ್ಣುಮಕ್ಕಳ ವಿದ್ಯಾಭ್ಯಾಸ ಬಹಳ ಮುಖ್ಯ. ನಮ್ಮ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಜನಸಂಖ್ಯೆಯ ಹತೋಟಿ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ. ಇದು ನಮ್ಮ ದೇಶದ ನಮ್ಮ ರಾಜ್ಯದ ಒಂದು ಮೂಲಭೂತವಾದ ಸಮಸ್ಯೆಯೆಂದು ನನಗನಿಸುತ್ತದೆ. ಈಗ ಏನು ನಾವು ಪ್ರಗತಿಯನ್ನು ಸಾಧಿಸುತ್ತೇವೆ ಅದನ್ನೆಲ್ಲ ಅನ್-ಕಂಟ್ರೋಲ್ ಪಾಪ್ಯುಲೇಷನ್ ಎಕ್ಸ್‌ಪೋಷನ್‌ನಿಂದ ಅದು ತಿಂದುಹಾಕುತ್ತಿದೆ.

ಎಷ್ಟೇ ಪ್ರಗತಿ ಬಂದಿದ್ದರೂ ಕೂಡ ಈ ಜನಸಂಖ್ಯೆ ನಿಯಂತ್ರಣಕ್ಕೆ ಒಂದು ಪರಿಣಾಮಕಾರಿಯಾದ ಕ್ರಮಗಳನ್ನು ತೆಗೆದುಕೊಳ್ಳದೇ ಇದ್ದರೆ ಅದು ಯಾವುದೇ ಸಾಧನೆ ಅವಕಾಶವಾಗುವುದಿಲ್ಲ ಎಂದು ನನ್ನ ಭಾವನೆ. ಆದ್ದರಿಂದ ಕೆಲವು ಸ್ಕೀಮ್‌ಗಳ ಬಗ್ಗೆ ಹೇಳಬೇಕು ಎಂದರೆ ಇವತ್ತು ಚೈನಾದಲ್ಲಿ 'ಒನ್ ಚೈಲ್ಡ್ ಪರ್ ಫ್ಯಾಮಿಲಿ' ಎನ್ನುವ ಒಂದು ಪಾಲಿಸಿಯನ್ನು ಮಾಡಿದ್ದಾರೆ. ಹಾಗೆ ನಾವೇನೂ ಕಡ್ಡಾಯ ಸಂತಾನಹರಣ ನೀತಿ ಮಾಡಿ ಎಂದು ಹೇಳುವುದಿಲ್ಲ. ಸ್ವಲ್ಪ ಈ ಸರ್ಕಾರಿ ಸವಲತ್ತುಗಳನ್ನು ತೆಗೆದುಕೊಳ್ಳುವಂಥವರಿಗೆ ಪ್ರಮೋಶನ್ಸ್ ಆಗಲಿ ಮತ್ತು ಸರ್ಕಾರಿ ಸೌಲಭ್ಯಗಳನ್ನು ಪಡೆಯುವಂತಹವರಿಗೆ ಫ್ಯಾಮಿಲಿ ಪ್ಲಾನಿಂಗ್ ಮೆಶರ್ಸ್‌ಗೆ ಸ್ವಲ್ಪ ಹೆಚ್ಚಿನ ಒತ್ತು ಕೊಟ್ಟು ಇಂಪ್ಲಿಮೆಂಟ್ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಭಾವಿಸುತ್ತೇನೆ. ಮತ್ತು ಹಳ್ಳಿಗಾಡಿನಲ್ಲಿ ಅವಿದ್ಯಾವಂತ ಸಾಮಾನ್ಯ ಜನತೆಗೂ ಕೂಡ ಅವರ ಮನವೊಲಿಸುವುದರ ಮೂಲಕ ಹೆಚ್ಚಿನ ಜನಸಂಖ್ಯಾ ಹತೋಟಿ ಮಾಡಿದರೆ ಮುಂದೆ ನಾವು ಈ ಪ್ರಗತಿ, ಇನ್ನೊಂದರ ಬಗ್ಗೆ ಸಾಧನೆ ಮಾಡುವುದಕ್ಕೆ ಆಗುತ್ತದೆ ಎಂದು ಕೂಡ ನಾನು ಭಾವಿಸುತೇನೆ.

ಮತ್ತೆ ಈ ಕೃಷಿ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆಯಾಗಿದೆ. ರೈತರು ದೇಶದ ಬೆನ್ನೆಲುಬು ಎಲ್ಲ ಮಾನ್ಯ ಸದಸ್ಯರುಗಳೂ ಕೂಡ ಸವಿಸ್ತಾರವಾಗಿ ಮಾತನಾಡಿದರು. ಈ ವಿಚಾರದಲ್ಲಿ ಒಂದು ಕಾಂಪ್ರಹೆನ್ಸಿವ್ ಅಗ್ರಿಕಲ್ಚರಲ್ ಪಾಲಿಸಿ, ಒಂದು ದಿಟ್ಟವಂದ ಕೃಷಿನೀತಿಯನ್ನು ನಮ್ಮ ರಾಜ್ಯಸರ್ಕಾರದವರು ರೂಪಿಸಬೇಕು ಎಂದು ನನಗನ್ನಿಸುತ್ತದೆ. ಯಾವುದೇ ಭಾಗದಲ್ಲಿ ಯಾವುದೇ ರೈತರ ಯಾವುದೇ ಬೆಳೆ ಬೆಳೆದರೂ ಕೂಡ ಅದಕ್ಕೆ ಸರಿಯಾದಂಥ ನಿಶ್ಚಿತ ಬೆಲೆಯಾಗಲಿ, ಮಾರ್ಕೆಟಿಂಗ್ ಆಗಲಿ, ಸ್ಥಿರತೆಯಾಗಿರತಕ್ಕಂಥ ಬೆಲೆಯಾಗಲಿ ಸಿಗುವಂಥಾದ್ದು ಇವತ್ತು ಇಲ್ಲ. ಇದು ನಿಜಕ್ಕೂ ದುರಾದೃಷ್ಟ. ಈ ವಿಚಾರದಲ್ಲಿ ಹಿಂದಿನ ಸರ್ಕಾರಗಳು ಕೂಡ ವಿಫಲವಾಗಿವೆಯೆಂದು ನನಗನ್ನಿಸುತ್ತದೆ. ಆದ್ದರಿಂದ ಈ ಬಗ್ಗೆ ಒಂದು ಅಗ್ರಿಕಲ್ಚರಲ್ ಪಾಲಿಸಿಯನ್ನು ಮಾಡಬೇಕು. ಯಾವ್ಯಾವ ಏರಿಯಾದಲ್ಲಿ ನಿರ್ದಿಷ್ಟವಾಗಿ ಯಾವ್ಯಾವ ಬೆಳೆಗಳನ್ನು ಬೆಳೆಯುತ್ತಾರೆ ಎಂಬುದನ್ನು ಗುರುತಿಸಬೇಕು ಮತ್ತು ಮಾರ್ಕೆಟಿಂಗ್ ಸಲುವಾಗಿ ಪ್ರೊಡಕ್ಷನ್ ಎಷ್ಟಾಗುತ್ತದೆ ಎಂಬುದರ ಬಗ್ಗೆ ಪ್ಲಾನ್ ಮಾಡಬೇಕು. ಮಾರ್ಕೆಟಿಂಗ್ ಸೋರ್ಸ್‌ಗಳನ್ನು ಸರ್ಕಾರ ವ್ಯವಸ್ಥಿತವಾದ ರೀತಿಯಲ್ಲಿ ಮಾಡಿದರೆ ಒಳ್ಳೆಯದು. ಅದೇರೀತಿ ರೈತರಿಗೆ ಸರಿಯಾದ ಮಾರ್ಗದರ್ಶನ ಸಿಗಬೇಕು. ಯಾವ ಕಾಲದಲ್ಲಿ ಯಾವ ಬೆಳೆ ಬೆಳೆಗಳನ್ನು ಬೆಳೆದರೆ ಯೋಗ್ಯ ಬೆಲೆ ಸಿಗುತ್ತದೆ ಎನ್ನುವುದರ ಬಗ್ಗೆ

ಸರ್ಕಾರ ಹೆಚ್ಚಿನ ಆಸಕ್ತಿವಹಿಸಿದರೆ ಇದುಸಾಧ್ಯ. ಒಂದು ಕಾಂಪ್ರ ಹೆನ್ಸಿವ್ ಅಗ್ರಿಕಲ್ಚರಲ್ ಪಾಲಿಸಿ ದೇಶದಲ್ಲಿ ಎಲ್ಲೂ ಕೂಡ ಆಗಿಲ್ಲ. ನಮ್ಮ ಕರ್ನಾಟಕ ರಾಜ್ಯ ಸರ್ಕಾರ ಇದನ್ನು ಮಾಡಿದರೆ ಒಳ್ಳೆಯದು ಎಂದು ನಾನು ಸನ್ಮಾನ್ಯ ಸಭಾನಾಯಕರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಈ ಉದ್ಯೋಗ ಭರವಸೆ ವಿಚಾರದಲ್ಲಿ ಹಳ್ಳಿಗಾಡಿನಲ್ಲಿ ಇರತಕ್ಕಂಥ ನಿರುದ್ಯೋಗಿ ಯುವಕರಿಗೆ ಯಾವುದೇ ವಿಧವಾದಂಥ ನಿರ್ದಿಷ್ಟ ಯೋಜನೆಗಳು ಈ ಭಾಷಣದಲ್ಲಿ ಇಲ್ಲ. ಈಗ ಕೇಂದ್ರಸರ್ಕಾರ ಕೊಡತಕ್ಕಂಥ ಪಿ.ಎಂ.ಆರ್.ವೈ. ಸ್ಕೀಮ್ಸ್ ಇವೆ. ಅದೇತರಹ ರಾಜ್ಯಸರ್ಕಾದಿಂದ ಯಾವುದಾದರೂ ಒಂದು ಕಾರ್ಯಕ್ರಮ ಹಾಕಿಕೊಂಡಿಲ್ಲ ಎಂಬುದು ಈ ಭಾಷಣದಲ್ಲಿ ವ್ಯಕ್ತವಾಗುತ್ತದೆ. ಇದರ ಬಗ್ಗೆ ಹೆಚ್ಚಿನ ಬೆಳಕನ್ನು ಸರ್ಕಾರ ಚೆಲ್ಲಬೇಕಾಗಿದೆ.

ಈ ಪವರ್ ಸೆಕ್ಟರ್‌ನಲ್ಲಿ ಇದು ಒಂದು ಕಂಟಿನ್ಯೂಯಸ್ ಪ್ರಾಬ್ಲಮ್. ಇದು ಮೊದಲಿಂದಲೂ ಇರತಕ್ಕಂಥ ಸಮಸ್ಯೆ. ಜನರೇಷನ್ ಮತ್ತು ಯುಟಿಲೈಶನ್ ಇವು ಕಂಟಿನ್ಯೂಡ್ ಪ್ರೊಸಸ್. ಕೆಲವಾರು ಜನರೇಶನ್‌ನಲ್ಲಿ ಕೂಡ ವಿದ್ಯುತ್ ಉತ್ಪಾದನೆ ನಮ್ಮಲ್ಲಿ ಕಡಿಮೆ ಇದ್ದರೂ ಕೂಡ ಆ ಸಮಸ್ಯೆಯಿಂದ ಇವತ್ತು ರೈತರಿಗೆ ವಿದ್ಯುತ್ ಸೆಕ್ಟರ್‌ಗಳನ್ನು ಕೊಡುತ್ತಿದ್ದೇವೆ. ಒಂದು ಅಸ್ಯೂರ್ಡ್ ಪವರ್ ಸಪ್ಲೈ ಯಾವುದೇ ಇಂಟರ್‌ಪಷನ್ ಇಲ್ಲದೇ ಇರಬೇಕು. ಈಗ ಏನಾಗುತ್ತಿದೆ ಎಂದರೆ, ಹಳ್ಳಿಗಾಡಿನಲ್ಲಿ ನಾವು ಬಹಳಷ್ಟು ಅನುಭವಿಸಿದ್ದೇವೆ; ಈಗಿನ ಪರಿಸ್ಥಿತಿಯಲ್ಲಿ ಪವರ್‌ಕಟ್ ಬಂದೇ ಬರುತ್ತದೆ. ಆದರೆ ಒಂದು ನಿರ್ದಿಷ್ಟವಾದ ಅವಧಿಯಲ್ಲಿ ಒಂದು ಅಶ್ಯೂರ್ಡ್ ಕಾಲದಲ್ಲಿ ಈ ತರಹ ನಮಗೆ ಪವರ್ ಸಿಗುತ್ತದೆ ಎನ್ನುವ ಒಂದು ನಂಬಿಕೆ ಕೂಡ ಇವತ್ತು ರೈತರಿಗೆ ಇಲ್ಲ. ಇದನ್ನು ಸರ್ಕಾರ ಚಾನಲೈಸ್ ಮಾಡುವುದು ಒಳ್ಳೆಯದೆಂದು ನನ್ನ ಭಾವನೆ.

ಇನ್ನು ಕೈಗಾರಿಕಾ ಕ್ಷೇತ್ರದ ಬಗ್ಗೆ ಹೇಳಬೇಕೆಂದರೆ, ನಾನು ಹಿಂದೆ ಪತ್ರಿಕೆಗಳಲ್ಲಿ ಓದಿದ್ದೆ; ಇನ್‌ಫ್ರಾ ಸ್ಟ್ರಕ್ಚರ್ ಫೆಸಿಲಿಟೀಸ್ ಕೊಡದೆ ಸಾಕಷ್ಟು ಮಲ್ಟಿನ್ಯಾಷನಲ್ ಕಂಪನಿಗಳು ಮತ್ತು ಕಂಪ್ಯೂಟರ್ ಕಂಪನಿಗಳು ಆಂಧ್ರಕ್ಕೆ ಹೋಗುತ್ತಿವೆ ಎಂದು. ಆದರೆ ಈಗಿನ ಪರಿಸ್ಥಿತಿಯಲ್ಲಿ ನಮ್ಮ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಎಲ್ಲಾ ಇನ್‌ಫ್ರಾಸ್ಟ್ರಕ್ಚರ್ ಪೆಸಿಲಿಟೀಸ್ ಅನ್ನು ಸರ್ಕಾರದಿಂದ ನಾವು ಕೊಡುತ್ತೇವೆ ಎನ್ನುವುದರ ಬಗ್ಗೆ ಪ್ರಸ್ತಾಪ ಇದೆ. ಮತ್ತು ಹಳ್ಳಿಗಾಡಿನ್ನಲಿ ಕೈಗಾರಿಕೆಗಳ ಬಗ್ಗೆ ಕೂಡ ಅಷ್ಟು ಸ್ಪಷ್ಟವಾದಂಥ ವಿಚಾರ ಇಲ್ಲ. ಇವತ್ತು ಹಳ್ಳಿಗಾಡಿನಲ್ಲಿ ಏನಾಗಿದೆ ಎಂದರೆ ಯುವಕರು ಅರ್ಧಂಬರ್ಧವಾಗಿ ಎಸ್‌ಎಸ್‌ಎಲ್‌ಸಿ, ಪಿ.ಯು.ಸಿ. ಓದಿರುತ್ತಾರೆ; ಆ ಕಡೆ ಅವರು ಬೇಸಾಯವನ್ನೂ ಮಾಡುವುದಿಲ್ಲ, ಇಲ್ಲಿ ಅವರಿಗೆ ಉದ್ಯೋಗವೂ ಸಿಗುವುದಿಲ್ಲ. ಹೀಗಾಗಿ ಬಹಳಷ್ಟು ಗ್ರಾಮೀಣ ಯುವಕರು ಇಂದು ನಿರುದ್ಯೋಗಿಗಳಾಗಿದ್ದಾರೆ. ಈ ನಿರು ದ್ಯೋಗಿ ಯುವಕರಿಗೆ ಏನಾದರೂ ರೂರಲ್ ಇಂಡಸ್ಟ್ರಿ ನೀತಿಯನ್ನು ತಂದು, ಅವರನ್ನು ಸ್ವಯಂ ಉದ್ಯೋಗದಲ್ಲಿ ತೊಡಗಿಸುವಲ್ಲಿ ಕಾರ್ಯಕ್ರಮ ರೂಪಿಸಿಕೊಳ್ಳುವುದರ ಬಗ್ಗೆ ಸ್ಪಷ್ಟವಾದ ಸರ್ಕಾರದ ಚಿಂತನೆ ಈ ರಾಜ್ಯಪಾಲರ ಭಾಷಣದಲ್ಲಿ ಕಾಣುತ್ತಿಲ್ಲ. ಜೊತೆಗೆ ನಮ್ಮ ತಾಲ್ಲೂಕು ಆಂಧ್ರಪ್ರದೇಶದ ಬಾರ್ಡರ್‌ನಲ್ಲಿದೆ. ಹಿಂದೆ ಮಾನ್ಯ ವೀರೇಂದ್ರ ಪಾಟೀಲರ ಕಾಲದಲ್ಲಿ ಬಾರ್ಡರ್ ಏರಿಯಾ ಡೆವಲಪ್‌ಮೆಂಟ್ ಫಂಡ್ ಅಂತ ಕೊಡುತ್ತಿದ್ದರು. ಆದರೆ ಈ ಪ್ರಸ್ತಾಪ ಇದರಲ್ಲಿ ಇಲ್ಲ. ವಿಶೇಷವಾಗಿ ನಾವು ಆಂಧ್ರ ಬಾರ್ಡರೆಗೆ ಸೇರಿದ್ದು ನಮ್ಮ ನೆರೆಯ ಗಡಿಪ್ರದೇಶದಲ್ಲಿ ಅನೇಕ ಕಾರ್ಖಾನೆಗಳು ಆಂಧ್ರಸರ್ಕಾರದಲ್ಲಿ ಬಂದಿವೆ. ಆದ್ದರಿಂದ ಈ ಬಾರ್ಡರ್ ತಾಲ್ಲೂಕುಗಳಿಗೆ

ಸರ್ಕಾರ ಹೆಚ್ಚಿನ ಒತ್ತನ್ನು ಕೊಡಬೇಕು, ಹೆಚ್ಚಿನ ಹಣಕಾಸನ್ನು ಈ ಅಭಿವೃದ್ಧಿ ಸಲುವಾಗಿ ಒದಗಿಸಬೇಕು ಎಂದು ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಮತ್ತೆ ಈ ಇನ್‌ಫಾರ್ಮೇಶನ್ ಟೆಕ್ನಾಲಜಿ ಬಗ್ಗೆ ಈ ಕಂಪ್ಯೂಟರೈಸೇಶನ್ ಬಗ್ಗೆ ಕೂಡ ಆಶಾದಾಯಕವಾದ ರೀತಿಯಲ್ಲಿ ಅದರ ಪ್ರೊಸೀಜರ್‌ನ್ನು ಸಿಂಲ್ಲಿಫಿಕೇಶನ್ ಮಾಡಬೇಕು. ಆಡಳಿತದಲ್ಲಿ ಒಂದು ಟ್ರಾನ್ಸಪರೆನ್ಸಿ ಬರಬೇಕು ಎನ್ನುವುದು ಕೂಡ ಅವರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಜೊತೆಗೆ ಇನ್‌ಫಾರ್ಮೇಶನ್ ಕಿಯೋನಿಸ್ ಎಂದರೆ ಸರ್ಕಾರದ ಏನೇ ಸ್ಕೀಮ್‌ಗಳಾಗಲೀ, ಡೇಟ್‌ಗಳಾಗಲೀ, ಸರ್ಟಿಫಿಕೇಟ್‌ಗಳಾಗಲೀ, ಇವನ್ನು ಈ ಒಂದು ಇನ್‌ಫಾರ್ಮೆಶನ್ ಕಿಯಾನಿಸ್ ಮುಖಾಂತರ ಪಡೆಯುವುದಕ್ಕೆ ಅನುಕೂಲ ಮಾಡುತ್ತೇವೆ ಎನ್ನುದನ್ನು ಕೂಡ ಸರ್ಕಾರ ಹೇಳಿದೆ. ಜೊತೆಗೆ ನೇರವಾಗಿ ಸಾಮಾನ್ಯ ಜನಕ್ಕೆ ಈ ಕಂಪ್ಯೂಟರೈಸೇಶನ್ ಹೇಗೆ ಅನ್ವಯಿಸುತ್ತದೆ, ಅದು ಅವರಿಗೆ ಹೇಗೆ ಅನುಕೂಲವಾಗುತ್ತದೆ ಎನ್ನುವುದರ ಬಗ್ಗೆ ವಿವರ ಇಲ್ಲ. ನಾನು ಕೇಳಿದ ವಿಚಾರ ಏನೆಂದರೆ ಆಂಧ್ರದಲ್ಲಿ ಒಂದು ಪಹಣಿ ಖಾತೆ ಪಡೆಯಲು ಅಥವಾ ಒಂದು ಆಸ್ತಿ ರಿಜಿಸ್ಟ್ರೇಷನ್ ಮಾಡುವ ವಿಚಾರದಲ್ಲಿ ಆಗಲಿ, ಅಥವಾ ಒಂದು ಜಾತಿ ಪ್ರಮಾಣಪತ್ರ ಪಡೆಯುವ ವಿಚಾರದಲ್ಲಿಯೇ ಆಗಲಿ, ಅಲ್ಲಿ ಕಂಪ್ಯೂಟರೈಸೇಶನ್ ಆಗಿದೆ, ಡಿಜಿಟಲೈಸೇಶನ್ ಆಗಿದೆ. ಅಂದರೆ ತಾಲ್ಲೂಕು ಆಫೀಸಿಗೆ ಹೋಗಿ ಬೇಕಾದಂಥ ಒಂದು ಪಹಣಿ ಖಾತೆಯನ್ನು ಕಂಪ್ಯೂಟ್‌ರನಲ್ಲಿ ಅವರು ತತಕ್ಷಣ ಪಡೆಯುತ್ತಾರೆ. ಆದರೆ ಇಲ್ಲಿ ಹಳ್ಳಿಗಳಲ್ಲಿ ಏನು ವ್ಯವಸ್ಥೆ ಇದೆಯೆಂದರೆ ಒಂದು ಪಹಣಿ ಖಾತಾ ಪಡೆಯಬೇಕಾದರೆ ಒಬ್ಬ ರೈತ ಕಾರ್ಯದರ್ಶಿ ಹತ್ತಿರ ಕೊಂಡು ಪಹಣಿಯನ್ನು ಕೊಡುತ್ತಾರೆ. ಇದೇ ಈಗ ಇರತಕ್ಕಂಥ ಸಂಪ್ರದಾಯ. ಇದು ಸಾಮಾನ್ಯ ಜನತೆಗೆ ಮುಟ್ಟುವ ರೀತಿಯಲ್ಲಿ. ಈ ಕಂಪ್ಯೂಟರೀಕರಣ ಹಂತಹಂತವಾಗಿ ಮಾಡಿದರೆ ಒಳ್ಳೆಯದೆಂದು ನನ್ನ ಭಾವನೆ. ಅರಣ್ಯದ ಬಗ್ಗೆ ಎಲ್ಲೂ ಕೂಡ ಪ್ರಸ್ತಾಪ ಇಲ್ಲ. ಇದರ ಬಗ್ಗೆ ಕೂಡ ಸನ್ಮಾನ್ಯ ಸದಸ್ಯರು ಚರ್ಚೆ ಮಾಡಿದ್ದಾರೆ. ಇನ್ನೊಂದು ವಿಶೇಷ ವಿಚಾರ ಕೂಡ ಇದರಲ್ಲಿ ಪ್ರಸ್ತಾಪವಾಗಿಲ್ಲವೆಂದು ನನ್ನ ಭಾವನೆ. ಪರಿಸರ ಅಸಮತೋಲನದ ಬಗ್ಗೆ ಮತ್ತು ನಮ್ಮಲ್ಲಿ ಏನಾಗಿದೆ ಎಂದರೆ, ಅದರಲ್ಲೂ ವಿಶೇಷವಾಗಿ ನಮ್ಮ ಕೋಲಾರ ಜಿಲ್ಲೆಯಲ್ಲಿ ಈ ಅಂತರ್‌ಜಲವನ್ನು ವಿಪರೀತವಾಗಿ ಬಳಸುತ್ತಿದ್ದೇವೆ. 80ರ ದಶಕದಲ್ಲಿ ಬಹಳಷ್ಟು ಬೋರ್‌ವೆಲ್‌ಗಳಲ್ಲಿ 100-150 ಅಡಿ ಆಳದಲ್ಲಿ ನೀರು ಸಿಗುತ್ತಿತ್ತು. ಇದರ ಬಗ್ಗೆ ಕೋಲಾರದ ನಮ್ಮ ಸನ್ಮಾನ್ಯ ಶಾಸಕರು ಕೂಡ ಪ್ರಸ್ತಾಪ ಮಾಡಿದ್ದಾರೆ. ಈಗ 600-700 ಅಡಿ ಆಳಕ್ಕೆ ಹೋದರೂ ಕೂಡ ನೀರು ಸಿಗುವುದು ಕಷ್ಟವಾಗಿದೆ. ನಮ್ಮ ಜಿಲ್ಲೆ ಮತ್ತು ತುಮಕೂರು ಜಿಲ್ಲೆಯಲ್ಲಿ ಈ ಅಂತರ್‌ಜಲ ತುಂಬಾ ಆಳಕ್ಕೆ ಹೋಗುತ್ತಿದೆ. ಇದಕ್ಕೆ ಒಂದು ಎಫೆಕ್ಟೀವ್ ಲೆಜಿಸ್ಲೇಷನ್ ತಂದರೆ ಒಳ್ಳೆಯದೆನಿಸುತ್ತದೆ. ನನ್ನ ಭಾವನೆ ಏನೆಂದರೆ, ಈ ಪರಿಸರ ಅಸಮತೋಲನವಾದಾಗ, 5 ವರ್ಷ ಅಥವಾ 10 ವರ್ಷದಲ್ಲಿ ಒಂದು ದಿವಸ ಈ ಅಂತರ್ ಜಲವೇ ಒಣಗಿ ಹೋಗತಕ್ಕ ಸಂದರ್ಭ ಬರಬಹುದೆಂದು ಒಂದುರೀತಿಯಲ್ಲಿ ಅನಿಸುತ್ತದೆ. ಏಕೆಂದರೆ ಇದನ್ನು ಒಂದು ಎಫೆಕ್ಟೀವ್ ಆಗಿ, ಒಂದು ಕಾಂಪ್ರೆಹೆನ್ಸೀವ್ ಪಾಲಿಸಿ ಮಾಡಿ, ಈ ಓವರ್ ಎಕ್ಸ್‌ಪ್ಯಾಂಡೇಷನ್‌ನ್ನು ತಡೆಯುವುದಕ್ಕೆ, ಒಂದು ಲೆಜಿಸ್ಲೇಷನ್ ತರುವುದರ ಮುಖಾಂತರ ಜೊತೆಗೆ ಅಫೋರ್‌ಸ್ಟೇಷನ್ ಈ ಅರಣ್ಯೀಕರಣದಿಂದ ಈ ಪರಿಸರ ಸಮತೋಲನ ಕಾಪಾಡಬಹುದು. ಜೊತೆಗೆ ಡೀಷಿಲ್ಟೇಷನ್ ಟ್ಯಾಂಕ್ಸ್ ಬಗ್ಗೆ ಹೇಳಬೇಕೆಂದರೆ

ಕೋಲಾರ ಜಿಲ್ಲೆಯಲ್ಲಿ ಇಡೀ ರಾಜ್ಯದಲ್ಲಿರತಕ್ಕ ಎಲ್ಲಾ ಜಿಲ್ಲೆಗಳಿಂತ ಹೆಚ್ಚು ಟ್ಯಾಂಕುಗಳು ಇವೆ. ಮತ್ತು ಚೆಕ್ ಡ್ಯಾಮ್ಸ್, ಡೀಶಿಲ್ಟೇಷನ್ ಟ್ಯಾಂಕ್ಸ್ ಮತ್ತು ಅಫೋರ್‌ಸ್ಟೇಷನ್ ಪ್ರೋಗ್ರಾಮ್ಸ್ ಇವುಗಳ ಜೊತೆಗೆ ಅಂಡರ್‌ಗ್ರೌಂಡ್ ವಾಟರನ್ನು ಉಳಿಸುವುದಕ್ಕೆ ಈ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಂಡರೆ ಸ್ವಲ್ಪಮಟ್ಟಿಗೆ ಸುಧಾರಣೆಯಾಗುತ್ತದೆಂದು ನಾನು ಭಾವಿಸುತ್ತೇನೆ. ಇದರ ಬಗ್ಗೆ ಸರ್ಕಾರ ಒಂದು ಕೋ ಆರ್ಡಿನೇಷನ್ ಕಮಿಟಿ ಮಾಡಿ, ಅರಣ್ಯೀಕರಣ, ಮೈನರ್ ಟ್ಯಾಂಕ್ಸ್, ಮೈನರ್ ಇರಿಗೇಷನ್ ಟ್ಯಾಯಂಕ್ ಮಿನಿಸ್ಟ್ರಿ ಮತ್ತು ಗಣಿ ಈ ಮೂರು ಇಲಾಖೆಗಳ ಬಗ್ಗೆ ಒಂದು ಕೋ-ಆರ್ಡಿನೇಷನ್ ಕಮಿಟಿ ಮಾಡಿ ಅಧ್ಯಯನ ಮಾಡಿದರೆ ಒಳ್ಳೆಯದೆಂದು ನನ್ನ ಭಾವನೆ. ಜೊತೆಗೆ ಒಳನಾಡು ಮೀನುಗಾರಿಕೆ ಬಗ್ಗೆಯಾಗಲೀ, ತೋಟಗಾರಿಕೆ ಬಗ್ಗೆ ಯಾಗಲೀ ಮತ್ತು ಕೋ-ಅಪರೇಟಿವ್ ಬಗ್ಗೆಯಾಗಲೀ ಇದರಲ್ಲಿ ವಿಸ್ತಾರವಾದ ಪ್ರಸ್ತಾಪ ಇಲ್ಲ. ನಾನು ಒಟ್ಟಾರೆ ಇಷ್ಟು ಹೇಳುವುದಕ್ಕೆ ಇಷ್ಟಪಡುತ್ತೇನೆ; ಮಾನ್ಯಸದಸ್ಯರೂ ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಎಂ.ಪಿ.ಫಂಡ್ ತರಹ ಎಂ.ಎಲ್.ಎಗಳಿಗೂ ಕೂಡ ಸರ್ಕಾರ ವರ್ಷಕ್ಕೆ ನಿರ್ದಿಷ್ಟವಾದ ಫಂಡ್ ಕೊಟ್ಟರೆ, ಈ ಪ್ಲಾನಿಂಗ್‌ನಲ್ಲಿ ಏನು ಅಸಮತೋಲನವಾಗಿರುತ್ತದೆ ಅದನ್ನು ಸ್ವಲ್ಪಮಟ್ಟಿಗೆ ನಾವು ಹಳ್ಳಿಗಳ ಕಡೆ ಹೋದಾಗ ಜನರ ಬೇಡಿಕೆಗೆ ತಕ್ಕಹಾಗೆ, ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. ಎಂ.ಎಲ್‌ಎ.ಫಂಡ್ ಕ್ರಿಯೇಟ್ ಮಾಡಬೇಕೆಂದು ನಾನು ಸರ್ಕಾರವನ್ನು ಕೋರುತ್ತೇನೆ. ಜೊತೆಗೆ ನಮ್ಮ ಪ್ಲಾನಿಂಗ್ ಸಿಸ್ಟಂನಲ್ಲಿ ಒಂದು ಪ್ರಾಸ್ಪೆಕ್ಟೀವ್ ಪ್ಲಾನಿಂಗ್ ಇಲ್ಲವೆಂದು ನನ್ನ ಭಾವನೆ. ಮುಂದೆ 5 ವರ್ಷ ಅಥವಾ 10 ವರ್ಷಕ್ಕೆ ನಮ್ಮ ದೇಶದಲ್ಲಿ ಅಥವಾ ನಮ್ಮ ರಾಜ್ಯದಲ್ಲಿ ನಾನಾ ಸಮಸ್ಯೆಗಳು, ಉದಾಹರಣೆಗೆ ಅದು ಟ್ರಾಫಿಕ್ ಆಗಬಹುದು, ಅಂಡರ್‌ಗ್ರೌಂಡ್ ವಾಟರ್ ರಿಸೋರ್ಸಸ್ ಆಗಬಹುದು ಅಥವಾ ಇನ್ನಿತರೇ ಸಮಸ್ಯೆಗಳಾಗಬಹುದು; 5 ವರ್ಷ ಅಥವಾ 10 ವರ್ಷಕ್ಕೆ ಏನಾಗಬಹುದು ಅದನ್ನು, ಆ ಸಂದರ್ಭದಲ್ಲಿ ಆ ಸಮಸ್ಯೆಗಳನ್ನು ನಿವಾರಿಸುವುದಕ್ಕೆ ನಾವೇನು ಕ್ರಮ ತೆಗೆದುಕೊಳ್ಳಬಹುದೆಂಬುದಕ್ಕೆ ಈಗಿನಿಂದಲೇ ರೂಪುರೇಷೆಗಳನ್ನು ಮಾಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಭಾವಿಸುತ್ತೇನೆ. ಈಗಿರತಕ್ಕ ಪ್ಲಾನಿಂಗ್ ಹೇಗಿದೆ ಎಂದರೆ, ಹಿಂದೆ ಮಾಡುತ್ತಿದ್ದ ಬಜೆಟ್‌ನ್ನು ಅನ್ವಯಿಸಿಕೊಂಡು ಮಾಡುತ್ತಾರೆ. ಮುಂದೆ 5-10 ವರ್ಷಕ್ಕೆ ಏನಾಗುತ್ತದೆ ಎಂದು ಯೋಚನೆ ಮಾಡುವುದಿಲ್ಲ. ಈಗಾಗಲೇ ಬೆಂಗಳೂರಿನಲ್ಲಿ ಟ್ರಾಫಿಕ್ ವಿಚಾರ ಎಲ್ಲರಿಗೂ ಅನುಭವವಾಗಿದೆ. ಇನ್ನು 5 ವರ್ಷಗಳಿಗೆ ಇನ್ನಷ್ಟು ರಸ್ತೆಗಳ ಮೇಲೆ ಬಂದಾಗ ಎಷ್ಟು ಈ ಟ್ರಾಫಿಕ್ ಒತ್ತಡವಾಗುತ್ತದೆ ಎಂಬುದರ ಬಗ್ಗೆ ಅಧ್ಯಯನ ಮಾಡಬೇಕು. ಮತ್ತು ಇದನ್ನು ತಡೆಗಟ್ಟುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ರೂಪಿಸ ಬೇಕೆಂಬುದನ್ನು ಮಾಡಬೇಕು. ಈ ತರಹ ಪ್ರತಿಯೊಂದು ಕ್ಷೇತ್ರದಲ್ಲೂ ಒಂದು ಪ್ರಾಸ್ಪೆಕ್ಟೀವ್ ಪ್ಲಾನಿಂಗ್ ಮಾಡಬೇಕೆಂದು ನಾನು ಸರ್ಕಾರವನ್ನು ಮನವಿ ಮಾಡಿಕೊಳ್ಳುತ್ತೇನೆ. ಮತ್ತೆ ಕೆಲವಾರು ಕಡೆ.ಪಿ.ಡಬ್ಲ್ಯು.ಡಿ.ಕಾಮಗಾರಿಗಳು ಬಹಳ ಕಳಪೆಯಾಗಿವೆ. ಇದರ ಬಗ್ಗೆ ಕೂಡ ಸರ್ಕಾರ ಹೆಚ್ಚಿನ ಗಮನಕೊಟ್ಟು ಡಾಂಬರೀಕರಣವಾಗಲೀ ಅಥವಾ ಕಟ್ಟಡಗಳನ್ನು ಕಟ್ಟುವುದಾಗಲೀ ಸರಿಯಾಗಿ ಮಾಡಬೇಕು. ನನಗನಿಸುತ್ತದೆ, ಈ ವಿಚಾರದಲ್ಲಿ ಸಂಬಂಧಪಟ್ಟ ಇಂಜಿನಿಯರುಗಳನ್ನೇ ಜವಾಬ್ದಾರರನ್ನಾಗಿ ಮಾಡಬೇಕು. ಅವರ ಮೇಲೆ ಜವಾಬ್ದಾರಿ ಫಿಕ್ಸ್ ಮಾಡಿದರೆ ಇನ್ನೂ ಹೆಚ್ಚಿನ ಕ್ವಾಲಿಟಿ ಕೆಲಸಗಳನ್ನು

ತೆಗೆದುಕೊಳ್ಳಬಹುದೇನೋ ಎಂದು ನನಗನಿಸುತ್ತದೆ. ಇಷ್ಟೆಲ್ಲಾ ಹೇಳಿ ಕೆಲವಾರು ಅಂಶಗಳನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿರತಕ್ಕಂಥ ಒಂದು ಆಶಾದಾಯಕವಾದ ಕೆಲಸಗಳನ್ನು ಮತ್ತು ರೂಪುರೇಷೆಗಳನ್ನು ಸರ್ಕಾರ ಏನು ಹಾಕಿಕೊಂಡಿದೆ ಇದನ್ನು ಸ್ವಾಗತಿಸುತ್ತಾ, ಕೆಲವಾರು ಸಲಹೆಗಳನ್ನು ನೀಡುತ್ತಾ, ಸನ್ಮಾನ್ಯ ಸಭಾಧ್ಯಕ್ಷರು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ವಂದಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎಂ.ಜಿ.ಮುಳೆ(ಬಸವಕಲ್ಯಾಣ):- ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಬಗ್ಗೆ ಮಾತನಾಡಲು ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತತೇನೆ. ನಾನು ಯಾವುದೇ ವಿಷಯದ ಬಗ್ಗೆ ಇಲ್ಲಿ ಚರ್ಚೆ ಮಾಡದೇ, ನೇರವಾಗಿ ನನ್ನ ಜಿಲ್ಲೆ ಬೀದರ್‌ನ ಬಸವಕಲ್ಯಾಣ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೆಲವು ಸಮಸ್ಯೆಗಳನ್ನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕಾವೇರಿ ಹಾಗೂ ಕೃಷ್ಣಾ ಬೇಸಿನ್ ಬಗ್ಗೆ ಸಾಕಷ್ಟು ಪ್ರಸ್ತಾಪ ಇದೆ. ಆದರೆ, ಗೋದಾವರಿ ಬೇಸಿನ್ ಬಗ್ಗೆ ಯಾವುದೇ ಉಲ್ಲೇಖ ಇಲ್ಲ. ಗೋದಾವರಿ ಬೇಸಿನ್‌ನ್ನು ನಮ್ಮ ಬೀದರ್ ಜಿಲ್ಲೆಯಲ್ಲಿ ಹೊಡೆದಂಥ ಕಾರಂಜ ಪ್ರಾಜೆಕ್ಟ್, ಚುಳುಕಿ ನಾಲಾ ಇವು ಮಾಂಜ್ರಾ ನದಿ ಮೇಲೆ ಬ್ರಿಡ್ಜ್ ಕಮ್ ಬ್ಯಾರೇಜಸ್ ಆಗಲೀ ಇವು 30 ವರ್ಷವಾದರೂ ಇನ್ನು ಪೂರ್ತಿಯಾಗಲಿಲ್ಲ. ಈ ಯೋಜನೆಗಳು ಪೂರ್ತಿಯಾಗಬೇಕಾದರೆ, ಸಮಯಬದ್ಧ ಕಾರ್ಯಕ್ರಮದಲ್ಲಿ ಇವುಗಳನ್ನು ಅಳವಡಿಸಿದರೆ ಆಗುತ್ತದೆ. ಅದಕ್ಕೆ ಬೇಕಾದಂಥ ಹಣದ ವ್ಯವಸ್ಥೆ ಮಾಡಿ, ಪೂರ್ತಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮಾಂಜ್ರಾ ನದಿ ಮೇಲೆ ಬ್ರಿಡ್ಜ್ ಬ್ಯಾರೇಜಸ್ ಬಗ್ಗೆ ಕೆಲವು ಇಂಟರ್‌ಸಟ್ಟೇಟ್ ಸಮಸ್ಯೆಗಳು ಇವೆ. ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ಸರ್ಕಾರಗಳು ತಮ್ಮ ಪಾಲಿನ ಹಣವನ್ನು ಈಗಾಗಲೇ ಡಿಪಾಸಿಟ್ ಮಾಡಲು ಸಿದ್ಧಂದ್ದಾರೆ. ನಮ್ಮ ಸರ್ಕಾರ ತಮ್ಮ ಪಾಲಿನ ಹಣವನ್ನು ವ್ಯವಸ್ಥೆ ಮಾಡಿ, ಈ ಯೋಜನೆಗಳನ್ನು (ಪ್ರಾಜೆಕ್ಟ್‌ಗಳನ್ನು) ಪೂರ್ತಿ ಮಾಡಬೇಕು. ಇದು ಶ್ರೀಘ್ರಗತಿಯಲ್ಲಿ ಆದ್ದರೆ ನಮ್ಮ ಜಿಲ್ಲೆಯಲ್ಲಿ ನೀರಾವರಿ ಮತ್ತು ಸಾರಿಗೆ

5.20 ಪಿ.ಎಂ.

ಸಂಪರ್ಕಕ್ಕೆ ಬಹಳ ಸುಲಭವಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಪರಂಪರಾಗತವಾಗಿ ಬಂದಿರತಕ್ಕ ಓಪನ್ ವೆಲ್‌ಗಳಿಗೆ ಪಂಪ್‌ಸೆಟ್ ಕೂಡಿಸಿ, ನೀರಾವರಿ ಜಾಸ್ತಿ ಸಂಖ್ಯೆಯಲ್ಲಿ ಆಗುತ್ತಿದೆ. ರೈತರು ಬಾವಿಯಿಂದ ನೀರಾವಾರಿ ಮಾಡಲು ಹೆಚ್ಚು ಆಸಕ್ತಿ ತೋರಿಸುತ್ತಾರೆ. ಆದರೆ, ಅಂಡರ್‌ಗ್ರೌಂಡ್ ವಾಟರ್ ಇಂಪ್ರೂವ್ ಆಗಬೇಕು. ಕನಿಷ್ಟಮಟ್ಟದಲ್ಲಿ ವಾಟರ್ ಷಿಲ್ಟ್ ಪ್ರೋಗ್ರಾಮ್ ಚೆಕ್ ಡ್ಯಾಮ್ಸ್, ಪರ್ಕ್ಯುಬೇಷನ್ ಟ್ಯಾಂಕ್ಸ್, ಸೋಲಾಪುರ್ ಟೈಪೆ ಟ್ಯಾಂಕ್ಸ್ ಬಗ್ಗೆ ಕಾರ್ಯಕ್ರಮ ಹಾಕಬೇಕೆಂದು ಹೇಳುತ್ತೇನೆ. ಅಂಡರ್ ಗ್ರೌಂಡ್ ವಾಟರ್ ಸರ್ವೆಯನ್ನು ಸರ್ಕಾರದ ಮುಖಾಂತರ ಮಾಡಿ ಬಾವಿಗಳನ್ನು ತೆಗೆಯಲು ಸರ್ಕಾರ ಅನುಮತಿಯನ್ನು ಕೊಡಬೇಕು. ಮತ್ತು ಅದರ ದಾಖಾಲಾತಿಯನ್ನು ಸರ್ಕಾರದ ಪರವಾಗಿ ನಮೂದು ಮಾಡಬೇಕು; ಅಂದರೆ ಪಹಣಿ, ಖಾತಾ ಇತ್ಯಾದಿ. ನನ್ನ ಮತ ಕ್ಷೇತ್ರದಲ್ಲಿ ಹಲವಾರು ಸಣ್ಣ ನೀರಾವರಿ ಕೆರೆಗಳು ಇವೆ. ಆದರೆ ಇದರ ಉಪಯೋಗ ನಮ್ಮ ರೈತರಿಗೆ ಆಗುತ್ತಿಲ. ನನ್ನ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಅಲಗೂರು

ಟ್ಯಾಂಕ್ ಅಂತ ಒಂದು ಮೈನರ್ ಇರಿಗೇಶನ್ ಟ್ಯಾಂಕ್ ಇದೆ. ಒಂದು ವರ್ಷದ ಅಂತರದಲ್ಲಿ ಅದು ಎರಡು ಸಾರಿ ಬ್ರೀಚ್ ಆಗಿ ಅದು ಹೊಡೆದು ಹೋಗಿ ಒಂದು ಇಂಚು ಭೂಮಿಗೆ ನೀರು ಕೊಡಲಾರದೆ ಪೂರ್ತಿ ಟ್ಯಾಂಕಿನ ಕೆಳಗಡೆ ಬರುವಂತಹ ಭೂಮಿಗೆ ಹರಿದು ಹೋಗಿ ಅದರ ಕೆಳಗಡೆ ಇರುವಂತಹ ಎರಿಯಾದಲ್ಲಿ ಪವರ್ ಲೈನ್ ಸಂಪೂರ್ಣ ಕೆಟ್ಟು ಹೋಗಿ ಅಲ್ಲಿದ್ದಂತಹ ಡ್ರಿಪ್ ಇರಿಗೇಶನ್ ಎಲ್ಲಾ ಹೋಗಿದೆ. ಇವತ್ತು ಸರ್ಕಾರದ ಕಡೆಯಿಂದ ಯಾವುದೇ ನ್ಯಾಯಯುತವಾದ ಪರಿಹಾರ ವ್ಯವಸ್ಥೆ ಮತ್ತು ಪುನರ್ವಸತಿ ಕೆಲಸ ಆಗಲಲ್ಲ. ಮಾನ್ಯ ಅಧ್ಯಕ್ಷರೆ ಬಸವಕಲ್ಯಾಣ ಮಹಾರಾಷ್ಟ್ರ ರಾಜ್ಯದ ಪಕ್ಕದ ಒಂದು ತಾಲ್ಲೂಕು. ಪಕ್ಕದ ರಾಜ್ಯದಲ್ಲಿ ಈ ದುರಂತ ಪರಿಹಾರ ಕೊಡುವುದಕ್ಕೆ ಒಂದು ಕಾರ್ಯಕ್ರಮ ಇದೆ. "ಪರಿತರಿ" ಈ ತರಹ ಯಾವುದೇ ಮನೆ ಬೀಳಲಿ, ಟ್ಯಾಂಕ್ ಹೊಡೆಯಲ ತಕ್ಷಣ ಈ ತರಹ ಪರಿಹಾರ ಕೊಡುವಂತಹ ಒಂದು ವ್ಯವಸ್ಥೆ ಇದೆ. ಆದರೆ ನಮ್ಮಲ್ಲಿ ಎರಡು ಸಾರಿ ಟ್ಯಾಂಕ್ ಹೊಡೆದು ಹೋಯಿತು, ಸಾವಿರಾರು ಎಕರೆ ಭೂಮಿ ಹರಿದು ಹೋಯಿತು, ಆದರೂ ಯಾವುದೇ ಪರಿಹಾರ ಸಿಗಲಿಲ. ನಾಲೆಗಳಲ್ಲಿ ಫ್ಲೋ ಅಫ್ ವಾಟರ್ ಎನು ಇದೆ ಅದು ಸಹ ದುರ್ವ್ಯವಸ್ಥೆಯಿಂದ ಕೂಡಿದೆ ಅದೂ ಸರಿ. ಪಕ್ಕದ ರಾಜ್ಯದಲ್ಲಿನ ಅಂತಹ ವ್ಯವಸ್ಥೆ ನಮ್ಮಲ್ಲಿ ಕೂಡ ಆಗಬೇಕು. ನಾನು ಕಳೆದ ಎರಡು ದಿರಸಗಳಿಂದ ಈ ಸದನದಲ್ಲಿ ಮಾನ್ಯ ರಾಜ್ಯಪಾಲರ ಭಾವಷಣದ ಮೇಲೆ ಮಾತನಾಡಿದ ಮಾನ್ಯ ಸದಸ್ಯರುಗಳ ಭಾಷಣವನ್ನು ಕೇಳುತ್ತಿದ್ದೇನೆ. ಈ ಕೃಷಿ ಮತ್ತು ಕೃಷಿ ಉತ್ಪಾದನೆ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆಯಾಗಿದೆ. ನಮ್ಮ ಜಿಲ್ಲೆಯಲ್ಲಿ ಹೆಚ್ಚಾಗಿ ಏನು ಕಬ್ಬು ಬೆಳೆಯುತ್ತೇವೆ ಆ ಕಬ್ಬಿನ ಬಗ್ಗೆ ಯಾರೂ ಸಹ ಚರ್ಚೆಮಾಡಲಿಲ್ಲ. ನಮ್ಮ ಜಿಲ್ಲೆಯಲ್ಲಿ ಪ್ರತಿ ವರ್ಷ 16-18 ಲಕ್ಷ ಮೆಟ್ರಿಕ್ ಟನ್ ಕಬ್ಬು ಬೆಳೆಯುತ್ತೇವೆ. ಬರುವ ನವೆಂಬರ್ ತಿಂಗಳಲ್ಲಿ ಕಬ್ಬು ಕಟಾವಿಗೆ ರೆಡಿಯಾಗಿದೆ. ನಮ್ಮ ಜಿಲ್ಲೆಯಲ್ಲಿರುವ ಒಂದೇ ಒಂದು ಸಕ್ಕರೆ ಕಾರ್ಖಾನೆಯಲ್ಲಿ ಸುಮಾರು 4 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಕಬ್ಬು ಕ್ರಶ್ ಮಾಡಬಹುದು. ಒಂದರಿಂದ ಒಂದೂವರೆ ಲಕ್ಷ ಮೆಟ್ರಿಕ್ ಟನ್ ಕಬ್ಬು ಖಂಡಸಾರಿ ಹಾಗೂ ಜಾಗರಿ ಮಾಡಬಹುದು. ಇನ್ನುಳಿದ 10-12 ಲಕ್ಷ ಮೆಟ್ರಿಕ್ ಟನ್ ಕಬ್ಬು ಕ್ರಶ್ ಮಾಡಲು ಪ್ರತಿವರ್ಷದಂತೆ ಈ ವರ್ಷವೂ ಸಹಗಂಭೀರ ಸಮಸ್ಯೆ ಇದೆ. ಹೋದವರ್ಷ ಆಗಿನ ಸರ್ಕಾರದ ಸಕ್ಕರೆ ಮಂತ್ರಿಗಳು ಮುಂಬೈಗೆ ಹೋಗಿ ಮಹಾರಾಷ್ಟ್ರ ಸರ್ಕಾರದ ಜೊತೆಯಲ್ಲಿ ಮಾತನಾಡಿ ನಮ್ಮ ರಾಜ್ಯದ ಕಬ್ಬನ್ನು ಅವರ ರಾಜ್ಯದಲ್ಲಿ ಕ್ರಶ್ ಮಾಡುವ ವ್ಯವಸ್ಥೆ ಮಾಡಿದ್ದರು. ಈ ವರ್ಷ ಕೂಡ ಅದೇ ಪರಿಸ್ಥಿತಿ ಇದೆ. ಅದ್ದರಿಂದ ಈ ಸರ್ಕಾರ ಮೊದಲೇ ಮಹಾರಾಷ್ಟ್ರ ಸರ್ಕಾರದ ಜೊತೆಯಲ್ಲಿ ಮಾತನಾಡಿ ನಮ್ಮ ರಾಜ್ಯದ ಕಬ್ಬನ್ನು ಅವರು ಕ್ರಶ್ ಮಾಡುವ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿ ಕೊಳ್ಳುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಸಂದರ್ಭ ಇದೆ. ಈ ಕಬ್ಬು ಬೆಳೆಗೆ ನಮ್ಮ ಜಿಲ್ಲೆಯಲ್ಲಿ ಪರ್ಮನೆಂಟ್ ಆಗಿ ಒಂದು ಪರಿಹಾರ ಕಂಡು ಹಿಡಿಯಬೇಕಾದರೆ ಪುನಃ ಹೊಸದಾಗಿ ಎರಡು ಮೂರು ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭ ಮಾಡಬೇಕಾಗುತ್ತದೆ. ಸಹಕಾರ ಕ್ಷೇತ್ರದಲ್ಲಿಯೇ ಆಗಲಿ ಅಥವಾ ಖಾಸಗಿ ಕ್ಷೇತ್ರದಲ್ಲಿಯೇ ಆಗಲಿ ಸರ್ಕಾರ ವಿಶೇಷವಾಗಿ ಆಸಕ್ತಿ ವಹಿಸಿ, ಮಾನ್ಯ ಮುಖ್ಯಮಂತ್ರಿಗಳು ಸಹ ಆಸಕ್ತಿ ವಹಿಸಿ ನಮ್ಮ ಜಿಲ್ಲೆಯ ರೈತರ ಸಮಸ್ಯೆಗೆ ಪರಿಹಾರ ಕಂಡು ಹಿಡಿಯಬೇಕು. ನಮ್ಮ ಬೀದರ್ ಜಿಲ್ಲೆಯಲ್ಲಿ ರೈತರು ಬೆಳೆಯುವ ಕೃಷಿ ಉತ್ಪಾದನೆಯನ್ನು ಮಾರಾಟ ಮಾಡಲು ಯಾವುದೇ ವ್ಯವಸ್ಥೆ ಇಲ್ಲ. ತಾಲ್ಲೂಕು ಮಟ್ಟದ ಎ.ಪಿ.ಎಂ.ಸಿ.ಮಾರ್ಕೆಟ್‌ಯಾರ್ಡ್‌ಗಳು ಹಣದ ಕೊರತೆಯಿಂದ ಮುಚ್ಚಿ

ಹೋಗುವ ಸ್ಥಿತಿಯಲ್ಲಿವೆ. ನಮ್ಮ ಭಾಗದಲ್ಲಿ ಬೆಳೆದ ತೊಗರಿ, ಶೇಂಗಾ, ಎಳ್ಳು, ಕಡಲೆ, ಉದ್ದು ಮತ್ತು ಬೆಲ್ಲ ಇವೆಲ್ಲಾ ಪಕ್ಕದ ರಾಜ್ಯವಾದ ಮಹಾರಾಷ್ಟ್ರ ಮಾರುಕಟ್ಟೆಯಾದ ಲಾಥೂರ್‌ಗೆ ಹೋಗುತ್ತಿದೆ. ಇದಕ್ಕೆ ಕಾರಣ ಅಲ್ಲಿ ಹೆಚ್ಚು ಬೆಲೆ ಸಿಗುತ್ತದೆ. ನಮ್ಮಲ್ಲಿ ಹೆಚ್ಚು ಬೆಲೆ ಸಿಗುವುದಿಲ್ಲ. ನಾನು ನಮ್ಮ ಮಾರ್ಕೆಟ್‌ನಲ್ಲಿ ಹೋಗಿ ಕೇಳಿದರೆ ನಮ್ಮ ರಾಜ್ಯದ ಮಾರುಕಟ್ಟೆಯಲ್ಲಿ ತೆರಿಗೆ ಬಹಳ ಜಾಸ್ತಿ ಇದೆ ಎಂದು ಹೇಳುತ್ತಾರೆ. ಈ ತೆರಿಗೆಗಳನ್ನು ಕಡಿಮೆ ಮಾಡಬೇಕು, ತೆರಿಗೆಗಳನ್ನು ಕಡಿಮೆ ಮಾಡಿದರೆ ರೈತರು ಮಾಲನ್ನು ನಮ್ಮ ರಾಜ್ಯದ ಮಾರುಕಟ್ಟೆಗಳಲ್ಲಿ ಮಾರಾಟ ಮಾಡುತ್ತಾರೆ ಅದರ ಲಾಭಾ ನಮಗೆ ಅಗುತ್ತದೆ. ನಮ್ಮ ರಾಜ್ಯದ ಮಾರುಕಟ್ಟೆಗಳು ಸಹ ಬಲಯುತವಾಗುತ್ತವೆ. ಇದು ಕೃಷಿ ಉತ್ಪಾದನೆ ಮಾರಾಟ ಅಷ್ಟೇ ಅಲ್ಲ. ಯಾವುದೇ ಒಬ್ಬ ರೈತ ಮಾರುಕಟ್ಟೆಗೆ ಬಂದರೆ ರೈತ ತನ್ನ ಮಾಲನ್ನು ಮಾರಾಟ ಮಾಡಿ ವಾಪಸ್ಸು ಹೋಗುವಾಗ ತನಗೆ ಬೇಕಾದ ಕಿರಾಣ ಆಗಲಿ, ಜವಳಿ ಆಗಲಿ ಅಲ್ಲಿನ ಅಂಗಡಿಗಳಲ್ಲಿಯೇ ಖರೀದಿ ಮಾಡುತ್ತಾರೆ. ನಮ್ಮ ಕರ್ನಾಟಕ ರಾಜ್ಯದ ಮಾರುಕಟ್ಟೆ ಮೇಲೆ ಕರ್ನಾಟಕ ರಾಜ್ಯದ ಉತ್ಪನ್ನಗಳ ಮೇಲೆ ಮಹಾರಾಷ್ಟ್ರದ ಮಾರುಕಟ್ಟೆಗಳು ಬಹಳ ಬೆಳೆಯುತ್ತಿವೆ. ಆದ್ದರಿಂದ ಈ ಕೃಷಿ ಉತ್ಪನ್ನಗಳ ಮೇಲೆ ಎನು ತೆರಿಗೆ ಇದೆ ಅದನ್ನು ಕಡಿಮೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಬೀದರ್ ಜಿಲ್ಲೆಯಲ್ಲಿ ಭೂಮಿ, ಹವಾಮಾನ ಮತ್ತು ನೀರು ಇವುಗಳಿಂದ ಹಾಲು ಉತ್ಪಾದನೆಗೆ ಬಹಳ ಅನುಕೂಲ ಇದೆ. ನಮ್ಮ ಜಿಲ್ಲೆಯಲ್ಲಿ ಹಾಲಿನ ಡೇರಿ ಇಲ್ಲ. ನಮ್ಮ ಜಿಲ್ಲೆಯಲ್ಲಿ ನಮ್ಮದೇ ಆದಂತಹ ಒಂದು ದೇವಣಿ ಬೀಡು ಇದೆ. ಇಲ್ಲಿ ಉತ್ಪಾದನೆ ಜಾಸ್ತಿ ಇದೆ. ಇಲ್ಲಿ ಹಾಲಿನ ಡೇರಿ ಆದರೆ ಇನ್ನೂ ಹೆಚ್ಚು ಹಸು ಮತ್ತು ಎಮ್ಮೆಗಳನ್ನು ಸಾಕಾಣಿಕೆ ಮಾಡುತ್ತಾರೆ. ಕೃಷಿಯ ಜೊತೆಗೆ ಇದೊಂದು ಸಪ್ಲಿಮೆಂಟರಿ ಆದಾಯವಾಗುತ್ತದೆ. ಆ ಕಾರಣ ನಮ್ಮಲ್ಲಿ ಒಂದು ಡೇರಿ ಅದಷ್ಟು ಬೇಗ ಆಗಬೇಕು. ಇಲ್ಲಿ ಹೆಚ್ಚು ಪಶುವೈದ್ಯರು ಮತ್ತು ಆಸ್ಪತ್ರೆಗಳನ್ನು ಮಾಡುವುದು ಸೂಕ್ತವಾಗಿದೆ.

ಇನ್ನು ನಾನು ಹೆಲ್ತ್‌ಕೇರ್ ಬಗ್ಗೆ ಮಾತನಾಡಬೇಕಾದರೆ, ನಾವು ಬಹಳ ದಯಾನೀಯ ಮತ್ತು ಶೋಚನೀಯವಾದ ಸ್ಥಿತಿಯಲ್ಲಿದ್ದೇವೆ. ಬಸವಕಲ್ಯಾಣ ಪಟ್ಟಣದಲ್ಲಿ ಸರಿಯಾದ ಡಾಕ್ಟರ್ಸ್ ಇಲ್ಲ; ಒಳ್ಳೆಯ ಔಷಧಿ ಇಲ್ಲ. ಒಂದು ತಾಲ್ಲೂಕು ಮಟ್ಟದ ಆಆಸ್ಪತ್ರೆಯಲ್ಲಿ ಒಂದು ಎಕ್ಸರೇ ಮೆಷನ್ ಸಹ ಇಲ್ಲ. ಇನ್ನು ಗ್ರಾಮಾಂತರ ಪ್ರದೇಶದಲ್ಲಿ ಪರಿಸ್ಥಿತಿ ಇದಕ್ಕಿಂತ ಶೋಚನೀಯವಾಗಿದೆ. ಸಣ್ಣ ಪುಟ್ಟ ಖಾಯಿಲೆಗಳಿಗೂ ಸಹ ಜನ ಪಕ್ಕದ ರಾಜ್ಯಕ್ಕೆ ಹೋಗುವಂತಹ ಸ್ಥಿತಿ ಇದೆ. ಸೋಲಾಪುರ ಆಗಲಿ, ಗುಲ್ಬರ್ಗ ಆಗಲಿ, ಲಾಥೂರ್ ಆಗಲಿ, ಹೈದ್ರಾಬಾದ್‌ಾಗಲಿ ಇವು ನೂರಾರು ಕಿಲೋಮೀಟರ್‌ಗಳಷ್ಟು ದೂರ ಇದೆ. ಇದರಿಂದ ವಿಶೇಷವಾಗಿ ಬಡಜನರಿಗೆ ಬಹಳ ತೊಂದರೆ ಯಾಗುತ್ತಿದೆ. ಇದರ ಬಗ್ಗೆ ಸರ್ಕಾರ ವಿಶೇಷ ಗಮನ ಕೊಡುವ ಅವಶ್ಯಕತೆ ಇದೆ. ಇನ್ನು ಬಸರವಕಲ್ಯಾಣ ಪಟ್ಟಣದಲ್ಲಿ ಹಳೆಯ ಸಿಟಿ ಅಲ್ಲಿಗೆ ಒಂದು ಕೃತಕ ಆಸ್ಪತ್ರೆಯ ಅವಶ್ಯಕತೆ ಇದೆ. ಅಲ್ಲಿಗೆ ಆ ಒಂದು ಕನಿಷ್ಟ ಓ.ಪಿ.ಡಿ ಅಸ್ಪತ್ರೆಯಾದರೂ ಆಗಬೇಕು.

ಇನ್ನು ರಸ್ತೆಗಳ ಬಗ್ಗೆ ನಾನು ಮಾತನಾಡಬೇಕಾದರೆ, ನನ್ನ ಕ್ಷೇತ್ರದಲ್ಲಿ ಅಥವಾ ಬೀದರ್ ಜಿಲ್ಲೆಯಲ್ಲಿ ಇದು ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶ ಈ ಎರಡೂ ರಾಜ್ಯಗಳ ಇದುಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶ ಈ ಎರಡೂ ರಾಜ್ಯಗಳ ಗಡಿ ಪ್ರದೇಶದಲ್ಲಿ ಬರುತ್ತದೆ. ಇದು ಮಹಾರಾಷ್ಟ್ರ

ಮತ್ತು ಆಂಧ್ರ ಪ್ರದೇಶದ ಕನೆಕ್ಟಿಂಗ್ ರೋಡ್ಸ್. ನಮ್ಮ ರಾಜ್ಯದ ಪಕ್ಕದ ರಾಜ್ಯಗಳಾದ ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಸದ ರಸ್ತೆಗಳಿಗೆ ಹೊಂದಿಕೊಂಡಿವೆ. ಈ ಎರಡೂ ರಾಜ್ಯಗಳ ರಸ್ತೆಗಳು ನಮ್ಮ ರಾಜ್ಯದ ಗಡಿಯವರೆಗೂ ಪಕ್ಕಾ ಡಾಮರ್ ರಸ್ತೆಗಳನ್ನಾಗಿ ಮಾಡಿದ್ದಾರೆ. ಆದರೆ ನಮ್ಮ ರಾಜ್ಯದ ರಸ್ತೆಗಳು ಮಾತ್ರ ಬಹಳ ಕೆಟ್ಟ ಪರಿಸ್ಥಿತಿಯಲ್ಲಿವೆ. ಈ ರಸ್ತೆಗಳನ್ನು ಸರಿಯಾಗಿ ಡಾಮರೀಕರಣ ಮಾಡಿದರೆ ಅಂತರ್‌ರಾಜ್ಯ ಸಂಚಾರ ಸತತವಾಗಿ ಸುಲಭವಾಗುತ್ತದೆ. ಇನ್ನು ನನ್ನ ಮತಕ್ಷೇತ್ರವಾದ ಬಸವಕಲ್ಯಾಣದ ಬಗ್ಗೆ ನಾನು ಮಾತನಾಡಬೇಕಾದರೆ, ಡಿಸ್ಟ್ರಿಕ್ ಹೆಡ್ ಕ್ವಾರ್ಟರ್‌ಗೆ ಆಗಲಿ, ತಾಲ್ಲೂಕು ಹೆಡ್ ಕ್ವಾರ್ಟರ್‌ಗೆ ಆಗಲಿ ಹೋಗುವ ಕನೆಕ್ಟಿಂಗ್ ರಸ್ತೆಗಳು ಬಹಳ ಕೆಟ್ಟ ಸ್ಥಿತಿಯಲ್ಲಿವೆ. ಬಸವಕಲ್ಯಾಣ ಪಟ್ಟಣದಿಂದ ಸುಮಾರು 10 ಕಿಲೋಮೀಟರ್ ದೂರದಲ್ಲಿ ಮಹಾರಾಷ್ಟ್ರದ ರಸ್ತೆಗಳು ಪ್ರಾರಂಭವಾಗುತ್ತವೆ. ಜನ ಅಲ್ಲಿನ ರಸ್ತೆಗಳಿಗೂ ನಮ್ಮ ರಾಜ್ಯದ ರಸ್ತೆಗಳಿಗೂ ಕಂಪೇರ್ ಮಾಡುತ್ತಾರೆ. ನನ್ನ ಕ್ಷೇತ್ರದಲ್ಲಿ ರಾಷ್ಟ್ರೀಯ ಹೆದ್ದಾರಿ 9 ಹೋಗುತ್ತದೆ. ರಾಷ್ಟ್ರೀಯ ಹೆದ್ದಾರಿಯಿಂದ ಕೇವಲ 6 ಕಿಲೋಮೀಟರ್‌ಗಳಲ್ಲಿ ಬಾರ್ಡರ್‌ನಲ್ಲಿ ಒಂದು ಹಳ್ಳಿ ಇದೆ. ಆ ಹಳ್ಳಿಗೆ ಇವತ್ತಿಗೂ ಸಹ ಹೋಗಲು ಯಾವುದೇ ರಸ್ತೆಯ ಸೌಕರ್ಯ ಇಲ್ಲ. ಆ 6 ಕಿಲೋಮೀಟರ್ ರಸ್ತೆ ದುರಸ್ಥಿಯಾದರೆ ಅದು ರಾಷ್ಟ್ರೀಯ ಹೆದ್ದಾರಿಗೆ ಸೇರಿಕೊಳ್ಳುತ್ತದೆ. ಇದರ ಬಗ್ಗೆ ಸರ್ಕಾರ ಹೆಚ್ಚು ಗಮನೆ ಕೊಡುವಂತೆ ನಾನು ಕೇಳಿಕೊಳ್ಳುತ್ತೇನೆ. ಬೆಂಗಳೂರು ನಗರ ಬೆಳವಣಿಗೆ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಒಂದು ವಿಶೇಷ ವಿವೇಚನೆ ಇದೆ. ಇದು ಸಂತೋಷದ ಸಂಗತಿ.

ಅಧ್ಯಕ್ಷರು:- ಮಾನ್ಯ ಸದಸ್ಯರು ಬೇಗ ಮುಗಿಸಬೇಕು. ಇನ್ನೂ ಬಹಳ ಜನ ಮಾನ್ಯ ಸದಸ್ಯರು ಮಾತನಾಡುವವರಿದ್ದಾರೆ.

ಶ್ರೀ ಎಂ.ಜಿ ಮುಳೆ:- ಬೆಂಗಳೂರು ನಮ್ಮ ರಾಜ್ಯದ ರಾಜಧಾನಿ. ಬೆಂಗಳೂರು ನಗರದ ಜೊತೆ ಬೇರೆ ಪಟ್ಟಣಗಳು ಸಹ ಅಭಿವೃದ್ಧಿಯಾಗಬೇಕು. ಬೆಂಗಳೂರಿನಿಂದ ಸುಮಾರು 800 ಕಿಲೋ ಮೀಟರ್ ದೂರವಿರುವ ಬಸವಕಲ್ಯಾಣ ಪಟ್ಟಣ ಒಂದು ಐತಿಹಾಸಿಕ ಪಟ್ಟಣ. ಇದು ಮಹಾತ್ಮ ಬಸವೇಶ್ವರರ ಕರ್ಮ ಭೂಮಿ. 8ನೂರುವರ್ಷಗಳ ಹಿಂದೆ ಅನುಭವ ಮಂಟಪದಲ್ಲಿ ಮೊಟ್ಟಮೊದಲ ಪಾರ್ಲಿಮೆಂಟ್ ಅದ ಸಾಕ್ಷಿ ಇದೆ. ಅದು ಬರೇ ಚರ್ಚೆಯಾಗಿರಲಿಲ್ಲ, ಅದು ಕಾರ್ಯರೂಪಕ್ಕೆ ಬಂದಿತ್ತು. ಮೂಢನಂಬಿಕೆ ಆಧಾರಿತ ಕರ್ಮವನ್ನು ತಿರಸ್ಕರಿಸಿ, ಶ್ರಮಾಧಾರಿತ ಕಾಯಕವೇ ಕೈಲಾಸ ಎಂಬ ತತ್ವದ ಹೊಸ ಬೆಳಕನ್ನು ತೋರಿಸಿದಂಥ ಒಂದು ಪುಣ್ಯ ಸ್ಥಳ ಇದಾಗಿದೆ. ಕನ್ನಡ ಭಾಷೆ ಮತ್ತು ಸಂಸ್ಕೃತಿಗೆ ಅದು ತವರೂರು. ಅಲ್ಲಿ ಹೊಸ ವಚನ ಸಾಹಿತ್ಯ ನಿರ್ಮಾಣವಾಯಿತು. ಜಾತಿ ರಹಿತವಾದ ಹೊಸ ಸಮಾಜದ ಸೃಷ್ಟಿಯೂ ಆಯಿತು. ಜಗಜ್ಯೋತಿ ಅಣ್ಣ ಬಸವಣ್ಣವರ ಬೋದನೆಗಳು ಇವೊತ್ತು ಔಚಿತ್ಯವಾಗಿದೆ. ಈ ತರದಲ್ಲಿ ಅಲ್ಲೆ ಸಾಮಾಜಿಕ, ವೈಚಾರಿಕ ಮತ್ತು ಧಾರ್ಮಿಕ ಕ್ರಾಂತಿಯು ನಡೆಯಿತು. ಇಂಥ ಒಂದು ಪವಿತ್ರ ಭೂಮಿಯ ದರ್ಶನಕ್ಕಾಗಿ ದಿನವೂ ಸಾವಿರಾರು ಜನರು ಭಕ್ತಿ, ಆಸಕ್ತಿ, ಶ್ರದ್ದೆಯಿಂದ ಬರುತ್ತಿರುತ್ತಾರೆ. ಆದರೆ ಇಲ್ಲಿಗೆ ಬಂದಮೇಲೆ ಇಲ್ಲಿನ ಸ್ಥಿತಿಗತಿಗಳನ್ನು ನೋಡಿ, ಅವರಿಗೆ ಬಹಳ ವಿಷಾದವಾಗುತ್ತದೆ. ಇಂಥ ಮಹತ್ವದ ಸ್ಥಳಕ್ಕೆ ಸೂಕ್ತ ವ್ಯವಸ್ಥೆಯಾಗಬೇಕು. ಈ ಕುರಿತು ವಿಶೇಷ ಕಾಳಜಿ ವಹಿಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು. ಶರಣಕವಿಗಳು, ಅನುಭವ ಮಂಟಪ, ಬಸವೇಶ್ವರ ದೇವಾಲಯದ ಪರಿಸರವನ್ನು ಅಭಿವೃದ್ಧಿಗೊಳಿಸಲು ಸ್ವಲ್ಪ ಪ್ರಯತ್ನ ಮಾಡಿದರೆ ಇದೊಂದು

ಅಂತರಾಷ್ಟ್ರೀಯ ಪ್ರವಾಸಿ ತಾಣವಾಗುವ ಎಲ್ಲಾ ಸಾಧ್ಯತೆಗಳೂ ಇವೆ. ಇದರ ಬಗ್ಗೆ 6 ತಿಂಗಳುಗಳ ಹಿಂದೆ ಮಾನ್ಯ ಮುಖ್ಯಮಂತ್ರಿ ಪಟೇಲ್‌ರವರಿಗೆ ನಾವು ಮಾನ್ಯ ಚಂದ್ರ ಕಾಂತ ಬೆಲ್ಲದ್‌ರವರು, ಶ್ರೀಮತಿ ರಾಣಿ ಸತೀಶ್‌ರವರು, ಮುಂತಾದವರನ್ನೊಳಗೊಂಡ ನಿಯೋಗದವರು ಭೇಟಿಯಾಗಿದ್ದೇವೆ. ಆಗ ಮಾನ್ಯ ಮುಖ್ಯಮಂತ್ರಿಯವರು ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆ ಮಾಡಿದ ಮೇಲೆ ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರ ಎಂದು ಅಭಿವೃದ್ಧಿ ಮಾಡುವ ಆಶ್ವಾಸನೆಯನ್ನು ಕೊಟ್ಟು, ಕೂಡಲ ಸಂಗಮ ಪ್ರಾಧಿಕಾರದ ಅಧಿಕಾರಿ ಶ್ರೀ ಜಾಮ್‌ದಾರ್‌ರವರಿಗೆ ಈ ಕುರಿತು ಕೂಡಲೇ ವರದಿಯನ್ನು ಒಪ್ಪಿಸಲು ಆದೇಶವನ್ನು ಕೊಟ್ಟಿದ್ದರು. ಅದರ ಪ್ರಕಾರ ನಕಾಶೆಗಳು, ಪ್ರಾಜೆಕ್ಟ್ಸ್, ಬ್ಲ್ಯೂಪ್ರಿಂಟ್ಸ್, ಮುಂತಾಗಿ ಎಲ್ಲವೂ ತಯಾರಾಗಿದೆ. ಆಗಿನ ಪ್ರಕಾರ ಬಸವಕಲ್ಯಾಣ ಅಭಿವೃದ್ಧಿದಾಗಿ 6 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿ, ಸಚಿವ ಸಂಪುಟದ ಸಭೆಯಲ್ಲಿ ನಿರ್ಣಯವನ್ನು ಕೂಡ ತೆಗೆದುಕೊಂಡಿದ್ದಾರೆ. ಆ ಹಣವು ಬಿಡುಗಡೆಯಾಗುವ ಮೊದಲೇ ಚುನಾವಣೆಯು ಬಂತು. ಈಗ ಹೊಸ ಸರಕಾರದ ರಚನೆಯಾಗಿದೆ. ಆದ್ದರಿಂದ ತತ್‌ಕ್ಷಣ 6 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿ ಅಲ್ಲಿ ಕೆಲಸವನ್ನು ಪ್ರಾರಂಭಿಸಬೇಕು. ಈ ಪ್ರಾಧಿಕಾರದ ಮೊಟ್ಟಮೊದಲ ಸಭೆಯ ಬಸವಕಲ್ಯಾಣದಲ್ಲಿ ಮಾನ್ಯ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ನಡೆಯ ಬೇಕು - ಎಂದು ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಬಸವಕಲ್ಯಾಣ ತಾಲ್ಲೂಕಿಗೆ ಸಂಬಂಧಪಟ್ಟಂಥ ಮಹತ್ವದ ವಿಚಾರವೊಂದಿದೆ. ನಮ್ಮಲ್ಲಿ ಲಾರಿಗಳು, ಲಾರಿಗಳ ಮಾಲೀಕರು ಬಹಳ ಜನರಿದ್ದಾರೆ. ಈ ಒಂದು ಟೌನ್‌ಮುನ್ಸಿಪಲ್ ಮಟ್ಟದಲ್ಲಿ ತುಲನೆ ಮಾಡಿದರೆ ನಮ್ಮಲ್ಲಿರುವ ಲಾರಿಗಳ ಸಂಖ್ಯೆಯು ಏಷಿಯಾ ಖಂಡದಲ್ಲಿಯೇ ಹೆಚ್ಚು ಎಂಬ ವಿಚಾರ ಇದೆ. ನಮ್ಮಲ್ಲಿ ಸುಮಾರು 14 ಸಾವಿರ ಲಾರಿಗಳು ಇವೆ. ಆದರೂ ಯಾವ ಕಾರಣಕ್ಕಾಗಿಯೋ ಏನೋ ಇಲ್ಲಿ ಯಾವುದೇ ಆರ್‌ಟಿಓ ಅಥವಾ ಎಆರ್‌ಟಿಓ ಕಚೇರಿಯೂ ಇಲ್ಲ. ಆದಕಾರಣ ಇಲ್ಲಿನ ಮಾಲೀಕರು ಹೈದ್ರಾಬಾದ್ ಅಥವಾ ಮುಂಬಯಿಗೆ ಹೋಗಿ ರಿಜಿಸ್ಟ್ರೇಷನ್ ಮಾಡಿಕೊಳ್ಳುತ್ತಾರೆ. ಇದರಿಂದಾಗಿ ನಮ್ಮ ರಾಜ್ಯಕ್ಕೆ ಬರಬೇಕಾದ ಆದಾಯವು ತಪ್ಪಿಹೋಗಿದೆ. ಇನ್ನಾದರೂ ಇಲ್ಲಿ ಒಂದು ಏಆರ್‌ಟಿಓ ಕಚೇರಿಯನ್ನು ಸ್ಥಾಪನೆ ಮಾಡಬೇಂದು ಕೇಳಿಕೊಳ್ಳುತ್ತೇನೆ.

ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರಾಥಮಿಕ ಶಿಕ್ಷಣದ ಬಗ್ಗೆ ಮಹತ್ವದ ವಿಚಾರವನ್ನು ಹೇಳಿದ್ದಾರೆ. ಐದು ವರ್ಷಗಳಲ್ಲಿ ರಾಜ್ಯದಲ್ಲಿ 80 ಪರ್‌ಸೆಂಟ್‌ನಷ್ಟು ಸಾಕ್ಷರತೆಯು ಆಗಬೇಕೆಂದು ಹೇಳಿದ್ದಾರೆ. ಈ ಕಾರ್ಯವನ್ನು ಸಾಧಿಸಬೇಕಾದರೆ ಶಾಲೆಗಳು, ಕಟ್ಟಡಗಳು, ಶಿಕ್ಷಕರು, ಹೀಗೆ ಒಳ್ಳೆಯ ವಾತಾವರಣವುನ್ನು ಸೃಷ್ಟಿಸಬೇಕಾಗುತ್ತದೆ. ನಮ್ಮ ಬಸವಕಲ್ಯಾಣ ಅಥವಾ ಬೀದರದಲ್ಲಿ ಒಂದು ವಿಶಿಷ್ಟ ಪರಿಸ್ಥಿತಿಯು ಇದೆ. ಈ ಭಾಗವು ಹಳೆಯ ಹೈದ್ರಾಬಾದ್ ರಾಜ್ಯದಲ್ಲಿತ್ತು. ಸೆನ್‌ಸೆಸ್ ವರದಿಯ ಪ್ರಕಾರ ಬಸವಕಲ್ಯಾಣದಲ್ಲಿ, ಬೀದರ್‌ಜಿಲ್ಲೆಯಲ್ಲಿ 22 ಪರ್‌ಸೆಂಟ್‌ನಷ್ಟು ಉರ್ದು ಮಾತನಾಡುವವರು, 28ಪರ್‌ಸೆಂಟ್‌ನಷ್ಟು ಮಾರಿ ಮಾತನಾಡುವವರು ಇದ್ದಾರೆ. ಅವರು ಎಲ್ಲರೂ ಕನ್ನಡಿಗರು. ಅವರೆಲ್ಲರೂ ರಾಜ್ಯದ ಸನ್ಮಾನ್ಯ ನಾಗರೀಕರು. ಅವರೆಲ್ಲರ ಯೋಗಕ್ಷೇಮವನ್ನು ಕಾಪಾಡುವುದು ಸರಕಾರದ ಕರ್ತವ್ಯವಾಗಿದೆ. ಅವರುಗಳ ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣವು ಸಿಗಬೇಕು, ಅದರ ಜೊತೆಯಲ್ಲಿಯೇ ಅವರಿಗೆಲ್ಲ ಕನ್ನಡವನ್ನು ಕಡ್ಡಾಯವಾಗಿ ಕಲಿಸುವ ವ್ಯವಸ್ಥೆಯನ್ನು ಮಾಡಬೇಕು.

ನಮ್ಮ ಬೀದರ್ ಜಿಲ್ಲೆಯು ರಾಜ್ಯದ ಒಂದು ಮೂಲೆಯಲ್ಲಿದೆ. ಇಲ್ಲಿ ವಿದ್ಯುತ್ ಪೂರೈಕೆಯು ನಿಯಮಿತವಾಗಿ ಆಗುತ್ತಾ ಇಲ್ಲ. ಇಲ್ಲಿ ಅನಿಯಮಿಯತೆಯೇ ನಿಯಮಿತ ಎಂಬ ರೀತಿಯಲ್ಲಿ ವಿದ್ಯುತ್ ಪೂರೈಕೆಯ ವ್ಯವಸ್ಥೆಯು ಇದೆ. ಇದರಿಂದಾಗಿ ನಮ್ಮ ಜನರಿಗೆ ಬಹಳ ತೊಂದರೆಯಾಗುತ್ತಾ ಇದೆ. ನಮ್ಮಲ್ಲಿ ಹೆಚ್ಚು ಸಂಖ್ಯೆಯಲ್ಲಿ ಪಂಪ್‌ಸೆಟ್‌ಗಳಿವೆ. ಆದುದರಿಂದ ವಿದ್ಯುತ್ ಪೂರೈಕೆಯ ವಿಚಾರದಲ್ಲಿ ಸುಧಾರಣೆಯನ್ನು ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ.

ನಮ್ಮ ಬೀದರ್ ಜಿಲ್ಲೆಯಲ್ಲಿ ರಾಜಕೀಯ ಸ್ಥಿತಿಗತಿಗಳ ವಿಚಾರದಲ್ಲಿ ಒಂದು ಶಿಷ್ಟ ಪರಿಸ್ಥಿತಿ ಬಂದಿದೆ. ನಮ್ಮಲ್ಲಿ ಯಾರು ಆಡಳಿತಪಕ್ಷದ ಶಾಸಕರು ಇಲ್ಲ. ಐದು ಬಿಜೆಪಿ ಮತ್ತು ನಾನು ಒಬ್ಬ ಜನತಾದಳ (ಎಸ್) ಪಕ್ಷ ಶಾಸಕನಾಗಿದ್ದೇನೆ. ಆದುದರಿಂದ ಆಡಳಿತ ಸರಕಾರದ ಶಾಸಕರು ಯಾರೂ ಇಲ್ಲವೆಂದು ನಮ್ಮನ್ನು ನಿರ್ಲಕ್ಷಭಾವನೆಯಿಂದ ಯಾರು ನೋಡಬಾರದೆಂದು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ. ನಮಗೆ ಅವರು ಎಲ್ಲಾ ರೀತಿಯ ಪ್ರೋತ್ಸಾಹವನ್ನು ಕೊಡ ಬೇಕು. ನಮ್ಮ ಜಿಲ್ಲೆಯ 6 ಜನ ಶಾಸಕರು ಈ ಸಭೆಗೆ ಪ್ರಥಮ ಬಾರಿಗೆ ಪ್ರವೇಶ ಮಾಡಿದ್ದೇವೆ. ಆದುದರಿಂದ ನಮಗೆ ಸಾಕಷ್ಟು ಆಸಕ್ತಿ ವಹಿಸಿ ಸೂಕ್ತ ಮಾರ್ಗದರ್ಶನವನ್ನು ನೀಡಿ ನಮ್ಮನ್ನು ಪ್ರೋತ್ಸಾಹಿಸಬೇಕೆಂದು ಕೇಳಿಕೊಂಡು ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ (ಬಸವನಗುಡಿ ಕ್ಷೇತ್ರ):- ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪೇಜ್ 8ರಲ್ಲಿ, ಪ್ಯಾರಾ 19ರಲ್ಲಿ,'Development of Bangalore City is high on our priority since the progress of Bangalore has a wider implication for the prosperity of Karnataka... ಎಂದು ಹೇಳಿದ್ದಾರೆ. ಇವೊತ್ತು ಬೆಂಗಳೂರು ನಗರವು ಯಾವ ದುಸ್ಥಿತಿಯಲ್ಲಿದೆ ಎಂದರೆ, ಬಹುಶ: ಬಹಳ ದಿನಗಳ ಹಿಂದೆ ಇದು ಬಡವರ ಊಟಿ ಎಂದು ಕರೆಯಲ್ಪಡುತ್ತಿತ್ತು. ಇವೊತ್ತು ಬೆಂಗಳೂರು ನಗರದ ಪರಿಸ್ಥಿತಿಯು ಏನಾಗಿದೆ? ಇವೊತ್ತು ಬೆಂಗಳೂರು ನಗರವು 'ಗಾರ್‌ಬೇಜ್ ಸಿಟಿ' ಎಂದು ಕರೆಯುವ ಹಾಗಾಗಿದೆ. ರಸ್ತೆಗಳು ಯಾವುದೂ ಸರಿಯಾಗಿಲ್ಲ, ಬೀದಿ ದೀಪಗಳು ಇಲ್ಲವೇ ಇಲ್ಲ, ಹಗಲು ಇರುವ ಲೈಟ್‌ಗಳು ರಾತ್ರಿಯಲ್ಲಿ ಇರುವುದಿಲ್ಲ. ನಗರದಲ್ಲಿ ಸುಮಾರು 15ಲಕ್ಷ ವಾಹನಗಳು ಇವೆ. ಕುಡಿಯುವ ನೀರಿನ ಅಭಾವವಿದೆ. ಟ್ಯಾಂಕ್ಸ್ ಸಿಟಿ ಟ್ಯಾಂಕ್‌ಗಳು ಎಲ್ಲವೂ ಮುಚ್ಚಿಹೋಗಿವೆ. ಕೆಂಪಾಂಬುದಿ ಎಂದು ಬಸವನಗುಡಿ ಪ್ರದೇಶದಲ್ಲಿತ್ತು. ಈಗ ಅದು ಬಹುಶ: ಇಲ್ಲ; ಅದು ಏನಾಗಿದೆ ಎನ್ನುವುದು ಕೂಡ ಗೊತ್ತಾಗುತ್ತಾ ಇಲ್ಲ ಮಾನ್ಯ ಶ್ರೀ ಕೆ.ಹೆಚ್.ರಂಗನಾಥ್‌ರವರ ವ್ಯಾಪ್ತಿಯಲ್ಲಿ ಪರಿಸರ ಖಾತೆಯು ಇದೆ. ನಾನು ಅವರರೊಂದಿಗೆ ಮಾತನಾಡಿದ್ದೇನೆ. ನ್ಯಾಯಮೂರ್ತಿ ಮಾನ್ಯ ಸಲ್ದಾನರವರು ಪರಿಸರದ ಬಗ್ಗೆ ಬಹಳ ಕಾಳಜಿ ರಹಿಸಿದ್ದವರು. ಈಗಲೂ ಅವರ ಆ ಕಾಳಜಿಯು ಇದ್ದೇ ಇದೆ. ಪರಿಸರ ನೈರ್ಮಲ್ಯವನ್ನು ಯಾವರೀತಿಯಲ್ಲಿ ಉತ್ತಮವಾಗಿ ಮಾಡಬಹುದೆಂಬ ಬಗ್ಗೆ ನಾವೆಲ್ಲರೂ ಅನೇಕ ರೀತಿಯಲ್ಲಿ ಪ್ರಯತ್ನಗಳನ್ನು ಮಾಡಿದ್ದೇವೆ. ಹಿಂದೆ ಶ್ರೀಮಾನ್ ಬಿ.ಬಸವಲಿಂಗಪ್ಪನವರು ಮಂತ್ರಿಯಾಗಿದ್ದರು, ಉವರು ನಮ್ಮನ್ನು ಕರೆದು ಅನೇಕ ಸಲ ಈ ಬಗ್ಗೆ ಏನು ಮಾಡಬಹುದು ಎಂದು ಚರ್ಚೆ ಮಾಡುತ್ತಾ ಇದ್ದರು. ಬೆಂಗಳೂರಿನಲ್ಲಿ ಸಂಚರಿಸಿ ಎಲ್ಲೆಲ್ಲಿ ಪರಿಸರ ನೈರ್ಮಲ್ಯವನ್ನು ಉತ್ತಮವಾಗಿ ಮಾಡಬಹುದು ಎಂದು ಪ್ರಯತ್ನ ಮಾಡಿದರು.ನ ನಾನು ಆಗ ವಕೀಲರ ಸಂಘದ

ಅಧ್ಯಕ್ಷನಾಗಿದ್ದೆ. ಬೆಂಗಳೂರು ನಗರವನ್ನು ಒಳ್ಳೆಯ ಪರಿಸರಯುಕ್ತ ಪ್ರದೇಶವನ್ನಾಗಿ ಮಾಡಲು ಏನೇನು ಮಾಡಬೇಕು ಎಂಬ ಬಗ್ಗೆ, ಅನೇಕ ಸಲ ನಾವುಗಳು ಪರಿಶೀಲನೆ ಮಾಡುತ್ತಾ ಇದ್ದೆವು. ಅವರು ಬೆಂಗಳೂರು ನಗರವನ್ನು ಸಿಂಗಾಪುರ ನಗರದಂತೆ ಮಾಡುತ್ತೇನೆ ಎಂದು ಹೇಳುತ್ತಿದ್ದರು. ಈಗ ಮಾನ್ಯ ಬಸವಲಿಂಗಪ್ಪನವರು ಇಲ್ಲ. ಮಾನ್ಯ ರಂಗನಾಥ್‌ರವರು ನಿನ್ನೆ ಮಾತನಾಡುವಾಗ ಈ ಬಗ್ಗೆ ಹೇಳುತ್ತಿದ್ದರು. ಆಮೇಲೆ ಈ ಮೆಟ್ರೊ ಟ್ರೈನ್ ಬಗ್ಗೆ ಹೇಳಬೇಕೆಂದರೆ, ಅದಕ್ಕಾಗಿ ಬೆಂಗಳೂರಿಗರು ಒಂದು ಲೀಟರ್‌ಗೆ 15 ಪೈಸೆ ಎಕ್ಸ್‌ಟ್ರಾ ಕೊಡುತ್ತಿದ್ದಾರೆ, ಬಹುಶ: ಅನೇಕರಿಗೆ ಇದು ಗೊತ್ತಿಲ್ಲ; ಇದು ಯಾತಕ್ಕೆ ಅಂದರೆ ಮೆಟ್ರೊಟ್ರೈನ್ ಮಾಡಬೇಕೂಂತ. ಮೆಟ್ರೊಟ್ರೈನ್ ವ್ಯವಸ್ಥೆ ಆಗಲಿಲ್ಲ. ನಮ್ಮ ಮಾನ್ಯ ರೋಶನ್‌ಬೀಗರವರು ಈ ವಿಚಾರದಲ್ಲಿ ಬಹಳ ಇಂಟರೆಸ್ಟ್ ತೋರಿಸಿದ್ದರು, ಏನಾಯಿತೋ ಏನೋ ಅದು ನಿಂತು ಹೋಯಿತು ಆದರೆ ಫ್ಲೈ ಓವರ್ಸನ್ನು ಶುರು ಮಾಡಿದರು. ಬಲಲ್‌ರೋಡ್‌ನಲ್ಲಿ ಒಂದು ಕಡೆ ಫ್ಲೈ ಓವರ್ ನಿಂತು ಹೋಗಿಬಿಟ್ಟಿದೆ. ಕೊನೆಗೆ ಬೈಪಾಸ್ ಅಂತ ಮಾಡಿದ್ದಾರೆ, ಅದನ್ನೂ ನೋಡುವುದಕ್ಕೆ ಆಗುತ್ತಿಲ್ಲ. ಶ್ರೀಮಾನ್ ಚೌಡರೆಡ್ಡಿಯವರ ಕಾಲದಲ್ಲಿ ಮೆಗಾಸಿಟಿ ಪ್ರಾಜೆಕ್ಟ್ ಅಂತ ಪ್ರಾರಂಭ ಆಗಿದ್ದದು 1993-94ರಲ್ಲಿ. ಹೈದರಾಬಾದ್, ಬೆಂಗಳೂರು, ಬಾಂಬೆ, ಡೆಲ್ಲಿ, ಕಲ್ಕತ್ತ, ಚೆನ್ನೈಗಳಲ್ಲಿ ಮಾಡಿದರು. ಅದಕ್ಕೆ 25 ಪರ್ಸೆಂಟ್ ಕೇಂದ್ರದಿಂದ ಹಣ, ಇನ್ನು 25 ಪರ್ಸೆಂಟ್ ರಾಜ್ಯದ್ದು. 50ಪರ್ಸೆಂಟ್ ಅರ್ಬನ್ ಇನ್‌ಫ್ರಾ ಸ್ಟಕ್ಚರ್ ಅಭಿವೃದ್ಧಿ ನಿಗಮದಿಂದ ಬರುತ್ತದೆ. ಅದು ಏನಾಗಿದೆ ಇವತ್ತು? ಮಾನ್ಯ ಸೋಮಣ್ಣನವರು ಎಷ್ಟು ಓಡಾಡಿದರು ಪಾಪ? ಸ್ವಲ್ಪ ಕಾಲದಲ್ಲೇ ಏನೋ ಮಾದಬಹುದು ಅಂತ ಬಹಳ ಪ್ರಯತ್ನಿಸಿದರು. ಈ ಸದನದಲ್ಲಿ ಮಾನ್ಯ ಚಂದ್ರೇಗೌಡರು. ಇಲ್ಲ ಸಂಜೆ ಆದಮೇಲೆ ಮಂತ್ರಿಗಳು ಇರುವಾದು ಕಡಿಮೆ, ಮಾನ್ಯ ಮುಖ್ಯಮಂತ್ರಿಗಳಿದ್ದಿದ್ದರೆ ಚೆನ್ನಾಗಿತ್ತು ಏಕೆಂದರೆ ಬೆಂಗಳೂರು ಅಭಿವೃದ್ಧಿ ಖಾತೆ ಅವರದೇ. ಬೆಂಗಳೂರಿನಲ್ಲಿ ಆಸ್ಪತ್ರೆಗಳಿಗೆ ಅಂದರೆ ಬೌರಿಂಗ್ ಮತ್ತು ವಿಕ್ಟೋರಿಯಾ ಆಸ್ಪತ್ರೆಗಳಿಗೆ ನಮ್ಮವರೊಬ್ಬರು ಹೋಗಿದ್ದರು. ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಏನು ಗತಿಯಾಗಿದೆ? ಬಡವರ ಗತಿಯೇನು? ಬೆಂಗಳೂರಿನಲ್ಲಿ ಪೆಟ್ರೋಲ್ ಬಂಕ್ಸ್ ಇವೆ. ಹಿಂದೆ ಮಾನ್ಯ ಬಸವಣ್ಣಪ್ಪನವರು ನಾಗರೀಕ ಸರಬರಾಜು ಸಚಿವರಾಗಿದ್ದಾಗ 10 ಪೆಟ್ರೋಲ್ ಬಂಕ್‌ಗಳಿಗೆ ದಿಢೀರ್ ಅಂತ ಭೇಟಿ ಮಾಡಿದರು. ನನಗೆ ಅವರು ಯಾರಿಗೂ ಇದನ್ನು ಹೇಳಬೇಡಪ್ಪ, ಪ್ರೆಸ್‌ಗೂ ತಿಳಿಸಬೇಡ ಅಂದಿದ್ದರು. ನಾನು ಮೊದಲೇ ಪ್ರೆಸ್‌ನವರಿಗೆಲ್ಲ ಹೇಳಿ ತಾವೆಲ್ಲ ಬನ್ನಿ ಸ್ವಾಮಿ ಅಂದಿದ್ದೆ. ಅವರು ಬೇಡ ಬೇಡ ಅಂದರು, ಅದೇಕೋ ಏನೋ? ನಾವು ಚೆಕ್ ಮಾಡಿದ 10 ಬಂಕ್‌ಗಳಲ್ಲಿ 9ರಲ್ಲಿ ಕಲುಷಿತ ಪೆಟ್ರೋಲ್ ಇತ್ತು ಮತ್ತು ಕಡಿಮೆ ಅಳತೆ ಅಂದರೆ ಕಾಲು ಭಾಗ ಇರಲಿಲ್ಲ. ತಕ್ಷಣ ಅವರನ್ನೆಲ್ಲ ಬುಕ್ ಮಾಡಿದರು, ನನಗೆ 'ರೆಡ್ಡಿಯವರೇ ಬಹಳ ಒಳ್ಳೆಯ ಕೆಲಸ ಮಾಡಿಸಿದಿರಿ ನೀವು, ಇದೇ ರೀತಿ ಎಲ್ಲ ಕಡೇಗಳಿಗೂ ಹೋಗೋಣ' ಅಂದರು. ಆ 9 ಬಂಕ್‌ಗಳನ್ನೂ ಎರಡು ದಿವಸ ಮುಚ್ಚಿಸಿದ್ದರು, ಮೂರನೆ ದಿವಸ ನೋಡುತ್ತೇನೆ ಎಲ್ಲ ಶುರುವಾದವು, ಏನು ಇದು ಅಂತ ಫೋನ್ ಮಾಡಿ ಕೇಳಿದೆ: ಇಲ್ಲಪ್ಪ ಆದಾಯ್ತು ಇದಾಯ ಅಂದರು. ನಾನು ದಯವಿಟ್ಟು ಇವುಗಳ ಮೇಲೆ ಕೇಸ್ ಹಾಕಿ ಬಂಕ್‌ಗಳು ಏನು ಮೋಸ ನಡೆಸುತ್ತಿವೆ ಅನುಸುತ್ತಿವೆ ಅನ್ನುವುದನ್ನು ತೋರಿಸಬೇಕು ಅಂದೆ. ಕೆಲವು ಬಂಕ್‌ಗಳ ಬಗ್ಗೆ ನಮಗೆ ಮಾಹಿತಿ ಇದೆ. ಇವತ್ತಿನ ದಿವಸ ಎಲ್ಲಿ ಭ್ರಷ್ಟಾಚಾರ ಹೆಚ್ಚಾಗುತ್ತಿದೆ?

ಅದನ್ನು ಯಾವರೀತಿ ಕಡಿಮೆ ಮಾಡಬೇಕು? ರೆವಿನ್ಯೂ ಸಚಿವರಾದ ಮಾನ್ಯ ಶ್ರೀಕಂಠಯ್ಯನವರು ಇಲ್ಲೇ ಇದ್ದಾರೆ ಇದನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ಈ ಭ್ರಷ್ಟಾಚಾರ ಜಾಸ್ತಿ ಇರುವುದು ರೆವಿನ್ಯೂ ಇಲಾಖೆಯಲ್ಲಿ. ನೋಡಿ, ಇಲ್ಲಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಭ್ರಷ್ಟಾಚಾರ ನಿವಾರಣೆಯ ಬಗ್ಗೆ ಹೇಳಿದ್ದರೆ ಭಯಭೀತಿ ಚೆನ್ನಾಗಿರುತ್ತಿತ್ತು. ಈ ಬಗ್ಗೆ ಜನಗಳಿಗೆ ಇಲ್ಲ, ರೈತರನಿಗೆ ಪಹಣಿ ಮಾಡಿ ಕೊಡಬೇಕಾದರೆ ಭ್ರಷ್ಟಾಚಾರ, ನಾವು ಸರಿಯಾದ ರೀತಿಯಲ್ಲಿ ಅವರಿಗೆ ಮಾರ್ಗದರ್ಶನ ಮಾಡಿದರೆ ಸಚಿವರಿಂದ ಹಿಡಿದು ಕೆಳಗಿನವರೆಗೂ ಭ್ರಷ್ಟಾಚಾರ ಇರದೇ ಇದ್ದರೆ, ಎಲ್ಲರನ್ನು ನಾವು ಬದಲಾಯಿಸುವುದಕ್ಕೆ ಆಗುವುದಿಲ್ಲ, ಮಂತ್ರಿಗಳು ಸರಿಯಾಗಿದ್ದರೆ ಎಲ್ಲರೂ ಸರಿಹೋಗುತ್ತಾರೆ. ಇಲ್ಲದಿದ್ದರೆ ಎಲ್ಲ ಹೋಯಿತು ಇದನ್ನು ಹೇಗೆ ಸರಿ ಮಾಡಬಹುದೂಂತ ಮಾನ್ಯ ಶ್ರೀಕಂಠಯ್ಯನವರಿಗೆ ಹೇಳುತ್ತಿದ್ದೇನೆ: ಇವತ್ತು ಈ ರೆವಿನ್ಯೂ ಇಲಾಖೆ ಬಹಳ ಮುಖ್ಯವಾದದ್ದು ಬೆಂಗಳೂರಿನಲ್ಲಿ ಮಹಾನಗರಪಾಲಿಕೆ ನಮಗಿರುವಂತೆ ಪ್ರತಿಯೊಬ್ಬರಿಗೂ ಅದು ಬೇಕಾಗಿದೆ ಒಂದು ಕೆಲಸ ಆಯಿತು, ಬಹಳ ಶೋಚನೀಯವಾದ ಸಂಗತಿ. ಒಂದು ದಿವಸ ಒಬ್ಬ ವಕೀಲರು ಫೋನ್ ಮಾಡಿದರು, ಏನಪ್ಪ ಅಂದರೆ ಎಲೆಕ್ಟ್ರಿಕ್ ಕ್ರೆಮೆಟೋರಿಯಂನಲ್ಲಿ ಆಗಲ್ಲ ಅಂತಿದ್ದಾನೆ ನಮ್ಮ ಕ್ಲೈಂಟ್ ತೀರಿಹೋಗಿದ್ದಾನೆ. ಇದೇನಪ್ಪ ಅಂತ ತೊಂದರೆಯೇನು ಅಂದೆ ಏನೂ ಇಲ್ಲ ಅಂದ, ಕರೆಂಟಿಲ್ಲವ ಅಂದರೆ ಕರೆಂಟಿದೆ ಅಂದ, ಮತ್ತಿನ್ನೇನು ತೊಂದರೆ? ಅವನು ಮಾಮೂಲಿ ಕೇಳ್ತಾ ಅವನೇ ಅದು ಕೊಡದೇ ಇದ್ದರೆ ಇವತ್ತು ಆಗೋಲ್ಲ ಅಂತಿದ್ದಾನೆ ಇದು ಬಹಳ ದು:ಖಕರ ಸಂಗತಿ. ಡೆತ್ ಸರ್ಟಿಫಿಕೇಟ್‌ಗೂ ಭ್ರಷ್ಟಾಚಾರ, ಅದು ಬೇಕೇ ಬೇಕು. ವಿಧವಾವೇತನದಲ್ಲೂ ಭ್ರಷ್ಟಾಚಾರ. ವೃದ್ಧಾಪತ್ಯವೇತನದಲ್ಲೂ ಭ್ರಷ್ಟಾಚಾರ. ಅಂದರೆ ಒಳ್ಳೆಯ ಅಧಿಕಾರಿಗಳು ಇಲ್ಲ ಅಂತ ಅಲ್ಲ, ಇದ್ದಾರೆ, ಆದರೆ ಭ್ರಷ್ಟರೇ ತುಂಬಹೋಗಿರುವುದರಿಂದ ಒಳ್ಳೆಯವರು ಎಲ್ಲಿ ಸಾಣುತ್ತಾರೆ?

ಶ್ರೀ ಶ್ರೀನಿವಾಸಗೌಡ: ಕೋರ್ಟ್‌ಗಳಲ್ಲಿ ಬೆಂಚ್‌ಕ್ಲರ್ಕ್‌ಗೆ ಏನೂ ಇರೋಲ್ಲವೆ; ಅದನ್ನೂ ಹೇಳಿ.

ಶ್ರೀ ಕೆ.ಎಸ್.ಸುಬ್ಬಾರೆಡ್ಡಿ: ಕೋರ್ಟಿನಲ್ಲಿ ಏನು ನಡೆಯುತ್ತಿದೆ ಅನ್ನುವುದನ್ನು ಬಹುಶ: ನೀವೂ ಅನುಭವಿಸಿದ್ದೀರಿ, ಅದಕ್ಕೂ ಬರ್ತೀನಿ; ಬೆಂಗಳೂರಿನಲ್ಲಿ 9-10 ಸಾವಿರ ಲಾಯರ್ಸಿದ್ದಾರೆ. 1990ರಲ್ಲಿ ನಾನು ವಕೀಲರ ಸಂಘದ ಅಧ್ಯಕ್ಷನಾದೆ, ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿ ಆಗಿದ್ದರು: ನಮ್ಮದು ಹಳೆಯ 100 ವರ್ಷಗಳ ಕಟ್ಟಡ ಹೈಕೋರ್ಟು ಸಹ 100 ವರ್ಷಗಳ ಕಟ್ಟಡ, ಅಲ್ಲಿಗೆ ಮಾನ್ಯ ವೀರೇಂದ್ರ ಪಾಟೀಲರು ಬಂದು ನಮ್ಮ ಜೊತೆ 3 ಗಂಟೆ ಇದ್ದು ಈ ಕಟ್ಟಡ ಬೇಗ ಕಟ್ಟಬೇಕು ಅಂದರು ಅದು ಬೀಳುವ ಪಸ್ಥಿತಿ ಇತ್ತು. 1990, 91 ಆಯಿತು. 1992ರಲ್ಲಿ ಮಾನ್ಯ ಬಂಗಾರಪ್ಪ ನವರು ಈ ರಾಜ್ಯದ ಮುಖ್ಯಮಂತ್ರಿಯಾಗಿ ಬಂದರು. ಅವರು ಇದನ್ನು ನಿಜವಾಗು ಬದಲಾವಣೆ ಮಾಡಿಬಿಡೋಣ ಅಂದವರು ಅವರೂ ಹೊರಟು ಹೋದರು. ಮಾನ್ಯ ಮೊಯ್ಲಿಯವರು ಬಂದರು, ಅವರೂ ಇದೇನು ವಕೀಲರು ಇಂತಹ ಕಟ್ಟಡದಲ್ಲಿದ್ದೀರಿ, ಬೆಂಗಳೂರಿನಲ್ಲಿ ಇಷ್ಟೊಂದು ವಕೀಲರಿದ್ದೀರಲ್ಲ ಒಳ್ಳೆಯ ಕಟ್ಟಡ ಮಾಡೋಣ ಅಂದರು ಅದು ಆಗಲೂ ಆಗಲಿಲ್ಲ, ಆಮೇಲೆ ಬೇರೆ ಸರ್ಕಾರಗಳು ಬಂದವು, ಏನೂ ಆಗಲಿಲ್ಲ ಅಂತ ಹೈಕೋರ್ಟಿನಲ್ಲಿ ರಿಟ್ ಹಾಕಿದ್ದಾಯಿತು, ಅವರು ಡೈರೆಕ್ಷನ್ ಕೊಟ್ಟರು. ಈಗ ಏನು ಮಾಡಬೇಕು

ಅನ್ನುವುದು ಸರ್ಕಾರದ ಮುಂದಿದೆ. ಇದನ್ನು ನಾನು ಏತಕ್ಕೆ ಹೇಳಿದೆ ಅಂದರೆ ಕರ್ನಾಟಕಲ್ಲಿ 30 ಸಾವಿರ ವಕೀಲರಿದ್ದು 10 ಸಾವಿರ ಬೆಂಗಳೂರಿನಲ್ಲಿದ್ದಾರೆ ಬೆಂಗಳೂರಿನಲ್ಲಿ ಏನು ಸಿಚುವೇಶನ್ ಅವರಿಗೆ ಆಗಿದೆ, ತಮಗೆ ಗೊತ್ತಿದೆ. ಬೆಳಿಗ್ಗೆ ವಕೀಲರು ಬಂದರೆ ಸಂಜೆವರೆಗೂ ಕೋರ್ಟುಗಳ ಮಧ್ಯೇನೇ ಇರಬೇಕು, ಅವರು ಕುಳಿತುಕೊಳ್ಳುವುದಕ್ಕೆ ಕಟ್ಟಡವೇ ಇರದತಂಹ ಪರಿಸ್ಥಿತಿ ಆಗಿತ್ತು. ನಾನು ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಿಳಿಸುತ್ತಿರುವುದಾಗಿದೆ. ಏಕೆಂದರೆ ಅವರು ವಕೀಲರಾಗಿದ್ದಂಥವರು; ಶ್ರೀಮಾನ್ ರಂಗನಾಥ್‌ರವರು ವಕೀಲರಗಿದ್ದಂಥವರು. ನಮ್ಮ ಮಾನ್ಯ ಚಂದ್ರೇಗೌಡರು ಕೂಡ ವಕೀಲರಾಗಿದ್ದವರು. ಆದರೂ ಕೂಡ ಈ ಒಂದು ಪರಿಸ್ಥಿತಿ ಏನೂ ಪರಿಸ್ಥಿ ಏನು ಇಂಪ್ರೂವ್ ಆಗಲಿಲ್ಲ. ಇದನ್ನು ಯಾವ ರೀತಿ ಮಾಡಬೇಕು? ಆಮೇಲೆ ವೆಲ್‌ಫೇರ್ ಫಂಡ್ ಎಂದು ಮಾಡಿದರು. ಅದನ್ನು ವಕೀಲರುಗಳನ್ನು ಕೊಡುವ ದುಡ್ಡು. ಇದಕ್ಕೆ 50 ಸಾವಿರ ರೂಪಾಯಿಗಳ ಮ್ಯಾಚಿಂಗ್ ಗ್ರಾಂಟ್ ಎಂದು ಮಾಡಬೇಕು. ಆಂಧ್ರದಲ್ಲಿ ತಮಿಳುನಾಡಿನಲ್ಲಿ, ಕೇರಳದಲ್ಲಿ ಈಗಾಗಲೇ ಅವರು ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ವಕೀಲರುಗಳ ಕೊಟ್ಟ ಹಣಕ್ಕೆ ವಾಪಸ್ ಕೊಡಬೇಕಾದರೆ ಅದಕ್ಕೆ ಮ್ಯಾಜಿಂಗ್ ಗ್ರಾಂಟಿ ಎಂದು ಬಾರ್-ಕೌನ್ಸಿಲ್ ಮುಖಾಂತರ ಅದನ್ನು ಮಾಡಬೇಕಾಗುತ್ತದೆ. ಅದೂ ಆಗಲಿಲ್ಲ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಮಾನ್ಯ ಖರ್ಗೆಯವರ ಗಮನಕ್ಕೆ ತರಬೇಕಾಗಿದೆ. ಮಾನ್ಯ ಖರ್ಗೆಯವರು ಇಲ್ಲಿ. ಇಲ್ಲ ಅನೇಕ ಮೊಕದ್ದಮೆಗಳು ಕೋರ್ಟಿನಲ್ಲಿರುವುದನ್ನು ಪೋಲೀಸ್ ಆಫೀಸರ್‌ಗಳು ಅವರನ್ನು ಕರೆಸಿ ನಾವೇ ಅದನ್ನು ಮಾಡಿಬಿಡುತ್ತೇವೆ, ಲಾಯರ್‌ಗಳಿಗೆ ಏತಕ್ಕೆ ಕೊಡುತ್ತೀರಿ? ನಾವುಗಳೇ ಇದನ್ನು ತೀರ್ಮಾನ ಮಾಡಿಸಿಬಿಡುತ್ತೇವೆ. ಇದಕ್ಕೆ ಕೋರ್ಟುಗಳು ಬೇಡ; ಏನೂ ಬೇಡ ಎಂದು ಹೇಳುತ್ತಿದ್ದಾರೆ. ಅದು ಕೋರ್ಟಿನಲ್ಲಿರುವ ಮೊಕದ್ದಮೆಗಳ ಬಗ್ಗೆ ಹೀಗೆ ಹೇಳುವುದು. ಹೆಚ್‌ಆರ್‌ಸಿ ಕೇಸ್ ಬಗ್ಗೆ ತಮಗೊಂದು ನಿದರ್ಶನವನ್ನು ಕೊಡುತ್ತಿದ್ದೇನೆ. ಹೆಚ್‌ಆರ್‌ಸಿ ಕೇಸ್‌ನಲ್ಲಿ ಒಬ್ಬ ಮನೆಯಲ್ಲಿ ಇದ್ದರೆ ಅವನ ಸಾಮಾನುಗಳನ್ನು ಎತ್ತಿ ಹಾಕಿ ಹೊರಗೆ ಹೋಗಬೇಕೆಂದು ಒಂದು ಪೋಲೀಸ್ ಸ್ಟೇಷನ್‌ನವರು ಏರ್ಪಾಡು ಮಾಡಿದ್ದರು. ಅವರ ಹೆಸರು ಕೂಡ ಬೇಕಾದರೂ ಹೇಳುತ್ತೇನೆ. ಅವರು ಬಂದು ನನಗೆ ಹೇಳಿದರು, ನನ್ನನ್ನು ಹೊರಗೆ ಹಾಕುವುದಕ್ಕೆ ಏರ್ಪಾಡು ಮಾಡುತ್ತಿದ್ದಾರೆ, ಇದರ ಬಗ್ಗೆ ಕೋರ್ಟಿನಲ್ಲಿ ಕೇಸ್ ಇದೆ ಎಂದು ಹೇಳಿದರು. ನಾನು ಪೋಲೀಸ್ ಆಫೀಸರ್‌ಗೆ ಫೋನ್ ಮಾಡಿ ಇದರ ಬಗ್ಗೆ ಮೊಕದ್ದಮೆಯು ಕೋರ್ಟಿನಲ್ಲಿ ಇರುವಾಗ ಅವರ ಸಾಮಾನುಗಳನ್ನು ತೆಗೆದು ಹೊರಗೆ ಹಾಕುವುದು ಸರಿಯೇ ಎಂದು ಕೇಳಿದೆ. ಹಾಗಾದರೆ ಎಲ್ಲಾ ಹೆಚ್‌ಆರ್‌ಸಿ ಕೇಸುಗಳನ್ನು ತಾವೇ ತೀರ್ಮಾನ ಮಾಡಿಬಿಡಿ, ಕೋರ್ಟುಗಳೇ ಬೇಕಾಗಿಲ್ಲ ಎಂದು ಹೇಳಿದರು.

ಛೇರ್ಮನ್:- ಲೋಕ ಅದಾಲತ್‌ನವರು ಹೇಗೆ ತೀರ್ಮಾನ ಮಾಡುತತಾರೋ ಹಾಗೆ ಪೋಲೀಸ್ ಸ್ಟೇಷನ್‌ನಲ್ಲೂ 2 ನೇ ಲೋಕ ಅದಾಲತ್ ಎಂದು ಮಾಡಿರುತ್ತಾರೆ. ಅಲ್ಲಿ ತೀರ್ಮಾನವಾಗಲಿ ಬಿಡಿ.

ಶ್ರೀ ಕೆ.ಎಸ್.ಸುಬ್ಬಾರೆಡ್ಡಿ:- ಭ್ರಷ್ಟಾಚಾರವನ್ನು ದೂರ ಮಾಡಬೇಕಾದರೆ ಹೇಗೆ ಸಾಧ್ಯವಾಗುತ್ತದೆ ಎನ್ನುವುದಕ್ಕೆ ಹೇಳುತ್ತಿದ್ದೇನೆ. ಇಂಥವರು ಕೆಲವರು ಪೋಲೀಸ್ ಆಫೀಸ್‌ರ್‌ಗಳು ಇದ್ದಾರೆ. ಎಲ್ಲರೂ ಇಂಥವರೇ ಎಂದು ನಾನು ಹೇಳುತ್ತಿಲ್ಲ. ಈ ರೀತಿಯಾದರೆ ಹೇಗೆ? ಖಂಡಿತವಾಗಿಯೂ

ಇದನ್ನು ಮಾನ್ಯ ಮಂತ್ರಿಗಳು ಸೀರಿಯಸ್ ಆಗಿ ತೆಗೆದುಕೊಂಡು ಒಳ್ಳೆಯ ಆಡಳಿತವನ್ನು ಮಾಡುವುದಾದರೆ ಇದು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಇದು ಸಾಧ್ಯವಾಗುವುದಿಲ್ಲ. ನಾವುಗಳು ಒಂದು ಲೆಟರನ್ನು ಕಾರ್ಯದರ್ಶಿಗಳಿಗೆ, ಡಿ.ಸಿ.ಗಳಿಗೆ ಮತ್ತು ಜಿಲ್ಲಾ ಪರಿಷತ್ ಛೇರ್ಮನ್‌ಗಳಿಗೆ ಕೊಡುತ್ತೇವೆ. ಐಎಎಸ್ ಆಫೀಸರ್ ಮತ್ತು ಕೆಎಎಸ್ ಆಫೀಸರ್‌ಗಳಿಗೂ ಈ ರೀತಿ ಕಾಗದವನ್ನು ಕೊಡುತ್ತೇವೆ. ಆ ರೀತಿ ಕೊಟ್ಟರೆ ಅದಕ್ಕೆ ಉತ್ತರವೇ ಬರುವುದಿಲ್ಲ. ಇದರ ಬಗ್ಗೆ ಕೇಂದ್ರ ಸರ್ಕಾರದಲ್ಲಿ ರೂಲನ್ನು ಮಾಡಿದ್ದಾರೆ. ಈ ರೀತಿ ಲೆಟರನ್ನು ಕೊಟ್ಟವರಿಗೆ ಉತ್ತರ ಕೊಡಬೇಕೆಂದು ತಿಳಿಸಿದ್ದಾರೆ. ಇದರ ಬಗ್ಗೆ ಮಾನ್ಯ ಸದಸ್ಯರುಗಳು ಬರೆದ ಕಾಗದಕ್ಕೆ ತಕ್ಷಣ ಉತ್ತರ ಕೊಡಬೇಕೆಂದು ಇದೆ. ಇಲ್ಲಿಯೂ ಕೂಡ ಅದೇ ರೀತಿ ಮಾಡಬೇಕಾಗುತ್ತದೆ. ಸರ್ದಾರ್ ಪಟೇಲ್ ಮೆಮೊರಿಯಲ್ ಲೆಕ್ಚರ್ಸ್‌ನಲ್ಲಿ ಶ್ರೀಮಾನ್ ಫಾಲ್ಕಿವಾಲ್ ಅವರು ಕೆಲವು ಮುಖ್ಯವಾದ ವಿಷಯಗಳನ್ನು ಕೋಟ್ ಮಾಡಿದ್ದಾರೆ. ಅದನ್ನು ನಾನು ಇಲ್ಲಿ ತಿಳಿಸುತ್ತೇನೆ.

ಛೇರ್ಮನ್:- ಮಾನ್ಯ ಪಾಲ್ಕಿವಾಲ ಅವರು ಹೇಳಿದ ವಿಷಯವನ್ನು ಇಲ್ಲಿ ತಿಳಿಸುವ ಅವಶ್ಯಕತೆ ಇದೆಯೇ? ನೀವು ಯಾವುದರ ಬಗ್ಗೆ ಹೇಳುತ್ತಿದ್ದೀರಿ?

ಶ್ರೀ ಕೆ.ಎನ್.ಸುಬ್ಬಾರೆಡ್ಡಿ:- ಪೋಲೀಸ್‌ನವರು ಹೇಗೆ ಎನ್ನುವುದನ್ನು ಅವರು ಬಹಳ ಚೆನ್ನಾಗಿ ತಿಳಿಸಿದ್ದಾರೆ. ಅದನ್ನು ಹೇಳಿಬಿಡುತ್ತೇನೆ.

" In Sardar Patel's words, the most dangerous thing in a democracy is to interfere with services. If to-day the police force is wholly demoralised in most states, it is entirely due to political interference by ministers and other politicians in the discharge of their professional duties."

ಇದನ್ನು ಮಾನ್ಯ ಪಾಲ್ಕಿವಾಲರು ಅವರು ಅವರ ಒಂದು ಮೆಮೊರಿಯಲ್ ಲೆಕ್ಚರ್ಸ್‌ನಲ್ಲಿ ಹೇಳಿದ್ದಾರೆ. ಇದನ್ನು ತಿಳಿಸುತಾ ನನಗೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಸಂಪಂಗಿ (ಬಾಗೇಪಲ್ಲಿ):- ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಅನೇಕ ಅಂಶಗಳನ್ನು ವಿವಿಧ ನಾಯಕರುಗಳನ್ನು ಚರ್ಚೆ ಮಾಡಿದ್ದಾರೆ. ನಾನು ಕೂಡ ಈ ಒಂದು ಭಾಷಣದಲ್ಲಿ ಕೆಲವು ಅಂಶಗಳನ್ನು ಗಮನಿಸಿದ್ದೇನೆ. ಒಂದು ಕ್ಷೇತ್ರ ಬಾಗೇಪಲ್ಲಿ ಕೇವಲ ನೂರು ಕಿಲೋ ಮೀಟರ್ ದೂರ ಇರುವ ಒಂದು ಕ್ರೇತ್ರ. ಗಡಿನಾಡು ಪ್ರದೇಶ ಎನಿಸಿ ಕೊಂಡಂಥ ಒಂದು ಕ್ಷೇತ್ರ. ಪಕ್ಕದಲ್ಲಿ ಆಂಧ್ರಪ್ರದೇಶ, ಕರ್ನಾಟಕದ ತುಟ್ಟತುದಿಯಲ್ಲಿರುವ ಕ್ಷೇತ್ರ ವೆಂದರೆ ಬಾಗೇಪಲ್ಲಿ, ಗೌರಿಬಿದನೂರು, ಶಿಡ್ಲಘಟ್ಟ ಇವೆಲ್ಲಾ ಗಡಿನಾಡು ಪ್ರದೇಶಗಳಿಗೆ ಸೇರಿದ ಸ್ಥಳವಾಗುತ್ತವೆ. ನಮ್ಮ ಕೋಲಾರ ಜಿಲ್ಲೆ ಕೂಡ ಬಹಳ ಪ್ರಾಮುಖ್ಯವಾಗಿ ಕರ್ನಾಟಕರಾಜ್ಯದಲ್ಲಿ ಪ್ರತಿಬಿಂಬಿಸುವಂಥ ಒಂದು ಜಿಲ್ಲೆಯಾಗಿದೆ. ಅನೇಕ ಮಹನೀಯರು ಈ ಜಿಲ್ಲೆಯಿಂದ ಬಂದಿದ್ದಾರೆ. ತಮಗೆ ಗೊತ್ತಿರುವ ಹಾಗೆ ಸರ್ ಎಂ.ವಿಶ್ವೇಶ್ವರಯ್ಯನವರು ಇಡೀ ಕರ್ನಾಟಕದ ಘನತೆಯನ್ನು ಎತ್ತಿ ಹಿಡಿದು ರಾಷ್ಟ್ರಾದಲ್ಲಿ, ಅಂತರರಾಷ್ಟ್ರದಲ್ಲಿ ಒಳ್ಳೆಯ ಹೆಸರನ್ನು ತಂದುಕೊಟ್ಟು ಕರ್ನಾಟಕದ

ಜನತೆಯನ್ನು ಸಂತೋಷದಲ್ಲಿರಿಸುವುದ್ಕಾಗಿ ಮೈಸೂರು ನಗರದಲ್ಲಿ ಕನ್ನಂಬಾಡಿ ಕಟ್ಟೆಯನ್ನು ಕಟ್ಟಿಸಿ ಆ ಒಂದು ಸ್ಥಳದ ಜನರು ಸಂತೋಷದಲ್ಲಿ ಇವತ್ತು ಮೈಮರೆಯುವಂಥ ಒಂದು ಪರಿಸ್ಥಿತಿಯನ್ನು ಸರ್.ಎಂ.ವಿಶ್ವೇಶ್ವರಯ್ಯನವರು ತಂದುಕೊಟ್ಟಿದ್ದಾರೆ.

ಶ್ರೀ ಎಸ್.ಸಂಪಂಗಿ (ಬಾಗೇಪಲ್ಲಿ):- ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಅನೇಕ ಅಂಶಗಳನ್ನು ವಿವಿಧ ನಾಯಕರುಗಳು ಚರ್ಚೆ ಮಾಡಿದ್ದಾರೆ. ನಾನು ಕೂಡ ಈ ಒಂದು ಭಾಷಣದಲ್ಲಿ ಕೆಲವು ಅಂಶಗಳನ್ನು ಗಮನಿಸಿದ್ದೇನೆ ನನ್ನ ಕ್ಷೇತ್ರ ಬಾಗೇಪಲ್ಲಿ ರಾಜ್ಯದ ರಾಜಧಾನಿಯಿಂದ ಕೇವಲ ಒಂದು ನೂರು ಕಿಲೋ ಮೀಟರು ದೂರವಷ್ಟೇ ಇರುವ ಒಂದು ಕ್ಷೇತ್ರ ಗಡಿನಾಡು ಪ್ರದೇಶ ಎನಿಸಿಕೊಂಡಿಂಥ ಒಂದು ಕ್ಷೇತ್ರ. ಪಕ್ಕದಲ್ಲಿ ಆಂಧ್ರಪ್ರದೇಶ, ಕರ್ನಾಟಕದ ತುಟ್ಟ ತುದಿಯಲ್ಲಿರುವ ಕ್ಷೇತ್ರ ವೆಂದರೆ ಬಾಗೇಪಲ್ಲಿ, ಗೌರಿಬಿದನೂರು, ಶಿಡ್ಲಘಟ್ಟ ಇವೆಲ್ಲಾ ಗಡಿನಾಡು ಪ್ರದೇಶಗಳಿಗೆ ಸೇರಿದ ಸ್ಥಳಗಳಾಗಿರುತ್ತದೆ. ನಮ್ಮ ಕೋಲಾರ ಜಿಲ್ಲೆ ಕೂಡ ಬಹಳ ಪ್ರಾಮುಖ್ಯವಾಗಿ ಕರ್ನಾಟಕ ರಾಜ್ಯದಲ್ಲಿ ಪ್ರತಿಬಿಂಬಿಸುವಂಥ ಜಿಲ್ಲೆಯಾಗಿದೆ. ಅನೇಕ ಮಹನೀಯರು ಈ ಜಿಲ್ಲೆಯಿಂದ ಬಂದವರೇ ಆಗಿದ್ದಾರೆ. ತಮಗೆ ಗೊತ್ತಿರುವ ಹಾಗೆ ಸರ್. ಎಂ.ವಿಶ್ವೇಶ್ವರಯ್ಯನವರು ಇಡೀ ಕರ್ನಾಟಕದ ಘನತೆಯನ್ನು ಎತ್ತಿ ರಾಷ್ಟ್ರದಲ್ಲಿ, ಅಂತರರಾಷ್ಟ್ರ ಮಟ್ಟದಲ್ಲಿ ಒಳ್ಳೆಯ ಹೆಸರನ್ನು ತಂದುಕೊಟ್ಟು, ಕರ್ನಾಟಕದ ಜನತೆಯನ್ನು ಸಂತೋಷದಲ್ಲಿ ರಿಸುವುದಕ್ಕಾಗಿ ಮೈಸೂರುನಗರದಲ್ಲಿ ಕನ್ನಾಂಬಾಡಿ ಕಟ್ಟೆಯನ್ನು ಕಟ್ಟಿಸಿ ಆ ಒಂದು ಸ್ಥಳದ ಜನರು ಸಂತೋಷದಲ್ಲಿ ಮೈಮರೆಯುವಂಥ ಒಂದು ಪರಿಸ್ಥಿತಿಯನ್ನು ಸರ್.ಎಂ.ವಿಶ್ವೇಶ್ವರಯ್ಯನವರು ತಂದು ಕೊಟ್ಟಿದ್ದಾರೆ.

ಕೋಲಾರ ಜಿಲ್ಲೆಯಲ್ಲಿ ರೈತರು ಕಂಗಾಲಾಗಿ ಅಳುವಂತಹ ಪರಿಸ್ಥಿತಿ ಒದಗಿ ಬಂದಿದೆ, ಗಡಿನಾಡು ಪ್ರದೇಶದಲ್ಲಿ ಕರ್ನಾಟಕ ಸರ್ಕಾರದಿಂದ ಯಾವುದೇ ತರಹದ ಸೌಕರ್ಯಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಒದಗಿಸದೇ ಇವತ್ತು ರೈತರು ನಷ್ಟವನ್ನು ಅನುಭವಿಸುತ್ತಿದ್ದಾರೆ. ಮೊನ್ನೆ ಕೂಡ ನಾನು ಚುನಾವಣೆ ಸಂದರ್ಭದಲ್ಲಿ ಪ್ರತಿ ಹಳ್ಳಿಗಳಿಗೆ ಭೇಟಿ ಕೊಟ್ಟಾಗ ನನ್ನ ಗಮನಕ್ಕೆ ಬಂದಿದ್ದು, ಅಲ್ಲಿ ಮಳೆ ಇಲ್ಲದೇ ರೈತರು ಕಂಗಾಲಾಗಿದ್ದಾರೆ, ಬೆಳೆಗಳು ನಷ್ಟವಾಗಿದೆ, ಕುಡಿಯುವುದಕ್ಕೆ ನೀರು ಇಲ್ಲ, ಆಸ್ಪತ್ರೆಗಳಲ್ಲಿ ವೈದ್ಯರು ಇಲ್ಲ, ಇಂತಹ ಒಂದು ಪರಿಸ್ಥಿತಿಯನ್ನು ಎದುರಿಸುತ್ತಾ, ನಮ್ಮ ರೈತರು ಕಣ್ಣೀರು ಇಡುವಂತಹ ಸಂಭವ ಹೆಚ್ಚಾಗಿದೆ. ದಿ॥ರಾಜೀವ್‌ಗಾಂಧಿಯವರು ಬಾಗೇಪಲ್ಲಿ ಕ್ಷೇತ್ರಕ್ಕೆ ಭೇಟಿ ಕೊಟ್ಟಾಗ ಈ ಕ್ಷೇತ್ರದ ಪರಿಸ್ಥಿತಿಕಂಡು ದುಃಖಿತರಾಗಿ ಇದನ್ನು "ಬರಪೀಡಿತ ಪ್ರದೇಶ" ಎಂದು ಘೋಷಣೆ ಮಾಡಿದ್ದನ್ನು ಈ ಸಂದರ್ಭದಲ್ಲಿ ಸದನದಕ್ಕೆ ನೆನಪಿಸಲು ಇಷ್ಟಪಡುತ್ತೇನೆ. ಹಾಗೇಯ, ಈಗಲೂ, ಸಹ ಮಾನ್ಯ ಮುಖ್ಯಮಂತ್ರಿಗಳ ಬಾಗೇಪಲ್ಲಿ ಕ್ಷೇತ್ರವನ್ನು ಬರಪ್ರದೇಶವೆಂದು ಘೋಷಣೆ ಮಾಡಬೇಕೆಂದು ಈ ಸದನದ ಮೂಲಕ ಕೇಳಿಕೊಳ್ಳುತ್ತೇನೆ.

ಇಲ್ಲಿನ ಕುಡಿಯುವ ನೀರಿನ ಪರಿಸ್ಥಿತಿ ಕೂಡ ಬಹಳ ಹದಗೆಟ್ಟಿದೆ ಕುಡಿಯುವ ನೀರು ಇದ್ದರೂ ಸಹ ಆ ನೀರಿನಲ್ಲಿ ಫ್ಲೋರೆಸಿಸ್ ಎಂಬ ಒಂದು ವಿಷಯುಕ್ತ ಅಂಶ ಹೆಚ್ಚಾಗಿ ಕುಡಿಯುವ ನೀರೂ ಸಹ ಅಲ್ಲಿ ವಿಷವಾಗಿ ಪರಿವರ್ತನೆ ಆಗಿದೆ.

ಫ್ಲೋರೇಸಿಸ್ ಅಂಶವನ್ನು ಈ ನೀರಿನಿಂದ ಬೇರ್ಪಡಿಸಿ, ಈ ಪ್ರದೇಶದಲ್ಲಿ ದೊರೆಯುವ

ನೀರನ್ನು, ಕುಡಿಯಲು ಯೋಗ್ಯವಾದ ನೀರನ್ನಾಗಿ ಮಾಡಲು ಯಾವುದಾದರೂ ಯೋಜನೆಯನ್ನು ಮಾನ್ಯ ಸರ್ಕಾರ ಕೈಗೊಂಡ ಬಗ್ಗೆ ಯಾವುದೇ ವಿಷಯ ಪ್ರಸ್ತಾವನೆಯನ್ನು ಈ ಪುಸ್ತಕದಲ್ಲಿ ನಾನು ಕಾಣುತ್ತಿಲ್ಲ.

ರಾಜ್ಯಪಾಲರ ಭಾಷಣದಲ್ಲಿ ಇವೆಲ್ಲಾ ಅಂಶಗಳನ್ನು ನೋಡೆದ್ದೇನೆಯೇ ಹೊರತು ಕಾರ್ಯರೂಪಕ್ಕೆ ಈವರೆಗೂ ಬಂದಿಲ್ಲ ಎಂದು ಈ ಸಭೆಯ ಮೂಲಕ ತಿಳಿಸುವುದಕ್ಕೆ ನಾನು ವಿಷಾದಿಸುತ್ತೇನೆ. ಬಾಗೇಪಲ್ಲಿ ಮತ್ತು ಅದರ ಸುತ್ತ ಮುತ್ತ ಇರುವಂತಹ ಗ್ರಾರಮಾಂತರ ಪ್ರದೇಶಗಳು ಬಹಳ ಭಯಭೀತಿಯಲ್ಲಿ ರತಕ್ಕತಂಹ ಒಂದು ಪರಿಸ್ಥಿತಿ ಇದೆ. ಪೋಲೀಸ್ ಸಿಬ್ಬಂದಿ ಸಾಕಷ್ಟು ಸಂಖ್ಯೆಯಲ್ಲಿ ಅಲ್ಲಿ ಇಲ್ಲದೆ, ಜನ ಒಂದು ರೀತಿ ಭಯಸ್ಥರಾಗಿ ಅಲ್ಲಿಂದ ವಲಸೆ ಹೋಗುವಂತಹ ಸಂದರ್ಭಗಳು ಹೆಚ್ಚಾಗಿದೆ. ಇದೆಲ್ಲದಕ್ಕೂ ಕಾರಣ ಏನು.

ಅಂದರೆ ನಮ್ಮಲ್ಲಿನ ಗೃಹ ಇಲಾಖೆಯಲ್ಲಿನ ಪೋಲೀಸ್ ಸಿಬ್ಬಂದಿಯನ್ನು ಹೆಚ್ಚಿಗೆ ಮಾಡಬೇಕಾಗುತ್ತದೆ. ಅಲ್ಲಿ ಔಟ್‌ಪೋಸ್ಟ್‌ಗಳು ಇಲ್ಲ, ಏನೋ ಓಬೀರಾಯನ ಕಾಲದಲ್ಲಿ ಕೊಟ್ಟಂತಹ ಒಂದು ಪೋಲೀಸ್ ಸಿಬ್ಬಂದಿಯ ಸಂಖ್ಯೆಎನಿತ್ತೋ, ಅಷ್ಟೇ ಸಿಬ್ಬಂದಿಯ ಸಂಖ್ಯೆ ಇವತ್ತೂ ಇದೆ. ಇವತ್ತು ಗಡಿ ಪ್ರದೇಶವಾದ ಬಾಗೇಪಲ್ಲಿ ಕ್ಷೇತ್ರ "ನಕ್ಸಲೈಟ್ಸ್‌ಗಳು" ಪ್ರಭಾವ ಇರತಕ್ಕಂತಹ ಒಂದು ಸೂಕ್ಷ್ಮ ಪ್ರದೇಶ. ಇಂತಹ ಒಂದು "ನಕ್ಸಲೈಟ್ "ಗಳ ಏರಿಯಾದಲ್ಲಿ ಪೋಲೀಸ್ ಸಿಬ್ಬಂದಿ ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲದೆ, ದಿನ ಅಲ್ಲಿ ಲಗಭೆಗಳು ನಡೆಯುತ್ತಿದೆ. ದಿನ ನಿತ್ಯ ಕೊಲೆಗಳು ಸಹ ಆಗುತ್ತದೆ. ಇಂತಹ ಒಂದು ಕಳವಳಕಾರಿ ಪರಿಸ್ಥಿತಿಯನ್ನು ಹತೋಟಿಗೆ ತರುವುದಕ್ಕೆ, ಅರ್ಥಾತ್ ನಿರ್ಮೂಲನ ಮಾಡುವುದಕ್ಕೆ, ಮಾನ್ಯ ಗೃಹ ಇಲಾಖೆಯವರು ಆದಷ್ಟೂ ಬೇಗನೆ, ಅಲ್ಲಿಗೆ ಪೋಲೀಸ್ ಸಿಬ್ಬಂದಿಯನ್ನು ಹೆಚ್ಚಿಸಿ, ಸೂಕ್ತ ಅಧಿಕಾರಿಗಳನ್ನು ನೇಮಕ ಮಾಡಬೇಕು. ಇನ್ನು ಇಲ್ಲಿನ ಪೋಲೀಸ್ ಇಲಾಖೆಗೆ ಸೂಕ್ತವಾದ ವಾಹನಗಳು ಇಲ್ಲ, ಇವತ್ತು ಅವರಿಗೆ ಕೊಟ್ಟಿ ರುವಂತಹ ಜೀಫ್‌ಗಳು ಇವೆ. ಆದರೂ ಕೂಡ ತುರ್ತಾಗಿ ಯಾವುದೇ ಒಂದು ಕಡೆ ಗಲಾಟೆ ಆಗುತ್ತಿದೆ ಎಂಬ ಕರೆಗಳು ಬಂದರೆ, ಆ ಗಲಭೆ ಪೀಡಿತ ಪ್ರದೇಶಕ್ಕೆ ಬೇಗನೆ ಭೇಟಿಕೊಡಲು ಈ ಜೀಪ್‌ಗಳಲ್ಲಿ ಆಗುತ್ತಿಲ್ಲ. ಕೆಟ್ಟು ಹೋಗಿರುವಂತಹ ಜೀಪ್‌ಗಳು ಇಲ್ಲಿ ನಿಂತಿವೆ. ಇಂತಹ ಒಂದು ಸ್ಥಳಗಳನ್ನು ನೀವು ಗುರುತಿಸಿ ಪೋಲೀಸ್ ಸಿಬ್ಬಂದಿಯ ಸಂಖ್ಯೆಯನ್ನು ಹೆಚ್ಚಿಸಬೇಕು ಮತ್ತು ಸೂಕ್ತದಾದ ವಾಹನಗಳನ್ನು ಹೆಚ್ಚಿಗೆ ಕೊಡಬೇಕು. ಈ ಸಂದರ್ಭದಲ್ಲಿ ನಮ್ಮ ಗಮನಕ್ಕೆ ನಾನು ತರಬೇಕೆಂಬುದು ಏನೆಂದರೆ, ಬೆಂಗಳೂರಿನಲ್ಲಿ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ರೋಷನ್ ಬೇಗ್ ಅವರು ಗೃಹಮಂತ್ರಿಗಳಾಗಿದ್ದ ಕಾಲದಲ್ಲಿ ಇಲ್ಲಿನ ಗಲಭೆಗಳನ್ನು ನಿಯಂತ್ರಿಸಲು ಹೊಯ್ಸಳ ಎಂಬ ಗಸ್ತು ತಿರುಗುವ ವಾಹನಗಳನ್ನು ಎಲ್ಲಾ ಪೋಲೀಸ್ ಠಾಣೆಗಳಿಗೂ ಕೊಟ್ಟಿದರು. ಅದೇತರಹ ಅಂತಹ ವಾಹನಗಳನ್ನೇ ನಮ್ಮ ಗಡಿನಾಡು ಪ್ರದೇಶಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಕೊಟ್ಟು, ಗಡಿನಾಡುಪ್ರದೇಶದಲ್ಲಿ ಆಗುವಂತಹ ಹಿಂಸಾಚಾರ ಮತ್ತು ನಕ್ಸಲ್‌ವಾದಿಗಳ ಹಾವಳಿಯನ್ನು ನಿಯಂತ್ರಣಕ್ಕೆ ತರಲು ಅನುವು ಮಾಡಿಕೊಡಬೇಕು ಎಂದು ಈ ಸಭೆಯ ಮೂಲಕ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರಲು ಇಚ್ಛಿಪಡುತ್ತೇನೆ.

ಅಧ್ಯಕ್ಷರೇ, ನಾವು ಸ್ವತಂತ್ರವಾಗಿ ಈ ಸದನದಕ್ಕೆ ಆಯ್ಕೆ ಆಗಿ ಬಂದಿದ್ದೇವೆ ಸ್ವತಂತ್ರವಾಗಿ ಆಯ್ಕೆ ಆಗಿ ಬಂದವರು ಎಂದರೇ, ಒಂದು ರೀತಿ ತಬ್ಬಲಿಗಳು ಇದ್ದ ಹಾಗೆ, ನಾವೂಕೂಡ ಅದೇ

ಪರಿಸ್ಥಿತಿಯಲ್ಲಿದ್ದೇವೆ. ನೀವುಗಳು, ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ /ಯಾವುದೇ ರೀತಿಯಲ್ಲಿ ನಮಗೆ ಮೋಸವನ್ನು ಮಾಡದೇ ಸರ್ಕಾರದ ಅಭಿವೃದ್ಧಿ ವಿಚಾರದಲ್ಲಿ ತಾರತಮ್ಯ ಮಾಡದೇ, ನಮ್ಮ ಶಾಸಕರುಗಳಿಗೆ ಕ್ಷೇತ್ರದ ಅಭಿವೃದ್ಧಿ ಕೆಲಸಗಳನ್ನು ಮಾಡಲು ನ್ಯಾಯವಾಗಿ ಏನು ಕೊಡಬೇಕೋ, ಅದನ್ನು ನ್ಯಾಯವಾಗಿ ಕೊಡಬೇಕು ಎನ್ನುವುದನ್ನು ಇವತ್ತು ಈ ಸಭೆಯ ಮೂಲಕವಾಗಿ ತಮಗೆ ಕೇಳಲು ಇಚ್ಛಿಪಡುತ್ತಿದ್ದೇನೆ. ನಮ್ಮ ಜಿಲ್ಲಾ ಮಂತ್ರಿಗಳು ಇರಬಹುದು ಅಥವಾ ಮಾನ್ಯ ಮುಖ್ಯಮಂತ್ರಿಗಳು ಇರಬಹುದು. ಒಂದು ವೈಮನಸ್ಸಿನಿಂದ ಇವತ್ತು ಕ್ಷೇತ್ರಗಳಿಗೆ ಕೈಹಾಕುವಂತಹ ಪರಿಸ್ಥಿತಿಕೂಡ ಇರುತ್ತದೆ. ಅದಕ್ಕೆ ಈ ಒಂದು ಸಭೆಯ ಮೂಲಕ ಗಮನಕ್ಕೆ ತರತ್ತಿದ್ದೇನೆ. ಸ್ವತಂತ್ರವಾಗಿ ಬಂದಂತಹ ಶಾಸಕರುಗಳಿಗೆ ಎಲ್ಲಾ ತರಹದ ಸಹಾಯಗಳನ್ನು ಮಾಡಿ ಕ್ಷೇತ್ರದ ಅಭಿವೃದ್ಧಿಗೆ ತಾವುಗಳು ಸಹಾಯ ಮಾಡುತ್ತೀರಿ ಎಂಬ ನಂಬಿಕೆಯನ್ನು ಈ ಸಭೆಯ ಮೂಲಕ ತಮ್ಮಗಳಿಗೆ ತಿಳಿಸಲು ಇಚ್ಛಿಪಡುತ್ತಿದ್ದೇನೆ. ಮತ್ತು ನಾನು ಈ ಹಿಂದೆ ಸ್ಪೋರ್ಟ್ಸ್ ಕೌನ್ಸಿಲ್‌ನ ಅಧ್ಯಕ್ಷನಾಗಿದ್ದೆ. ಆ ಸಂದರ್ಭದಲ್ಲಿ ರಾಷ್ಟ್ರೀಯ ಕ್ರೀಡೆಗಳನ್ನು ನಡೆಸುವ ಜವಾಬ್ದಾರಿಯನ್ನು ಕರ್ನಾಟಕ ರಾಜ್ಯಕ್ಕೆತಂದು ಕೊಟ್ಟಿದ್ದೆವು. ಆಗ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿತ್ತು. ಆ ಒಂದು ಕಾಂಗ್ರೆಸ್ ಸರ್ಕಾರದ ವತಿಯಿಂದ ರಾಷ್ಟ್ರೀಯ ಕ್ರೀಡೆಗಳು ಕರ್ನಾಟಕ್ಕೆ ಬಂತು. ಅಂತಹ ಒಂದು ರಾಷ್ಟ್ರೀಯ ಕ್ರೀಡೆಗಳನ್ನು ನಡೆಸುವ ಜವಾಬ್ದಾರಿಯನ್ನು ಕರ್ನಾಟಕ್ಕೆ ತಂದಾಗ ಕೆಲವು ಕಾರಣಾಂತರಗಳಿಂದ ಕಾಂಗ್ರೆಸ್ ಪಕ್ಷದ ಸರ್ಕಾರದ ಹೋಯಿತು. ನಂತರ ಬಂದ ಜನತಾದಳ ಸರ್ಕಾರ ಆ ರಾಷ್ಟ್ರೀಯ ಕ್ರೀಡೆಗಳನ್ನು ನಡೆಸುವಾಗ, ಯಾವ ಒಂದು ಪಕ್ಷದಿಂದ ಅಥವಾ ಸರ್ಕಾರದ ವತಿಯಿಂದ ರಾಷ್ಟ್ರೀಯ ಕ್ರೀಡೆಗಳು ಬಂತೋ, ಅಂತಹವರನ್ನೇ ದೂರವಿಟ್ಟು ರಾಷ್ಟ್ರೀಯ ಕ್ರೀಡೆಗಳನ್ನು ನಡೆಸಿದ್ದು ನಮ್ಮೆಲ್ಲರಿಗೂ ನೋವನ್ನು ಉಂಟು ಮಾಡಿತು, ಆ ಒಂದು ರಾಷ್ಟ್ರೀಯ ಕ್ರೀಡೆಗಳನ್ನು ತಂದಾಗ ನನಗೆ ತಿಳಿದ ಮಟ್ಟಿಗೆ ಸಮಾರು 140 ಕೋಟಿ ರೂಪಾಯಿಗಳನ್ನು ವೆಚ್ಚದಲ್ಲಿ ಒಂದು ಸ್ಟೇಡಿಯ ಮತ್ತು ಇಂಡೋರ್ ಸ್ಟೇಡಿಯಂ ಇವೆಲ್ಲಾ ಕೂಡ ಆಗಿದೆ. ಆದರೆ ಇವತ್ತು ಆವುಗಳನ್ನು ಯಾವ ತರಹ ಹತೋಟಿಯಲ್ಲಿ ಇಟ್ಟು ಕೊಂಡಿದ್ದಾರೇ? ಆ ಒಂದು ಕಾರ್ಯದಲ್ಲಿ ಏನು ನಡೆಯುತ್ತಿದೆ? ಆ ಒಂದು ಸ್ಟೇಡಿಯಂಯನ್ನು ಯಾವ ರೀತಿ ಉಪಯೋಗಿಸುತ್ತಿದ್ದಾರೆ, ಅದನ್ನು ಇರತ್ತು ನಮ್ಮ ಗಮನಕ್ಕೆ ತಂದಿಲ್ಲ, ಇವತ್ತು ಈ ಪುಸ್ತಕವನ್ನು ಸಹ ನಾನು ನೋಡಿದ್ದೇನೆ. ನಮ್ಮ ರಾಜ್ಯಪಾಲರ ಭಾಷಣ ಕೇಳಿದ್ದೇನೆ, ಎಲ್ಲರಿಗೂ ಕೂಡ ಅವಕಾಶಗಳನ್ನು ಕೊಟ್ಟಿದ್ದಾರೆ. ಆದರೆ ನಮ್ಮ ಜನತೆಗೆ, ಕ್ರೀಡಾ ಪಟುಗಳಿಗೆ ಯಾವ ರೀತಿಯ ಸೌಕರ್ಯಗಳನ್ನು ಕೊಟ್ಟಿದ್ದೇವೆ? ಕ್ರೀಡಾ ಪಟುಗಳನ್ನು ಯಾವ ರೀತಿಯಲ್ಲಿ ಮುಂದೆ ತರುತ್ತೇವೆ ಎಂಬಂತಹ ವಿಚಾಠ ಕೊಟ್ಟಿಲ್ಲ. ನಿಜವಾಗಿಯೂ ಬೇಸರ ಆಗುತ್ತದೆ. ಇವತ್ತು ಯುವ ಜನತೆಯಿಂದ, ಯುವಕರಿಂದ ನಾವು ಅಧಿಕಾರವನ್ನು ಹಿಡಿಯುತ್ತೇವೆ, ಅಧಿಕಾರಕ್ಕೆ ಬಂದ ನಂತರ ನಾವು ಯುವ ಜನತೆಗೆ, ಕ್ರೀಡಾ ಪಟುಗಳಿಗೆ ಯಾವ ರೀತಿಯ ಸವಲತ್ತುಗಳನ್ನು ಕೊಡಬೇಕು ಎಂಬುದನ್ನು ಮರೆಯುತ್ತೇವೆ. ಇಂತಹ ಒಂದು ವಿಚಾರವನ್ನು ಗಮನಕ್ಕೆ ತರುತ್ತಿದ್ದೇನೆ. ಇನ್ನು ಮುಂದಾದರೂ ನೀವು ವಿಚಾರ ಮಾಡಿ, ನಮ್ಮ ಕರ್ನಾಟಕಕ್ಕೆ ನಿಜವಾಗಿಯೂ ಒಂದು ದೊಡ್ಡ ಅಸೆಟ್ ಎಂದರೆ ಗೇಮ್ಸ್‌ಗಳ ಸ್ಟೇಡಿಯಂಗಳು.

ಇವತ್ತು ನಾನು ಪೇಪರ್‌ನಲ್ಲಿ ಓದಿದ್ದೇನೆ. ಆಕ್ರೀಡಾಂಗಣಗಳು ಮಳೆಗಳಿಂದ ಇವತ್ತು

ಕೂಡ ಸೋರುತ್ತಿವೆ ಮತ್ತು ಸರಿಯಾಗಿ ಕಾಮಗಾರಿ ಕೆಲಸಗಳು ಆಗದೇ ಅವು ಕಳಚಿ ಹೋಗುವಂತಹ ಸಂದರ್ಭಗಳು ಇವೇ ಎಂದು. ಇಂತಹ ಒಂದು ಪರಿಸ್ಥಿತಿಯನ್ನು ಗಮನದಲ್ಲಿಟ್ಟು ಕೊಂಡು: ಅದೊಂದೇ ಆಸ್ತಿ ಕ್ರೀಡಾ ಪಟುಗಳಿಗಿರುವುದು; ಅದನ್ನು ಉಳಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಮಾನ್ಯ ಕ್ರೀಡಾ ಮಂತ್ರಿಗಳಲ್ಲಿ ಕೇಳಿ ಕೊಳ್ಳುತ್ತಿದ್ದೇನೆ ಮತ್ತು ಮಾನ್ಯ ಮುಖ್ಯಂತ್ರಿಗಳ ಗಮನಕ್ಕೆ ಈ ವಿಷಯವನ್ನು ತರುತ್ತಿದ್ದೇನೆ. ನಾನು ಈ ಒಂದು ಅವಕಾಶವನ್ನು ಹೆಚ್ಚಿಗೆ ಉಯೋಗಿಸದೇ, ನನ್ನ ಕ್ಷೇತ್ರದ ಜನತೆಯ ಪರವಾಗಿ ತಮಗೆ ಮತ್ತೊಮ್ಮೆ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸಿ ನನ್ನ ಈ ಮಾತುಗಳನ್ನು ಮುಕ್ತಾಯ ಗೊಳಿಸುತ್ತೇನೆ.

ಜೈ ಹಿಂದ್, ಜೈ ಕರ್ನಾಟಕ

ಛೇರ್ಮನ್: ಈ ದಿನದ ಸದನದ ಕಾರ್ಯಕಲಾಪಗಳು ಮುಕ್ತಾಯವಾಯಿತು ಕಲಾಪವನ್ನು ಮುಂದೂಡುತ್ತಿದ್ದೇನೆ. ಸದನದ ಕಾರ್ಯಕಲಾಪದ ನಾಳೆ ಬೆಳಿಗ್ಗೆ 10 ಗಂಟೆಗೆ ಸೇರುತ್ತದೆ.

(ವಿಧಾನ ಸಭೆಯ ಕಾರ್ಯಕಲಾಪವು 6.08ಕ್ಕೆ ಮುಕ್ತಾಯಗೊಂಡು ಮತ್ತೆ ದಿನಾಂಕ 30.10.1999ರ ಶನಿವಾರ ಸಮಾವೇಶ ಗೊಳ್ಳಲು ನಿಶ್ಚಯಿಸಿತು)

* * * *

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ)